ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ
### ಎಂ.ಎ. (ಪ್ರಥಮ)

# ಚೀನಾ – ಜಪಾನ್ ಇತಿಹಾಸ ಹಕ್ಕೊತ್ತಾಯ
# ಮಿತ್ರ ಆಳ್ವಿಕೆ ಬಾಕ್ಸರ್ ದಂಗೆ
# ಸನ್‌ಯಾತ್ ಸೇನ್
# ಮೆಯಿಝಿ ಪುನರ್ ಸ್ಥಾಪನೆ
# ಮಂಚೂಕೊ

ಕೋರ್ಸ್ – 5

ಬ್ಲಾಕ್ – 2

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 5

ಬ್ಲಾಕ್

# 2

ಘಟಕ - 131
ಪ್ರಭಾವಿ ವಲಯಗಳ ಉದ್ಭವ

ಘಟಕ - 132
1894 - 95 ಚೀನಾ - ಜಪಾನ್ ಯುದ್ಧ

ಘಟಕ - 133
ನೂರು ದಿವಸಗಳ ಸುಧಾರಣೆಗಳು

ಘಟಕ - 134
ಪಾಶ್ಚಾತ್ಯೀಕರಣ ಮತ್ತು ಚೀನಿಯರ ಪ್ರತಿಕ್ರಿಯೆ - ಬಾಕ್ಸರ್ ದಂಗೆ

ಘಟಕ - 135
ತೆರೆದ ಬಾಗಿಲ ನೀತಿ ಮತ್ತು ಅದರ ಪ್ರಭಾವ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

ಪ್ರೊ. ಎಂ.ಜಿ. ಕೃಷ್ಣನ್
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*

## ಪಠ್ಯಕ್ರಮ ನಿರೂಪಕರು

***ಘಟಕ ಬರೆದವರು***
**ಡಾ. ಷಡಾಕ್ಷರಯ್ಯ**
**ಪ್ರಾಧ್ಯಾಪಕರು,**
**ಇತಿಹಾಸ ವಿಭಾಗ**
**ಬೆಂಗಳೂರು ವಿಶ್ವವಿದ್ಯಾನಿಲಯ**
**ಬೆಂಗಳೂರು.**

**ಘಟಕಗಳು 131 ರಿಂದ 135**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2013

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೯ - 5

## ಬ್ಲಾಕ್ - 2

### ಪೀಠಿಕೆ

## ಚೀನಾ ಮತ್ತು ಜಪಾನ್ - 1839 ರಿಂದ

ಪತ್ರಿಕೆ ಐದರ ಎರಡನೆಯ ಬ್ಲಾಕಿನಲ್ಲಿ 19ನೇ ಶತಮಾನದಲ್ಲಿನ ಚೀನಾದ ರಾಜಕೀಯ ಬೆಳವಣಿಗೆಗಳನ್ನು ಒಟ್ಟಾರೆ ಅಭ್ಯಾಸ ಮಾಡಲಿದ್ದು ಅದರಲ್ಲೂ 1860 ದಶಕದ ನಂತರದ ಬೆಳವಣಿಗೆಗಳು ಚೀನಾದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಭಾವಿ ವಲಯಗಳ ಸೃಷ್ಟಿ, ಏಷ್ಯಾದಲ್ಲಿ ಆಗತಾನೆ ಪಾಶ್ಚಿಮಾತ್ಯರನ್ನು ಅನುಕರಿಸಲು ಪ್ರಾರಂಭಿಸಿದ ಜಪಾನಿನ ಹಿರಿಯಾಸ ಪರಿಣಾಮವಾಗಿ 1894-95ರ ಚೀನಾ -ಜಪಾನ್ ಯುದ್ಧ, ಮಂಚೂಗಳು ತಮ್ಮ ಅಸ್ತಿತ್ವವನ್ನು ಉಳಿಸಿ, ಪುನಃಸ್ಥಾಪಿಸುವ ಪ್ರಯತ್ನ, ಅದಕ್ಕಾಗಿ ಅವರು ಕೈಗೊಂಡ ನೂರು ದಿವಸಗಳ ಸುಧಾರಣಯತ್ನವನ್ನು ಅಭ್ಯಾಸ ಮಾಡುವಿರಿ. ಅಲ್ಲದ ಐರೋಪ್ಯ ರಾಷ್ಟ್ರಗಳು ರೂಢಿಸಿಕೊಂಡ ಹಿತಾಸಕ್ತಿಗಳು ಮುಖ್ಯವಾಗಿ ರಾಜಕೀಯ ಆರ್ಥಿಕ ಮತ್ತು ಧಾರ್ಮಿಕ ನೆಲೆಗಳಲ್ಲಿ ಐರೋಪ್ಯರು ಚೀನಾವನ್ನು ಪಾಶ್ಚಾತೀಕರಣಗೊಳಿಸುವ ಪ್ರಯತ್ನ. ಅದಕ್ಕೆ ಪ್ರತಿಯಾಗಿ ಚೀನಿಯ ಯುವಜನತೆ ಸ್ಪಂದಿಸಿ, ಪ್ರತಿಕ್ರಿಯಸಿದ ರೀತಿ, ಪರಿಣಾಮವಾಗಿ ಉಂಟಾದ ಬಾಕ್ಸರ್ ದಂಗೆ ಮತ್ತು ಅಮರಿಕನ್ನರ ಹಿತಾಸಕ್ತಿಯನ್ನು ಬೆಂಬಲಿಸಿಕೊಂಡ ತೆರೆದ ಬಾಗಿಲ ನೀತಿ ಹಾಗೂ ಚೀನಾದ ಮೇಲೆ ಅದರಿಂದಾದ ಪರಿಣಾಮಗಳನು ಈ ಬ್ಲಾಕ್‌ನಲ್ಲಿ ಅಭ್ಯಾಸ ಮಾಡುವಿರಿ.

ಮೊದಲ ಯೂನಿಟ್ 131ರಲ್ಲಿ ನೀವು ಅಭ್ಯಾಸಿ ಮಾಡಲಿರುವ ವಿವರಗಳು : ಚೀನಿಯರ ಮಂಚೂ ರಾಜ್ಯ ಮತ್ತು ರಾಷ್ಟ್ರ ಭಾಗಗಳಲ್ಲಿ ರಷ್ಯಾವನ್ನು ಒಳಗೊಂಡಂತೆ ಐರೋಪ್ಯ ರಾಷ್ಟ್ರಗಳಾದ ಆಸ್ಟ್ರಿಯಾ, ಫ್ರಾನ್ಸ್, ಜರ್ಮನಿ, ಗ್ರೇಟ್ ಬ್ರಿಟನ್ ಮತ್ತು ಏಷ್ಯಾದಲ್ಲಿ ಆಗ ತಾನೇ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದ ಜಪಾನ್ ಕೂಡ ತಮ್ಮ ಹಿತಾಸಕ್ತಿಯನ್ನು ಬೆಳೆಯಿಸಿಕೊಂಡಿದ್ದವು. ಅಲ್ಲದೆ ತಮ್ಮ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ರಾಜಕೀಯ ಹಿಡಿತ ಸಾಧಿಸುವುದು ಐರೋಪ್ಯರಿಗೆ ಅನಿವಾರ್ಯವಾಗಿತ್ತು. ಹಾಗಾಗಿ ಚೀನಾದ ಪ್ರದೇಶಗಳಲ್ಲಿ ತಮ್ಮ ಪ್ರಭಾವಿ ವಲಯಗಳನ್ನು ಸ್ಥಾಪಿಸಿಕೊಂಡವು. ಹಾಗೂ ಒಪಿಯಂ ಕದನಗಳಲ್ಲಿ ಮಂಚೂ ಅರಸರ ದುರ್ಬಲತೆ ಪ್ರಕಟಗೊಂಡಿದ್ದು, ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಐರೋಪ್ಯರು, ಚೀನಿಯರ ಜೊತೆ ಅಸಮ ಒಪ್ಪಂದಗಳನ್ನು ಮಾಡಿಕೊಂಡು ರಾಜಕೀಯ ಆರ್ಥಿಕ ಮತ್ತು ಧಾರ್ಮಿಕವಾಗಿ ಚೀನಾವನ್ನು ಬಳಸಿಕೊಂಡಿದ್ದರು. ಚೀನಿ ಮಂಚೂ ಪ್ರಭುತ್ವ ದುರ್ಬಲವಾಗಿದ್ದು ಕಾರಣ, ಐರೋಪ್ಯರನ್ನು ತಡೆಯಲು ಅದು ನಡೆಸಿದ ಎಲ್ಲ ಪ್ರಯತ್ನಗಳು ಒಟ್ಟಾರೆ ವಿಫಲವಾದವು. ಎಲ್ಲ ಈ ಅಂಶಗಳನ್ನು ಯೂನಿಟ್ 131ರಲ್ಲಿ ತಿಳಿಯುವಿರಿ.

ಯೂನಿಟ್ 132ರಲ್ಲಿ ನೀವು ತಿಳಿಯುವ ಮತ್ತು ಅಧ್ಯಯನ ಮಾಡುವ ವಿಷಯದ ವಿವರಗಳು :1894 - 95 ಚೀನಾ - ಜಪಾನ್ ಯುದ್ಧ, ಏಷ್ಯಾದಲ್ಲಿ ಅದರ ಪ್ರಾಮುಖ್ಯತೆ, ಯುದ್ಧಕ್ಕೆ ಕಾರಣಗಳು. ಯುದ್ಧದ ಘಟನೆ, ಷಿಮನೋಸಕಿ ಒಪ್ಪಂದ ಮತ್ತು ಅದರ ಪರಿಣಾಮಗಳನ್ನು ತಿಳಿಯುವಿರಿ. 1894 - 95 ಚೀನಾ -ಜಪಾನ್ ಯುದ್ಧ ಏಷ್ಯ ರಾಷ್ಟ್ರಗಳಾದ ಚೀನಾ ಮತ್ತು ಜಪಾನಿನ

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

ಚರಿತ್ರೆಯಲ್ಲಿ ಪ್ರಮುಖವಾದ ಘಟನೆ. ಅಷ್ಟೇ ಅಲ್ಲದೆ ಪ್ರಪಂಚದ ಇತಿಹಾಸದಲ್ಲಿಯೇ ಒಂದು ಗಣನೀಯವಾದ ಮತ್ತು ಅಂತರರಾಷ್ಟ್ರೀಯ ಸಂಬಂಧಗಳನ್ನು ರೂಢಿಸುವಲ್ಲಿ ಪ್ರಮುಖ ತಿರುವು ಎಂದೆ ಹೇಳಬಹುದು. ಏಷ್ಯಾದಲ್ಲಿನ ಪ್ರಮುಖ ರಾಷ್ಟ್ರಗಳಾದ ಚೀನಾ ಮತ್ತು ಜಪಾನ್ ಎರಡು ರಾಷ್ಟ್ರಗಳು ಪರಸ್ಪರ ಸೆಣಸಾಟಕ್ಕೆ ನಿಂತಿದ್ದು. ಗತಕಾಲದಿಂದಲೂ ಚೀನಾಕ್ಕೆ ಅಂಟಿಕೊಂಡೆ ಬಂದಿದ್ದಂತಹ ಕೊರಿಯಾದ ಮೇಲಿನ ಬೆಳೆದ ಜಪಾನೀ ಹಿತಾಸಕ್ತಿ ತನ್ನ ಹಿಡಿತವನ್ನು ಸಾಧಿಸಲು ಮಾಡಿದ ಪ್ರಯತ್ನ ಇದಾಗಿತ್ತು. ಅಲ್ಲದೆ ಕೊರಿಯಾದಲ್ಲಿನ ದೇಶೀಯ ದಂಗೆ; ದೇಶೀಯ ದಂಗೆಯನ್ನು ಅಡಗಿಸಲು ಕೊರಿಯಾ ಅಸಫಲವೆಂದು ಪರಿಗಣಿಸಿ ಚೀನಾದ ಸೈನ್ಯದ ಸಹಾಯವನ್ನು ಕೊರಿಯಾ ಕೇಳಿದ್ದು, ಆ ವೇಳೆಗಾಗಲೆ ಕೊರಿಯಾದಲ್ಲಿ ಹಿತಾಸಕ್ತಿಯನ್ನು ಹೊಂದಿದ್ದ ಜಪಾನ್ ಕೂಡ ಕೊರಿಯಾದ ಸಹಾಯಕ್ಕೆ ಮುಂದೆ ಬಂದಿತ್ತು. ದಂಗೆಯನ್ನು ಕೊರಿಯಾ ಸರ್ಕಾರ ಅಡಗಿಸಿದ ನಂತರ ಚೀನಾ ಮತ್ತು ಜಪಾನ್ ಸೈನ್ಯವನ್ನು ಜಪಾನ್ ತನ್ನ ಹಿತಾಸಕ್ತಿಯನ್ನು ಉಳಿಸಿಕೊಳ್ಳಲು ಚೀನಾದ ವಿರುದ್ಧ ಯುದ್ಧ ನಡೆಸಿತು. ಪರಿಣಾಮ, ಯುದ್ಧದಲ್ಲಿ ಚೀನಿಯರ ಸೋಲು ಮತ್ತು ಷಿಮನೋಸಕಿ ಒಪ್ಪಂದ. ಒಪ್ಪಂದದಲ್ಲಿ ಜಪಾನ್ ಚೀನಾವನ್ನು ಕರಾರುಗಳ ಮೂಲಕ ಬಂಧಿಸಿತು. ಈ ಎಲ್ಲ ವಿವರಗಳನ್ನು 132ರ ಯೂನಿಟ್‌ನಲ್ಲಿ ನೀವು ಅಭ್ಯಾಸ ಮಾಡುವಿರಿ.

ಯೂನಿಟ್ 133ರಲ್ಲಿ ನೀವು ಅಭ್ಯಾಸ ಮಾಡಲಿರುವ ವಿಷಯ ಮಂಚೂ ಸರ್ಕಾರದ ನೂರು ದಿವಸಗಳ ಸುಧಾರಣಾ ಯೋಜನೆಗಳಾಗಿದ್ದು ಅದರಲ್ಲೂ ಜೂನ್ 11ರಿಂದ ಹಿಡಿದು ಸೆಪ್ಟಂಬರ್ 16, 1898ರವರೆಗಿನ ಸುಧಾರಣೆಯತ್ತ ಚೀನಾದ ಇತಿಹಾಸದಲ್ಲಿ "ನೂರು ದಿವಸಗಳ ಸುಧಾರಣೆ"ಯೆಂದು ಪ್ರಸಿದ್ಧವಾಗಿವೆ. 19ನೇ ಶತಮಾನದುದ್ದಕ್ಕೂ ಐರೋಪ್ಯರ ಉಪಟಳವನ್ನು ಎದುರಿಸುವ ಹಿನ್ನಲೆಯಲ್ಲಿ ಮಂಚೂ ಪ್ರಭುತ್ವ ವಿಫಲವಾಯಿತ್ತು. ಅದರಲ್ಲು ಉಂಡಿ ಕಲ್ಲಂಗಡಿಯಾಗಿದ್ದ ಚೀನ ಐರೋಪ್ಯರ ಆಗಮನ ವ್ಯಾಪಾರಿ ಹಿತ್ತಾಸಕ್ತಿ ಮತ್ತು ಚೀನಿಯರಿಗೆ ಕ್ಯಾನ್ಸರ್ ರೋಗವಾಗಿ ತಗುಲಿದ ಒಪಿಯಂ ದುರ್ಬಳಕ್ಕೆ ಮಂಚೂ ಪ್ರಭುತ್ವದ ದುರ್ಬಲತೆಯನ್ನು ಹೊರಹಾಕಿತು. ಮತ್ತು ಈ ಹಿನ್ನಲೆಯಲ್ಲಿ ನಡೆದ ಒಪಿಯಂ ಕದನಗಳು ಹಾಗೂ ಐರೋಪ್ಯರೊಡನೆ ಮಾಡಿಕೊಂಡ ಅಸಮ ಒಪ್ಪಂದಗಳು ಮತ್ತು ಧರ್ಮದ ಹಿನ್ನಲೆಯಲ್ಲಿ ಉಂಟಾದ ತೈಪಿಂಗ್ ದಂಗೆ ಚೀನಾದಲ್ಲಿ ಮಂಚೂ ಪ್ರಭುತ್ವದ ಅಸ್ತಿತ್ವವನ್ನು ಅಲುಗಾಡಿಸಿದ್ದವು.19ನೇ ಶತಮಾನದ ಒಟ್ಟಾರೆ ಈ ಬೆಳವಣಿಗೆಗಳೆಲ್ಲವೂ ಚೀನಿ ಜನತೆಯಲ್ಲಿ ಮಂಚೂ ಸರ್ಕಾರದ ಬಗ್ಗೆ ಅಸಮಾಧಾನವನ್ನು ಉಂಟುಮಾಡಿದ್ದು ಅದರಲ್ಲೂ ಚೀನಿ ಯುವ ಜನತೆ, ಚೀನಿಯರ ಎಲ್ಲ ಈ ದುಃಸ್ಥಿತಿಗೆ ಅಸಮರ್ಥ ಮಂಚೂಗಳೇ ಕಾರಣವೆಂದು ತಿಳಿದಿದ್ದನು. ಹಾಗಾಗಿ ಚೀನಿಯರಲ್ಲಿ ಆತ್ಮವಿಶ್ವಾಸವನ್ನು ತರಲೂ ಸಂಘ ಸುಧಾರಣ ವಾದಿಗಳು ಮತ್ತು ಸಂಪ್ರದಾಯವಾದಿಗಳ ಬೆಂಬಲಿತ ಮಂಚೂ ಸರ್ಕಾರ ನೂರು ದಿವಸಗಳ ಸುಧಾರಣೆಯನ್ನು ಜಾರಿಯಲ್ಲಿ ತಂದಿದ್ದು ಕಾಂಗ್- ಯು-ವೈಸಿಂತಾಪ ಚಿಂತಕರು ಸುಧಾರಕರು ಮತ್ತು ಸಮರ್ಥ ನಾಯಕರುಗಳು, ಚೀನಾದಲ್ಲಿ ಶಿಕ್ಷಣ, ಆರ್ಥಿಕ, ಕೈಗಾರಿಕ ಮತ್ತು ವ್ಯವಹಾರಿಕ ಕ್ಷೇತಗಳಲ್ಲಿ ಸುಧಾರಣೆ ತರುವಯತ್ನ ನಡೆಸಿದ್ದನ್ನು ನೀವು ಈ ಯೂನಿಟ್‌ನಲ್ಲಿ ತಿಳಿಯಬಹುದು.

ಯೂನಿಟ್ 134ರಲ್ಲಿ ನೀವು ಅಭ್ಯಾಸ ಮಾಡಲಿರುವ ವಿಷಯ ಚೀನಾದಲ್ಲಿ ಪಾಶ್ಚಾತೀಕರಣ ಮತ್ತು ಅದಕ್ಕೆ ಚೀನಿಯರ ಪ್ರತಿಕ್ರಿಯೆಯನ್ನೊಳಗೊಂಡಿದ್ದು ಆದಕ್ಕೆ ಸಂಬಂಧಪಟ್ಟಂತೆ. ಹಲವು ವಿವರಗಳು ಅದರಲ್ಲೂ ಬಾಕ್ಸರ್ ದಂಗೆ ಮೊದಲಿಗೆ ಮಂಚೂಗಳ ವಿರುದ್ಧ ನಂತರ ಪಾಶ್ಚಿಮಾತ್ಯರ ಹಾಗೂ ಕ್ರೈಸ್ತ ಧರ್ಮದ ವಿರುದ್ಧಗ ಹೋರಾಟವಾಗಿದ್ದು ಇಂತಹ ಹೋರಾಟ ಚೀನಿ ಯುವಜನತೆಯ ಪ್ರತಿ ಸವಾಲಾಗಿತ್ತು. 1899 ರಲ್ಲಿ ನಡೆದ ಬಾಕ್ಸರ್ ದಂಗೆ ಪ್ರಜೆಗಳ ಕ್ರಾಂತಿಕಾರಕ ಹೋರಾಟವಾಗಿದ್ದು, ಚೀನಿ ಕ್ರಾಂತಿಯ ನಿಜವಾದ ಹುಟ್ಟು ಇದಾಗಿತ್ತು. ವ್ಯಾಪಾರಿ ಉದ್ದೇಶದಿಂದ ಚೀನಾ ಸಂಪರ್ಕ ಬೆಳೆಸಿದ ಐರೋಪ್ಯರು ಆರ್ಥಿಕ ಹಿತಾಸಕ್ತಿಗಳನ್ನು ಬೆಳೆಸಿಕೊಂಡಿದ್ದು, ತಮ್ಮ ಅನುಕೂಲಕ್ಕೆನುಗುಣವಾಗಿ ಚೀನಿ ರಾಷ್ಟ್ರವನ್ನು ಪಾಶ್ಚಾತೀಕರಣಗೊಳಿಸುವ ಯತ್ನ ನಡೆಸಿದ್ದರು. ವ್ಯಾಪಾರಿ ಅಸಮ ಒಪ್ಪಂದಗಳು,

ಚೀನಿ ಪ್ರದೇಶಗಳಲ್ಲಿನ ಪ್ರಾದೇಶಿಕ ಹಿಡಿತ ಮತ್ತು ಹೆಚ್ಚಿನದಾಗಿ ಕ್ರೈಸ್ತಪಾದ್ರಿಗಳು ಚೀನಿಯರನ್ನು ಮತಾಂತರಗೊಳಿಸುವ ಪ್ರಯತ್ನದಲ್ಲಿ ತೊಡಗಿದ್ದರು. ಆಳುವ ಪ್ರಭುತ್ವ ಮಂಚೂ ಸರ್ಕಾರ ಐರೋಪ್ಯ ರಾಷ್ಟ್ರಗಳನ್ನು ತಡೆಹಿಡಿಯುವಲ್ಲಿ ಪೂರ್ಣಮಟ್ಟಕ್ಕೆ ಅಸಫಲರಾಗಿದ್ದರು. ಹಾಗಾಗಿ ಚೀನಿಯರ ಪ್ರತಿಕ್ರಿಯೆ ಸ್ವಾಭಾವಿಕವಾಗಿ ಮೊದಲಿಗೆ ಮಂಚೂಗಳ ವಿರುದ್ಧದ ದ್ವೇಶ ಮತ್ತು ಸೆಣಸಾಟವಾಗಿತ್ತು, ಆದಾಗ್ಯೂ ಆನಂತರದಲ್ಲಿ ಚೀನಿ ಸರ್ಕಾರ ದಂಗೆಯನ್ನು ಪೂರಕವಾಗಿ ಬಳಸಿಕೊಂಡಿದ್ದು ಅದರಲ್ಲೂ ಪಾಶ್ಚಿಮಾತ್ಯರನ್ನು ಹೊರ ಹಾಕುವಲ್ಲಿ ತಾವು ಕ್ರಾಂತಿಕಾರರೊಂದಿಗೆ ಜೊತೆಗೂಡಲು ಹಿಂಜರಿಯಲಿಲ್ಲ. ಹಾಗಾಗಿ ಪ್ರಾರಂಭದಲ್ಲಿ ಚೀನಿಯರ ದುಃಸ್ಥಿತೆಗೆ ಕಾರಣವಾಗಿದ್ದ ಮಂಚೂ ಸರ್ಕಾರದ ವಿರುದ್ಧ ದಂಗೆ ಪ್ರಾರಂಭವಾಗಿ ನಂತರ ದಂಗೆಕೋರರು ಪಾಶ್ಚಿಮಾತ್ಯರ ವಿರುದ್ಧ ಹಾಗೂ ಕ್ರೈಸ್ತ ಧರ್ಮದ ವಿರುದ್ಧ ಹೋರಾಟ ನಡೆಸಿದರು. ಈ ಎಲ್ಲ ವಿಚಾರಗಳನ್ನು 134ರ ಯೂನಿಟ್‌ನಲ್ಲಿ ನೀವು ಅಭ್ಯಾಸ ಮಾಡುವಿರಿ.

ಕೊನೆಯದಾಗಿ 135ರಲ್ಲಿ ನೀವು ಅಭ್ಯಾಸ ಮಾಡಲಿರುವ ವಿಷಯ ಅಮೇರಿಕನ್ನರು 19ನೇ ಶತಮಾನದ ಕೊನೆಯಲ್ಲಿ ಜಾರಿಯಲ್ಲಿ ತಂದ ತೆರೆದ ಬಾಗಿಲ ನೀತಿಯೆ ಆಗಿದೆ. ಚೀನಾದಲ್ಲಿ ಮುಕ್ತದ್ವಾರ ನೀತಿಯನ್ನು ಅನುಸರಿಸಿದ ಅಮೇರಿಕಾ ತಾನು ಸಹ ಚೀನಾದೊಡನೆ ವ್ಯಾಪಾರಿ ಸಂಪರ್ಕಗಳನ್ನು ಬೆಳೆಸಿಕೊಳ್ಳುವ ಉದ್ದೇಶವನ್ನು ಹೊಂದಿತ್ತು. ಅಮೇರಿಕಾ ಸಾರ್ವಜನಿಕ ಅಭಿಪ್ರಾಯ ಮತ್ತು ಅಮೇರಿಕಾ ಸರ್ಕಾರ ಚೀನಾದಲ್ಲಿ ಪ್ರಾದೇಶಿಕ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದರಲ್ಲಿ ಉತ್ಸುಕರಾಗಿರಲಿಲ್ಲ ಅದಕ್ಕೆ ಬದಲಾಗಿ ತಮ್ಮ ವ್ಯಾಪಾರಿ ಹಿತಾಸಕ್ತಿಗಳನ್ನು ಬಂಬಲಿಸಿಕೊಳ್ಳಲು ಐರೋಪ್ಯ ರಾಷ್ಟ್ರಗಳೊಡನೆ ಪೈಪೋಟಿ ನಡೆಸಿತು. ಹಿತಾಸಕ್ತಿಗಳನ್ನು ವೃದ್ಧಿಪಡಿಸಿಕೊಳ್ಳಲು ಆಮೇರಿಕಾ ಸುಲಭವಾಗಿ ಬಳಸಿದ ಸಾಧನವೂ ಮುಕ್ತದ್ವಾರ ನೀತಿ. ಮುಕ್ತದ್ವಾರ ನೀತಿಯ ಉಗಮ ಮತ್ತು ಬೆಳವಣಿಗೆ ಬಹಳ ಮುಖ್ಯವಾಗಿ ಚೀನಾದೊಡನೆ ಐರೋಪ್ಯ ರಾಷ್ಟ್ರಗಳು " ಹೆಚ್ಚು ಸವಲತ್ತು ಹೊಂದಿದ್ದ ರಾಷ್ಟ್ರ" (More favoured Nation)ಗಳ ಅಸ್ತಿತ್ವಕ್ಕಾಗಿ ನಡಿಸಿದ ಯತ್ನಗಳಿಗೆ ಕಡಿವಾಣ ಹಾಕುವ ಮತ್ತು ಸಮಾನಂತರವಾಗಿ ತಾನು ವ್ಯಾಪಾರ ವಾಣಿಜ್ಯ ಸಂಪರ್ಕಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಬೆಳೆಯುವುದೇ ಆಗಿತ್ತು. ಹಾಗಾಗೀ ಐರೋಪ್ಯ ರಾಷ್ಟ್ರಗಳು ಚೀನಾದಲ್ಲಿ ಬೆಳೆಸಿಕೊಂಡ ಪ್ರಭಾವಿ ವಲಯಗಳಿಗೆ ಎದುರಾಗಿ ಮತ್ತು ನೇರವಾಗಿ ಚೀನಿ ವ್ಯಾಪಾರವನ್ನು ಮುಕ್ತವಾಗಿಟ್ಟು ತನ್ನ ವ್ಯಾಪಾರಿ ನೀತಿಯನ್ನು ಒಂದು ಸಾಧನವಾಗಿ ಬಳಸಿತು. ಅಲ್ಲದೆ ಆ ಮೂಲಕ ಚೀನಾದಲ್ಲಿನ ಐಕ್ಯತೆಯನ್ನು ಉಳಿಸಿಡುವ ಪ್ರಯತ್ನವನ್ನು ಮಾಡಿತು. ಅಂದರೆ ಐರೋಪ್ಯ ರಾಷ್ಟ್ರಗಳು ಚೀನಾದ ಮೇಲೆ ಆಕ್ರಮಣ ಮಾಡಿ ತಮ್ಮ ರಾಜಕೀಯ ಹಿಡಿತಗಳ ಸ್ಥಾಪನೆಯನ್ನು ತಡೆಹಿಡಿಯುವ ಪ್ರಯತ್ನವನ್ನು ಕೂಡ ಅಮೇರಿಕಾ ಮಾಡಿತ್ತು. ಹಾಗಾಗಿ ಅಮೇರಿಕಾನ್ನರ ಮುಕ್ತದ್ವಾರ ನೀತಿ ವ್ಯಾಪಾರದಲ್ಲಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವ ಪ್ರಯತ್ನವು ಕೂಡ ಇದಾಗಿತ್ತು. ಆದಾಗ್ಯೂ ಪಾಶ್ಚಿಮಾತ್ಯರು, ಅಮೇರಿಕ ಮತ್ತು ಜಪಾನ್‌ನೊಳಗೊಂಡಂತೆ ಎಲ್ಲ ರಾಷ್ಟ್ರಗಳು ಚೀನದ ಅಸ್ತಿತ್ವ ಘೋಷಣೆಯನ್ನು ಮುಂದುವರೆಸಿದ್ದವು. ಈ ಎಲ್ಲ ಅಂಶಗಳನ್ನು 135ನೇ ಯೂನಿಟ್‌ನಲ್ಲಿ ನೀವ ಅಭ್ಯಾಸ ಮಾಡುವಿರಿ.

# ಘಟಕ - 131

## ಪ್ರಭಾವಿ ವಲಯಗಳ ಉದ್ಭವ


131.0 ಧ್ಯೇಯೊದ್ದೇಶಗಳು

131.1 ಪೀಠಿಕೆ

131.2 ಉಂಡಿ ಕಲ್ಲಂಗಡಿ ಒಡೆದು ಹೋಳಾಯಿತು

131.3 ಚೀನಾವನ್ನು ವಿಭಜಿಸುವ ಪ್ರಕ್ರಿಯೆಯಲ್ಲಿ ಪ್ರಭಾವಿ ವಲಯಗಳು

131.4 ತೆರದ ಬಾಗಿಲು ನೀತಿ

131.5 ಚೀನಾದ ವಿಭಜನೆಯ ಭಯ ಮತ್ತು ಗಂಡಾಂತರದಿಂದ ಪಾರು

131.6 ಒಟ್ಟಾರೆ ಸಾರಾಂಶ ನೀಡುವ ಬನ್ನಿ.

131.7 ಮಾದರಿ ಪ್ರಶ್ನೆಗಳು

131.8 ಹೆಚ್ಚಿನ ಅಧ್ಯಯನಕ್ಕೆ ಆಕರಗಳು

## 131.0 ಧ್ಯೇಯೊದ್ದೇಶಗಳು

ಈ ಯೂನಿಟ್‌ನಲ್ಲಿ ನಾವು ಅಧ್ಯಯನ ಮಾಡುವ ಮತ್ತು ಚರ್ಚಿಸುವ ಮುಖ್ಯ ವಿಚಾರಗಳೆಂದರೆ , ಚೀನಾದಲ್ಲಿ ಪಾಶ್ಚಿಮಾತ್ಯ ವ್ಯಾಪಾರಿ ಉದ್ಯಮಗಳಿಗೆ ಸವಲತ್ತುಗಳ ಬೇಡಿಕೆ, ತೀರ ಪ್ರದೇಶಗಳಲ್ಲಿ ಪ್ರಾದೇಶಿಕ ಹಕ್ಕುಗಳಿಗಾಗಿ ಪೈಪೋಟಿ ಪ್ರಮುಖ ಬಂದರುಗಳು ಮತ್ತು ಪ್ರದೇಶಗಳಲ್ಲಿ ಪ್ರಭಾವಿ ವಲಯಗಳನ್ನು ಸೃಷ್ಟಿಸುವ ಮತ್ತು ಪಾಶ್ಚಿಮಾತ್ಯರ ಈ ನೀತಿಗಳಿಗೆ ದೇಶೀಯರ ಪ್ರತಿಭಟನೆ ಮತ್ತು ಚೀನೀ ಮಂಚೂ ಪ್ರಭುತ್ವದ ವಿಫಲ ಪ್ರಯತ್ನಗಳನ್ನು ನೀವು ತಿಳಿಯುವಿರಿ. ನೀವು ಈ ಪಾಠವನ್ನು ಅಭ್ಯಾಸ ಮಾಡಿದ ನಂತರ ತಿಳಿಯಬಹುದಾದ ವಿವರಗಳೆಂದರೆ:

* ರಷ್ಯವನ್ನು ಒಳಗೊಂಡಂತೆ ಐರೋಪ್ಯ ರಾಷ್ಟ್ರಗಳಾದ ಆಸ್ಟ್ರಿಯ, ಫ್ರಾನ್ಸ್, ಜರ್ಮನಿ, ಗ್ರೇಟ್ ಬ್ರಿಟನ್, ಇಟಲಿ, ರಾಷ್ಟ್ರಗಳು ಪ್ರಭಾವಿ ವಲಯಗಳನ್ನು ಸೃಷ್ಟಿಸಿದುದು.
* ಆಧುನಿಕರಣಗೊಳ್ಳುತ್ತಿದ್ದ ಜಪಾನಿನ ಪ್ರಭಾವಿ ವಲಯ ಸ್ಥಾಪನೆ.
* ಅಮೇರಿಕನ್ನರ ವ್ಯಾಪಾರಿ ಹಿತಾಸಕ್ತಿ
* ಅಮೇರಿಕನ್ನರು ರೇಷ್ಮೆ ಮತ್ತು ಚಹಾ ವ್ಯಾಪಾರಕ್ಕೆ ಚೀನಾ ಮಾರುಕಟ್ಟೆಯ ಅವಶ್ಯಕತೆ.
* ಚೀನಿ ಮಂಚೂ ಪ್ರಭುತ್ವ ಪಾಶ್ಚಿಮಾತ್ಯರ ವ್ಯಾಪಾರಕ್ಕೆ ಹೇರಿದ ಹೆಚ್ಚಿನ ನಿರ್ಬಂಧ.
* ಪಾಶ್ಚಿಮಾತ್ಯರು ಪ್ರಾದೇಶಿಕ ಗುತ್ತಿಗೆ ಮತ್ತು ವಿಶೇಷ ಸವಲತ್ತುಗಳಿಗಾಗಿ ಚೀನಿಯರ ಮೇಲೆ ಹೇರಿದ ಒತ್ತಡ.
* ಚೀನಿ ಪ್ರಭುತ್ವವನ್ನು ಕಡೆಗಣಿಸಿ, ವ್ಯಾಪಾರಕ್ಕೆ ಹೆಚ್ಚಿನ ಸವಲತ್ತುಗಳನ್ನು ಪಡೆದುಕೊಂಡ ನೀತಿ.
* ಯೂರೋಪಿನಲ್ಲುಂಟಾದ ಕೈಗಾರಿಕಾ ಕ್ರಾಂತಿ ಮತ್ತು ಸಿದ್ಧ ವಸ್ತುಗಳಿಗೆ ಅವಶ್ಯಕವಾದ ಮಾರುಕಟ್ಟೆಗಾಗಿ ಹುಡುಕಾಟ.
* ಪಾಶ್ಚಿಮಾತ್ಯ ರಾಷ್ಟ್ರಗಳ ಧರ್ಮ ಪ್ರಸರಣಾ ನೀತಿ ಮತ್ತು
* ಚೀನಾ ಪ್ರಾದೇಶಿಕ ಹಕ್ಕುಗಳಿಗಾಗಿ ಪೈಪೋಟಿ.

## 131.1 ಪೀಠಿಕೆ

ಚೀನಾ ತನ್ನ ಇತಿಹಾಸದುದ್ದಕ್ಕೂ ರಾಜಕೀಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ತನ್ನದೆ ಆದ ಭವ್ಯ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದು ಆಧುನಿಕ ಸಂದರ್ಭದಲ್ಲಿ ಐರೋಪ್ಯರು ಚೀನಾದ ಜನಪ್ರಿಯವಾದ ಪಿಂಗಾಣಿ, ಚಹ ಮತ್ತು ರೇಷ್ಮೆಯನ್ನು ಬಯಸಿ ತಮ್ಮ ವ್ಯಾಪಾರ ಸಂಪರ್ಕವನ್ನು ಬೆಳೆಸಲು ಮುಂದಾದರು. 19ನೇ ಶತಮಾನದುದ್ದಕ್ಕೂ ಅಮೇರಿಕಾವನ್ನು ಒಳಗೊಂಡಂತೆ ಐರೋಪ್ಯ ರಾಷ್ಟ್ರಗಳು ಚೀನಾದ ತೀರಗಳಲ್ಲಿ ವ್ಯಾಪಾರಿ ಸವಲತ್ತುಗಳಿಗಾಗಿ ಒತ್ತಾಯಿಸತೊಡಗಿದರು. ಈ ಪಾಶ್ಚಿಮಾತ್ಯರನ್ನು ಕ್ರೂರಿಗಳು ಮತ್ತು ಅನಾಗರೀಕರರೆಂದು ಪರಿಗಣಿಸಿದ್ದು ಚೀನಿ ಪ್ರಭುತ್ವ ಅವರನ್ನು ಕೇವಲ ಕೆಲವೆ ದ್ವೀಪಗಳಿಗೆ ಸೀಮಿತಗೊಳಿಸಿ ಕೂಹಾಂಗ್ ವ್ಯಾಪಾರಿ ಸಮುದಾಯದ ಮೂಲಕವೇ ಸಂಪರ್ಕಿಸುವಂತೆ ವ್ಯವಸ್ಥೆ ಮಾಡಿದ್ದರು. ಆದರೆ ಆಗಿಂದಾಗ್ಗ ಐರೋಪ್ಯರು ಚೀನಿಯರನ್ನು ಒತ್ತಾಯಿಸಿ, ಚೀನಾದ ಜೊತೆ ವ್ಯಾಪಾರಿ ಒಪ್ಪಂದಗಳನ್ನು ಹೊಂದಿದ್ದ ಪಾಶ್ಚಿಮಾತ್ಯರನ್ನು ತಡೆದು ಹಿಮ್ಮೆಟ್ಟಿಸಲು ಮಂಚೊ ಪ್ರಭುತ್ವಕ್ಕೆ ಸಾಧ್ಯವಾಗಲಿಲ್ಲ ಮತ್ತು ವ್ಯಾಪಾರಿ ಸವಲತ್ತುಗಳನ್ನು ಒದಗಿಸಿಕೊಟ್ಟು ಅಸಮ ಒಪ್ಪಂದಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಹಾಗಾಗಿ 19ನೇ ಶತಮಾನದ ಕೊನೆಯ ವೇಳೆಗೆ ಪಾಶ್ಚಾತ್ಯ ರಾಷ್ಟ್ರಗಳು ಚೀನಾದ ಜೊತೆ ವ್ಯಾಪಾರಿ ಸಂಪರ್ಕಕ್ಕಾಗಿ ತಮ್ಮಲ್ಲೆ ಪೈಪೋಟಿ ನಡೆಸಿ ಚೀನಾದ ಜೊತೆ ವ್ಯಾಪಾರ ಸಂಪರ್ಕಗಳನ್ನು ಸವಲತ್ತುಗಳೊಂದಿಗೆ ಪಡೆದುಕೊಳ್ಳುವಲ್ಲಿ ಸಫಲವಾದವು. ಅಲ್ಲದೆ ಚೀನಿ ಪ್ರಭುತ್ವದ ದುರ್ಬಲತೆಯನ್ನು ದುರುಪಯೋಗಿಸಿಕೊಂಡು ರಾಜಕೀಯದಲ್ಲಿ ತಲೆ ಹಾಕಿದವು. ಶತಮಾನದ ಕೊನೆಯ ವೇಳೆ ಮಂಚೂ ಸಾಮ್ರಾಟನ ಮರಣದಿಂದಾಗಿ, ಆಡಳಿತದ ಚುಕ್ಕಾಣಿಯ ಹಿಡಿತ ಹೊಂದಿದ್ದ ರೀಜೆಂಟ್ ಎಂಪ್ರೆಸ್ಸ್ ದವಾಜನ್ ತುಷ್ಸೀಯು ಚೀನಾವನ್ನು ಪಾಶ್ಚಿಮಾತ್ಯರ ಹಿಡಿತದಿಂದ ಬಿಡಿಸಿಕೊಳ್ಳಲು ಹೆಣಗಾಟ ನಡೆಸಿದ್ದಳು.

ಐರೋಪ್ಯ ರಾಷ್ಟ್ರಗಳಾದ ಆಸ್ಟ್ರಿಯ, ಫ್ರಾನ್ಸ್, ಜರ್ಮನಿ, ಗ್ರೇಟ್ ಬ್ರಿಟನ್ ಹಾಗೂ ಇಟಲಿ ದೇಶಗಳು ಚೀನಾದಲ್ಲಿ ವ್ಯಾಪಾರಿ ಹಕ್ಕುಗಳನ್ನು ಪಡೆದುಕೊಂಡಿದ್ದು, ವಿಂಗಡಿತ ಪ್ರದೇಶಗಳಲ್ಲಿ ತಮ್ಮ ಹಿಡಿತವನ್ನು ಹೊಂದಲು ಹವಣಿಸಿದ್ದವು. ಅಲ್ಲದೆ ಚೀನಾದ ಕೆಲವು ಭಾಗಗಳನ್ನು ತಮ್ಮ ಪ್ರಭಾವಿ ವಲಯಗಳನ್ನಾಗಿ ಪರಿವರ್ತಿಸಿ, ಆ ಪ್ರದೇಶಗಳಲ್ಲಿ ತಮ್ಮ ರಾಜಕೀಯ ಹಿತಾಸಕ್ತಿಯನ್ನು

ಬೆಳೆಯಿಸಿಕೊಳ್ಳಲು ತೊಡಗಿದವು. ಹಾಗಾಗಿ ಏಕೀಕೃತ ಚೀನಾವನ್ನು ಒಡೆದು ಭಾಗಗಳನ್ನಾಗಿ ಮಾಡಿ ಕೆಲವು ಭಾಗಗಳಲ್ಲಿತಮ್ಮ ವ್ಯಾಪಾರದ, ಧರ್ಮದ ಮತ್ತು ರಾಜಕೀಯದ ಹಿಡಿತವನ್ನು ಕೂಡ ಹೊಂದುವಲ್ಲಿ ಸಫಲವಾಗಿದ್ದವು. ಅಸಮರ್ಥ ಮಂಚೂ ಪ್ರಭುತ್ವ ಚೀನಾವನ್ನು ವಿದೇಶಿಯರಿಂದ ರಕ್ಷಿಸುವಲ್ಲಿ ವಿಫಲವಾಗಿದ್ದು, ಚೀನಾದ ಜನತೆ ಆಡಳಿತಾತ್ಮಕ ತೊಂದರೆಗಳನ್ನು ಒಳಗೊಂಡಂತೆ ಎಲ್ಲ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಆ ವೇಳೆಗಾಗಲೆ ಅಮೇರಿಕಾ ಕೂಡ ಫಿಲಿಪೈನ್ಸ್‌ನ್ನು ವಶಪಡಿಸಿಕೊಂಡಿದ್ದು. ಏಷ್ಯದಲ್ಲಿ ತನ್ನ ಆಸಕ್ತಿಯನ್ನು ಹೊಂದಿತ್ತು. ಫಿಲಿಪೈನ್ಸ್‌ನಲ್ಲಿ ಹಿಡಿತ ಹೊಂದಿದ್ದ ಅಮೇರಿಕಾ ಕೂಡ ಚೀನಾದ ಸಮೃದ್ಧ ಸಂಪನ್ಮೂಲಗಳನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳಲು ತೆರೆದ ಬಾಗಿಲು ನೀತಿಯನ್ನು ಚೀನಾದಲ್ಲಿ ಅನುಸರಿಸುವಂತೆ ಎಲ್ಲ ಐರೋಪ್ಯ ರಾಷ್ಟ್ರಗಳನ್ನು ಒತ್ತಾಯಿಸಿತು. ಹಾಗೂ ವಿದೇಶಿಯರ ಪ್ರಭಾವಿ ವಲಯಗಳ ಬೆಳವಣಿಗೆ ಚೀನಾದ ರಾಷ್ಟ್ರೀಯ ಅಸ್ತಿತ್ವಕ್ಕೆ ಧಕ್ಕೆಯನ್ನುಂಟು ಮಾಡುವುದರಿಂದ ಐರೋಪ್ಯರ ಪ್ರಭಾವಿ ವಲಯಗಳಲ್ಲಿ ಮಿತಿಗಳೊಂದಿಗೆ ಕಾರ್ಯಚಟುವಟಿಕೆಗಳನ್ನು ನಡೆಸಲು ಸಮ್ಮತಿಸಿತ್ತು. ಹಾಗಾಗಿ ಮುಕ್ತದ್ವಾರ ನೀತಿ ಎಲ್ಲ ವ್ಯಾಪಾರಿ ರಾಷ್ಟ್ರಗಳಿಗೆ ಸಮಾನ ಅವಕಾಶ ಕಲ್ಪಿಸುವ ಉದ್ದೇಶವನ್ನು ಹೊಂದಿದ್ದು, ಯಾವುದೇ ರೀತಿಯಾದ ಭೇದವನ್ನು ಹೊಂದಿರಕೂಡದೆಂದು ಒತ್ತಾಯಿಸಿತಲ್ಲದೆ ಹಾಗೂ ಚೀನಿ ರಾಷ್ಟ್ರದ ಐಕ್ಯತೆಯನ್ನು ಉಳಿಸುವಲ್ಲಿ ಸಹಕರಿಸಿತು.

## 131.2 ಉಂಡಿ ಕಲ್ಲಂಗಡಿ ಒಡೆದು ಹೋಳಾಯಿತು.

ಯೂರೋಪಿಯನ್ ರಾಷ್ಟ್ರ ಪ್ರಭುತ್ವ ವಿಸ್ತರಣೆ 18 ಮತ್ತು 19ನೇ ಶತಮಾನಗಳಲ್ಲಿ ಜಗತ್ತಿನಾದ್ಯಂತ ಪಸರಿಸಿಕೊಂಡಿದ್ದು ಅದರಲ್ಲೂ ಏಷ್ಯಾದ ರಾಷ್ಟ್ರಗಳಲ್ಲಿ ಭದ್ರವಾಗಿ ತಳವೂರಲು ಪ್ರಯತ್ನಿಸಿದ್ದವು. ಈ ಕಾಲದಲ್ಲಿ ಜಗತ್ತಿನ ಯಾವುದೇ ಭಾಗದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಸಂಪನ್ಮೂಲಗಳ ರಾಹ ವಿದ್ದಡೆ ಎಲ್ಲಾ ತಮ್ಮ ಹಿತಾಸಕ್ತಿಗಳನ್ನು ರೂಢಿಸಿಕೊಳ್ಳಲು ಮುಂದಾದವು. ಹಾಗೂ ತಮ್ಮನ್ನು ರಕ್ಷಿಸಿಕೊಳ್ಳಲು ವಿಫಲರಾದ ಏಷ್ಯಾನ್ನರ ಭಾಗಗಳಲ್ಲಿ ಐರೋಪ್ಯ ರಾಷ್ಟ್ರಗಳು ವ್ಯಾಪಾರಿ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳಲು ಮುಂದಾದವು ಮತ್ತು ತಮ್ಮ ಪ್ರಭಾವಿ ವಲಯಗಳನ್ನು ಸಂಸ್ಥಾಪಿಸಿದವು. ಚೀನಾ ಏಷ್ಯಾದ ಅತಿ ದೊಡ್ಡ ರಾಷ್ಟ್ರವಾಗಿದ್ದು ಪ್ರಾಚೀನ ಕಾಲದಿಂದಲೂ ಭವ್ಯಪರಂಪರೆಯನ್ನು ಹೊಂದಿತ್ತು. ಸಂಸ್ಕೃತಿ, ಭಾಷೆ ಕನ್‌ಫ್ಯೂಷಿಯಸ್ ಮತ್ತು ಲಾವೋಕ್ಸೆತ್ರಯರಂತ ದೊಡ್ಡ ಚಿಂತನಕಾರರು ತತ್ವಗಳು ಮತ್ತು ಸಾರ್ವಜನಿಕ ಪರೀಕ್ಷಾ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದ್ದು ಚೀನಾ ರಾಜಕೀಯವಾಗಿ ಸಹ ಐಕ್ಯತೆಯನ್ನು ಕಾಪಾಡಿಕೊಂಡು ಬರುವಲ್ಲಿ ಸಫಲವಾಗಿತ್ತು. ಪ್ರಾಕೃತಿಕವಾಗಿ ಮತ್ತು ಮಾನವ ಶಕ್ತಿಯ ಯಥೇಚ್ಛ ಸಂಪನ್ಮೂಲಗಳನ್ನು ಹೊಂದಿದ್ದು ಚೀನಾ ಆಧುನಿಕ ಕಾಲದವರೆಗೂ ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಐಕ್ಯತೆಯನ್ನು ಉಳಿಸಿಕೊಂಡು ಬಂದಿತ್ತು, ಪಾಶ್ಚಿಮಾತ್ಯರಿಗೆ ಚೀನೀ ವಸ್ತುಗಳ ಅವಶ್ಯಕತೆಯಿತ್ತೆ ವಿನಃ ಚೀನಿಯರಿಗೆ ಪಾಶ್ಚಿಮಾತ್ಯರಿಗೆ ಅವಶ್ಯಕತೆ ಇರಲಿಲ್ಲ. ಹಾಗಾಗಿ ವಿದ್ವಾಂಸರ ನುಡಿಯಂತೆ ಚೀನಾ ಭವ್ಯ ಚರಿತ್ರೆ ಉಂಡಿ ಕಲ್ಲಂಗಡಿ ಹಣ್ಣಿನಂತೆ ಬೆಳೆದು ಬಂದಿದ್ದು ಯಾವುದೇ ರೀತಿ ಹೊರಗಿನ ಒತ್ತಡಕ್ಕೆ ಸಿಲುಕಿರಲಿಲ್ಲ. ಆದರೆ ಏಷ್ಯಾದ ಬಹು ಭಾಗದಲ್ಲಿ ವ್ಯಾಪಾರಿ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಬೆಳೆಯಿಸಿಕೊಂಡ ಯೂರೋಪಿಯನ್ನರು ಚೀನಾದಲ್ಲೂ ಕೂಡ ವ್ಯಾಪಾರಿ ಸವಲತ್ತುಗಳಿಗಾಗಿ 19ನೆ ಶತಮಾನದಲ್ಲಿ ಹುಡುಕಾಟ ಪ್ರಾರಂಭಿಸಿರು. ಅಲ್ಲದೆ ಅಮೇರಿಕಾ ಕೂಡ ಪೂರ್ವದಿಕ್ಕಿನಿಂದ ಏಷ್ಯಾದತ್ತ ತನ್ನ ಹಿತಾಸಕ್ತಿ ಬೆಳೆಸಲು ಪ್ರಾರಂಭಿಸಿದ್ದು, ತನ್ನ ಒಡೆದ ಹಡಗುಗಳಿಗೆ ರಿಪೇರಿ ಮತ್ತು ಉಗಿ ಶಕ್ತಿಯನ್ನು ತುಂಬಲು ಜಪಾನಿ ಮತ್ತು ಚೀನಾದ ಸಮುದ್ರ ದಂಡೆಗಳಲ್ಲಿ ಜಾಗಕ್ಕಾಗಿ ಪೈಪೋಟಿ ನಡೆಸಿತ್ತು. ಹಾಗಾಗಿ ಐರೋಪ್ಯರ ಮತ್ತು ಅಮೇರಿಕನ್ನರ ಪ್ರಯತ್ನ ಮೂಲತಹ ವ್ಯಾಪಾರಿ ಮತ್ತು ವಾಣಿಜ್ಯ ಸಂಪರ್ಕಗಳಿಸುವುದೇ ಆಗಿದ್ದಿತು. ಆನಂತರದಲ್ಲಿ ವ್ಯಾಪಾರಿ ಹಿತಾಸಕ್ತಿಗಳನ್ನು ಉಳಿಸಿಕೊಳ್ಳಲು ಪ್ರಭಾವಿವಲಯಗಳನ್ನು ಸೃಷ್ಟಿಸಿಕೊಂಡರು ಮತ್ತು ರಾಜಕೀಯ ಹಿಡಿತ ಸಾಧಿಸಲು ಪ್ರಾರಂಭಿಸಿದರು.

ಚೀನಾ 19ನೇ ಶತಮಾನದವರೆಗೂ ಉಳಿಸಿ ಬೆಳೆಸಿಕೊಂಡು ಬಂದಿದ್ದು ಏಕಾಂತತೆಯನ್ನು ಐರೋಪ್ಯರು ಛಿದ್ರಗೊಳಿಸಿದರು. ಅದುವರೆವಿಗೂ ಚೀನಾ ತನ್ನ ರಾಜಕೀಯ ಮತ್ತು ಸಾಂಸ್ಕೃತಿಕ ಹೆಗ್ಗಳಿಕಯನ್ನು ಮರೆಯಿಸಿಕೊಂಡು ಬಂದಿದ್ದು, ಬ್ರಿಟನ್ ಒಳತಂದೆ (ಬಳಸಿದ) ಒಪಿಯಂನ ಬಳಕೆ ಚೀನಾದ ರಾಜಕೀಯ ಅಸ್ತಿತ್ವವನ್ನು ಅಲುಗಾಡಿಸಿತು. ಒಪಿಯಂ ಕದನಗಳು ಮಂಚೂನ್ನರನ್ನು ಕ್ರೂರಿಗಳು ಮತ್ತು ಅನಾಗರೀಕತೆಂದೆ ಪರಿಗಣಿಸಿದ್ದ ಚೀನಾ ಮೊದಲಿಗೆ ಪಾಶ್ಚಿಮಾತ್ಯರಿಗೆ ನೇರವಾದ ವ್ಯಾಪಾರಿ ಸಂಪರ್ಕಕ್ಕೆ ಅವಕಾಶ ನೀಡಿರಲಿಲ್ಲ. ಬದಲಾಗಿ ಕ್ಯಾಂಟಿನ್ ಟ್ರೇಡ್ ಅಂಗರೆ ಚೀನಿ ವರ್ತಕ ವರ್ಗವಾದ ಕೂಹಾಂಗ್ ಮೂಲಕವೆ ವ್ಯಾಪಾರ ಮಾಡಬೇಕಾಗಿತ್ತ. ಅಲ್ಲದೆ ವಿದೇಶಿ ವರ್ತಕರು ಚೀನಿ ಪ್ರಭುತ್ವಕ್ಕೆ 'ಕೋವ್ ತೋವ್'ನ್ನು ಅನುಸರಿಸುವ ಮೂಲಕ ಹೆಚ್ಚಿನ ಗೌರವ ಸೂಚಕವಾಗಿ ಮರ್ಯಾದೆ ಕೊಡಬೇಕಾಗಿದ್ದಿತು. ಅಫೀಮ್ ವ್ಯಾಪಾರವು ವಿದೇಶಿಯರಿಗೆ ಲಾಭದಾಯಕವಾಗಿದ್ದುದರಿಂದ ವಿದೇಶಿಯರು ಮತ್ತು ಚೀನಿಯರ ನಡುವೆ ಘರ್ಷಣೆ ನಡೆಯಿತು. ಯುದ್ಧಗಳಲ್ಲಿ ಚೀನಾವನ್ನು ಸೋಲಿಸಿದ ಐರೋಪ್ಯರು ಚೀನಾದೊಡನೆ ಅಸಮ ಒಪ್ಪಂಗಗಳನ್ನು ಮಾಡಿಕೊಂಡು ವ್ಯಾಪಾರಿ ಸವಲತ್ತುಗಳು, ಪ್ರಾದೇಶಿಕ ಹಕ್ಕುಗಳು ಮತ್ತು ವ್ಯವಹಾರಿಕ [illegible]. ಸಂಬಿಕೆಗೆ ಅರ್ಹವಾದ ರಾಷ್ಟ್ರೀಯ ಅಸ್ತಿತ್ವ (Most faroured Nation Status)ನ್ನು ಪಡೆದುಕೊಂಡ[illegible] ಗ್ರೇಟ್ ಬ್ರಿಟನ್ ಚೀನಾದಲ್ಲಿ ಬ್ರಿಟಿಷ್ ಸಲಹೆಗಾರನ ಕೊಲೆಯ ಸಂದರ್ಭವನ್ನು ಬಳಸಿಕೊಂಡು, ಚೀನಾದೊಡನೆ ಚೀಫ್ರೊ [illegible] ಮಾಡಿಕೊಂಡಿತು. ಅಲ್ಲದೆ ಚೀನಾದ [illegible] ಕೊಳ್ಳ ಮತ್ತು ಬಹುತೇಕ ಭಾಗದಲ್ಲಿ ತನ್ನ ಹಿತಾಸಕ್ತಿಗಳನ್ನು ಕೂಡ ಬೆಳೆಯಿಸಿಕೊಂಡಿತು. ಜರ್ಮನಿ ಕಿಯೋಚಿವ್ ದ್ವೀಪವನ್ನು ಫ್ರಾನ್ಸ್ ಯುನಾನ, 3
ಕ್ವಾಂಗ್‌ಸೀ ಭಾಗದಲ್ಲೂ, ರಷ್ಯ ಮಂಚೂರಿಯ ಭಾಗಗಳಲ್ಲಿ ತಮ್ಮ ಹಿತಾಸಕ್ತಿಗಳನ್ನು ಗೂಢಿಸಿಕೊಂಡವು.

ಪಾಶ್ಚಿಮಾತ್ಯರು ಚೀನಾವನ್ನು ಲೂಟಿ ಹೊಡೆಯಲು ಮುಂದಾದಂತೆ, ಆಗತಾನೆ ಅಭಿವೃದ್ಧಿ ಹೊಂದುತ್ತಿದ್ದ ಜಪಾನ್ ಕೂಡ ಚೀನಾದಲ್ಲಿ ತನ್ನ ಹಿತಾಸಕ್ತಿಯನ್ನು ಬೆಳೆಯಿಸಿಕೊಳ್ಳಲು ಮುಂದಾಯಿತು. 1874ರಲ್ಲಿ ಫಾರ್ಮಸಾ ದ್ವೀಪವನ್ನು ಮತ್ತು 1879ಲೋಚೊ ದ್ವೀಪವನ್ನು ವಶಪಡಿಸಿಕೊಂಡಿತ್ತು. ಹಾಗೂ ಕೊರಿಯ ಶತಮಾನಗಳಿಂದಲೂ ಚೀನಾಕ್ಕೆ ಹೊಂದಿಕೊಂಡ ಭೂ ಪ್ರದೇಶವಾಗಿದ್ದು, ಜಪಾನ್ ತನ್ನ ರಕ್ಷಣೆಗಾಗಿ ಕೊರಿಯಾವನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಹವಣಿಸುತಿತ್ತು. ಕೊರಿಯಾದಲ್ಲಿನ ದೇಶೀಯ ದಂಗೆಯನ್ನು ನೆವ ಮಾಡಿಕೊಂಡು 1894-95ರಲ್ಲಿ ಚೀನಾ ಜಪಾನ್ ಯುದ್ಧದ ಮೂಲಕ ಅದನ್ನು ಸಾಧಿಸಿತು. ಷಿಮನೋಸರೆ ಒಪ್ಪಂದ ಮೂಲಕ ಕೊರಿಯಾಕ್ಕೆ ಸ್ವತಂತ್ರ ಅಸ್ತಿತ್ವ ಫಾರ್ಮಾಸ, ಪೆಸ್ಕಡೊರೆಸ್ ಮತ್ತು ಲಿಯೋತುಂಗ್ ಪರ್ಯಾಯ ದ್ವೀಪಗಳನ್ನು ಜಪಾನ್ ತನ್ನ ಹಿಡಿತಕ್ಕೆ ಒಳಪಡಿಸಿಕೊಂಡಿತು. ಅದೇ ಸಂದರ್ಭದಲ್ಲಿ ತ್ರಿರಾಷ್ಟ್ರಗಳ ಮಧ್ಯ ಪ್ರದೇಶದಿಂದಾಗಿ ಜಪಾನ್ ಲಿಯೋತುಂಗ್ ಮತ್ತೆ ಪೋರ್ಟ್ ಆರ್ಥರ್‌ನ್ನು ಬಿಟ್ಟುಕೊಟ್ಟಿತ್ತಾದರೂ, ಆನಂತರದಲ್ಲಿ ಅವುಗಳನ್ನು ಪಡೆಯುವಲ್ಲಿ ಸಫಲವಾಯಿತು.

ಪಾಶ್ಚಿಮಾತ್ಯರ ಒಳನುಗ್ಗುವಿಕೆಯಿಂದಾಗಿ, ಚೀನಿಯರು ಅಸಮ ಒಪ್ಪಂದಗಳನ್ನು ಮಾಡಿಕೊಂಡು, ಪಾಶ್ಚಾತ್ಯರ ವಿಚಾರಗಳನ್ನು ಮತ್ತೆ ವಸ್ತುಗಳನ್ನು ತಮಗೆ ಇಚ್ಛೆಯಿಲ್ಲದಿದ್ದರೂ ಒಪ್ಪಿಕೊಂಡರು. ಇದರಿಂದಾಗಿ ಚೀನಿಯರ ಪ್ರತ್ಯೇಕತೆಯೂ ಕೊನೆಗೊಂಡು ವಿದೇಶಗಳೊಂದಿಗೆ ಅದರ ಸಂಪರ್ಕವು ಹೆಚ್ಚಾಯಿತು. ಪಾಶ್ಚಾತ್ಯರ ಹಿಡಿತಕ್ಕೆ ಸಿಲುಕಿದ ಚೀನಾ, ತನ್ನ ಭೂ ಭಾಗಗಳ ಹಿಡಿತವನ್ನು ವಿದೇಶಿಯರಿಗೆ ಬಿಡಬೇಕಾಗಿ ಬಂದಿತ್ತು. ಅಲ್ಲದೆ ಚೀನಿಯರ ವ್ಯಾಪಾರಿ ಸುಂಕ, ಅಂಚೆ ಪದ್ಧತಿ, ಸಾರಿಗೆ ವ್ಯವಸ್ಥೆ ಅದರಲ್ಲೂ ರೈಲ್ವೆ ಮಾರ್ಗಗಳು ಹೀಗೆ ಚೀನಿ ಆಡಳಿತಾತ್ಮಕ ವ್ಯವಸ್ಥೆಯನ್ನು ವಿದೇಶಿಯರು ತಮ್ಮ ಹಿಡಿತಕ್ಕೊಳಪಡಿಸಿಕೊಂಡರು. ಇದರಿಂದಾಗಿ ಚೀನಾದ ಲೂಟಿಯಲ್ಲಿ ವಿದೇಶಿಯರ ಪೈಪೋಟಿಯು ಆರಂಭವಾಯಿತು. ಪಾಶ್ಚಾತ್ಯರ ಲೂಟಿಯು 20ನೇ ಶತಮಾನದ ಮೊದಲ ದಶಕದವರೆಗೂ ಮುಂದುವರಿದು ಚೀನಾವು ವಿವಿಧ ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರಭಾವಿ ವಲಯಗಳಾಗಿ ವಿಭಜನೆಗೊಂಡಿತು. ವಿಭಜನೆಗೊಂಡ ಚೀನಾ ಸ್ಥಿತಿ ಒಡೆದ ಕಲ್ಲಂಗಡಿ ಹಣ್ಣಿನ ಹೋಳಿನಂತಾಯಿತು.

## 131.3 ಚೀನಾವನ್ನು ವಿಭಜಿಸುವ ಪ್ರಕ್ರಿಯೆಯಲ್ಲಿನ ಪ್ರಭಾವಿ ವಲಯಗಳು

19ನೇ ಶತಮಾನದ ಕೊನೆಯ ಭಾಗದಲ್ಲಿ ಚೀನಾದ ಆಂತರೀಕ ಪರಿಸ್ಥಿತಿ ಬಗ್ಗೆ ಪಾಶ್ಚಾತ್ಯ ರಾಷ್ಟ್ರಗಳು ಸಾಕಷ್ಟು ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದರೂ, ಚೀನಾಕ್ಕೆ ಪೂಗದಿ ಸಲ್ಲಿಸುತ್ತಿದ್ದ ಅದರ ಸುತ್ತ ಮುತ್ತಲಿನ ಪ್ರದೇಶಗಳ ಮೇಲೆ ಪಾಶ್ಚಾತ್ಯರ ಸಾಮ್ರಾಜ್ಯಷಾಹಿ ಚಟುವಟಿಕೆಗಳಿಂದಾಗಿ ಚೀನಿ ಪ್ರಭುತ್ವದ ಪೂಗದಿ ವ್ಯವಸ್ಥೆ ಪಥನ ಹೊಂದಿತ್ತು. ಚೀನಿ ಸರ್ಕಾರದ ಅಸಮರ್ಥತೆ ಮತ್ತು ಸೈನಿಕ ದೌರ್ಬಲ್ಯವನ್ನು ಬಳಸಿಕೊಂಡ ವಿದೇಶಿ ರಾಷ್ಟ್ರಗಳು ತಮ್ಮ ತಮ್ಮ ಬಲ ಪ್ರದರ್ಶನ ಮತ್ತು ಕುತಂತ್ರಗಳಿಂದ ಮಂಚೂ ಸರ್ಕಾರಕ್ಕೆ ಬೆದರಿಕೆ ಹಾಕಿ ಅನೇಕ ಸೌಲಭ್ಯಗಳನ್ನು ಮತ್ತು ಹಕ್ಕುಹಗಳನ್ನು ಪಡೆದುಕೊಂಡವು. ವಿದೇಶಿಯರಿಗೆ ನೀಡಿದ ರಿಯಾಯಿತಿಗಳಿಂದ ಮತ್ತು ಯುದ್ಧನಷ್ಟ ಪರಿಹಾರಗಳಿಂದ ಚೀನಾ ಅಪಾರ ಹಣವನ್ನು ಅಲ್ಲದೆ ಭೂಪ್ರದೇಶಗಳನ್ನು ಕಳೆದುಕೊಂಡಿತು. ಹೆಚ್ಚಿನದಾಗಿ ಪೂಗದಿ ವ್ಯವಸ್ಥೆಯ ಪತನದಿಂದಾಗಿ ಆದಾಯ ಕುಂಟಿತವಾಯಿತು. 1894-95ರ ಚೀನಾ ಜಪಾನ್‌ನ ಯುದ್ಧ. ಚೀನಾದ ರಾಜಕೀಯ ದೌರ್ಬಲ್ಯವು ಹೊರಹಾಕಿತಲ್ಲದೆ ಪಾಶ್ಚಿಮಾತ್ಯ ಸಾಮ್ರಾಜ್ಯಷಾಹಿಗಳಿಗೆ. ಚೀನಾವನ್ನು ರಾಜಕೀಯವಾಗಿಯು ಬಳಸಿಕೊಳ್ಳಲು ದಾರಿ ಮಾಡಿಕೊಟ್ಟವು. ಒಡೆದ ಕಲ್ಲಂಗಡಿ ಹೋಳನ್ನು ಹಂಚಿಕೊಳ್ಳುವಲ್ಲಿ ಎಲ್ಲ ಐರೋಪ್ಯರು ಜಪಾನನ್ನು ಒಳಗೊಂಡಂತೆ ಮುಂದೆ ಬಂದರು.

ಷಿಮನೋಸರೆ ಒಪ್ಪಂದ ಚೀನಿಯರ ಮೇಲೆ ಎಲ್ಲ ರೀತಿಯಾದ ಒತ್ತಡವನ್ನು ಹೇರಿದ್ದು. ಯುದ್ಧ ನಷ್ಟ ಪರಿಹಾರವನ್ನು ಭರಿಸಲು ಚೀನಾ ಪರದಾಡಬೇಕಾಯಿತು. ರಷ್ಯ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ಯುದ್ಧ ನಷ್ಟ ಪರಿಹಾರ ಹಣದ ಸಾಲ ಸಹಾಯ ಮಾಡಲು ಮುಂದೆ ಬಂದವು. ಚೀನಿ ಹಣಕಾಸಿನ ಸ್ಥಿತಿ ಒತ್ತಡದಲ್ಲಿದ್ದು ಚೀನಾ ವಿದೇಶಿ ಸಾಲ ಪಡೆಯುವುದು ಅನಿವಾರ್ಯವಾಗಿತ್ತು. 1896ರ ಸೆಪ್ಟಂಬರ್‌ನಲ್ಲಿ ರೊಸೋ-ಚೀನೀಸ್ ಬ್ಯಾಂಕ್ ಮತ್ತು ಮಂಚೂ ಸರ್ಕಾರವೂ ಮಂಚೂರಿಯಾ ಪ್ರದೇಶದಲ್ಲಿನ ವಾಯುವ್ಯ ಗಡಿಯಲ್ಲಿ ಮಂಚೂರಿಯಾದಿಂದ ವ್ಲಾಡಿವೊಸ್ಟಾಕ್ ಸಮೀಪದವರೆಗಿನ ರೈಲು ಮಾರ್ಗವನ್ನು ಚೈನೀಸ್ ಈಸ್ಟರ್ನ್ ರೈಲ್ವೆ ಕಂಪನಿಯು ರಷ್ಯನ ಅಧಿಕಾರಿಯ ನೇತೃತ್ವದಲ್ಲಿ ಪ್ರಾರಂಭಿಸಿ 1904ರಲ್ಲಿ ಸಂಪೂರ್ಣಗೊಳಿಸಿತು. ಚೀನಾ ಮಂಚೂರಿಯಕ್ಕೆ ರಷ್ಯದಿಂದ ಬರುವ ಮತ್ತು ಮಂಚೂರಿಯದಿಂದ ರಷ್ಯಕ್ಕೆ ರಫ್ತಾಗುವ ಪದಾರ್ಥಗಳ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುವುದಲ್ಲದೆ ಮತ್ತು ರಷ್ಯಾದ ಸೈನ್ಯದ ಚಲನವಲನಗಳಿಗೆ ಚೀನಿ ಸರ್ಕಾರ ಅನುಮತಿ ನೀಡಿತು. ರೈಲ್ವೆ ಮಾರ್ಗದ ನಿರ್ಮಾಣ ಆಡಳಿತ ಮತ್ತು ರಕ್ಷಣೆಯ ಬಗ್ಗೆ ಜವಾಬ್ದಾರಿಯು ಚೀನಾಕ್ಕೆ ಸೇರಿತ್ತಾದರೂ 1896ರ ಡಿಸಂಬರ್ ಒಪ್ಪಂದದಂತೆ ಕಂಪನಿಯ ಮಾರ್ಗದ ರಕ್ಷಣೆಗೆ ಪೋಲೀಸ್ ಪಡೆಯನ್ನು ನೇಮಿಸುವ ಹಕ್ಕನ್ನು ರಷ್ಯ ಪಡೆದುಕೊಂಡಿತು. ಚೈನೀಸ್ ಈಸ್ಟರ್ನ್ ರೈಲ್ವೆ ಕಂಪನಿಗೆ ರೊಸೋಚೈನೀಸ್ ಬ್ಯಾಂಕ್ ಹಣ ಸಹಾಯ ಮಾಡಬೇಕಿದ್ದು, ವಾಸ್ತವವಾಗಿ ರಷ್ಯ ಅದರ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿತ್ತು. ಅದು ರಷ್ಯದ ಖಜಾನೆಯ ಆಸ್ತಿಯಾಗಿತ್ತು. ಅಲ್ಲದೆ ರೈಲ್ವೆ ಕಂಪನಿಯ ಉತ್ಪಾದನೆ, ಗಣಿ ಉದ್ಯಮ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಹಲವಾರು ಚಟುವಟಿಕೆಗಳಲ್ಲಿ ರಷ್ಯ ತೊಡಗಿಸಿಕೊಂಡು ಲಾಭಗಳಿಸಿತು. ಹಾಗೂ ರಷ್ಯ ಚೀನಾದಿಂದ ದಕ್ಷಿಣದಲ್ಲಿನ ಕ್ವಾಂಗ್‌ಟುಂಗ್ ಪರ್ಯಾಯ ದ್ವೀಪ ಮತ್ತು ಡೆರೈನ್ ಮತ್ತು ಆರ್ಥರ್ ಬಂದರನ್ನು 25 ವರ್ಷಗಳ ಕಾಲ ತನ್ನ ಸ್ವತ್ತಿಗೆ ಕೊಡಬೇಕೆಂದು ಚೀನಾದ ಮೇಲೆ ಒತ್ತಡ ಹೇರಿತು.

ಪೀಕಿಂಗ್ ಒಪ್ಪಂದದ ನಂತರ 1866ರಲ್ಲಿ ಜರ್ಮನಿಯು ಪೀಕಿಂಗ್‌ಗೆ ರಾಯಭಾರಿಯನ್ನು ಕಳುಹಿಸಿ ಚೀನಾದಲ್ಲಿ ನೌಕಾ ನೀತಿಯನ್ನು ಮತ್ತು ವ್ಯಾಪಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಬಯಸಿತು. 1897ರಲ್ಲಿ ಜರ್ಮನಿಯು ಷಾಂಟುಂಗ್ ಪ್ರಾಂತ್ಯದಲ್ಲಿನ ಕಿಯೋಚೂವ್ ಕೊಲ್ಲಿಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿತು. ಅದಕ್ಕೆ ಪೂರಕವಾಗಿ ಯಾರು ದುರಾತ್ಮರು ಇಬ್ಬರು ಜರ್ಮನ್ ಕ್ಯಾಥೊಲಿಕ್ ಪಾದ್ರಿಗಳನ್ನು ಕೊಲೆ ಮಾಡಿದ್ದರು. ಈ ಘಟನೆಯನ್ನು ಬಳಸಿಕೊಂಡ ಜರ್ಮನಿ 1898ರ ಮಾರ್ಚ್‌ನಲ್ಲಿ ಚೀನಾದೊಂದಿಗೆ ಒಪ್ಪಂದ ಮಾಡಿಕೊಂಡು ವ್ಯಾಪಾರಿ ಸವಲತ್ತುಗಳನ್ನು ಮತ್ತು ಅನೇಕ ರಿಯಾಯಿತಿಗಳನ್ನು ಪಡೆದುಕೊಂಡಿತು. ಚೀನಾ 99 ವರ್ಷಗಳ ಅವಧಿಗೆ ಟೆಷಿಂಗ್ ಟೋ ಬಂದರು ಸೇರಿದಂತೆ ಕಿಯೋಚವ್ ಕೊಲ್ಲಿಯನ್ನು ಗುತ್ತಿಗೆಯಾಗಿ ಜರ್ಮನಿಗೆ ನೀಡಿತು. ಅಲ್ಲದೆ ಷಾಂಟುಂಗ್ ಪ್ರದೇಶದಲ್ಲಿ ಬಂಡವಾಳವನ್ನು ಹೂಡಿ ರೈಲು ಮಾರ್ಗ ನಿರ್ಮಿಸುವ ಹಕ್ಕನ್ನು ಪಡೆದುಕೊಂಡಿತು. ಮೇಲಾಗಿ ಷಾಂಟುಂಗ್ ಪ್ರದೇಶದ ಅಭಿವೃದ್ಧಿಗೆ ಚೀನಾಕ್ಕೆ ಬೇಕಾದ ಸಿಬ್ಬಂದಿ ವರ್ಗ ಮತ್ತು ಬಂಡವಾಳವನ್ನು ಒದಗಿಸುವ ಮೂಲಕ ವಿಶೇಷ ಹಕ್ಕನ್ನು ಪಡೆದುಕೊಂಡಿತು.

ಪೀಕಿಂಗ್ ಒಪ್ಪಂದದಂತೆ ಫ್ರೆಂಚ್ ರಾಯಭಾರಿ ಅಧಿಕಾರಿಗಳು ಪೀಕಿಂಗ್‌ನಲ್ಲಿ ನೆಲೆಸಲು ಅಧಿಕೃತ ಒಪ್ಪಿಗೆ ಪಡೆದ ಫ್ರಾನ್ಸ್ ದಕ್ಷಿಣ ಚೀನಾದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು ಅನೇಕ ಸವಲತ್ತುಗಳನ್ನು ಪಡೆದುಕೊಂಡಿತು. 1895ರ ಆರಂಭದಲ್ಲಿಯೆ ಚೀನಾದ ಸರ್ಕಾರವು ಕ್ವಾಂಗ್ಸಿ, ಕ್ವಾಂಗ್ ಟುಂಗ್ ಮತ್ತು ಯುನಾನ್ ಪ್ರಾಂತ್ಯಗಳಲ್ಲಿ ಹೊಸಗಣಿ ಉದ್ಯಮಗಳ ಬಗ್ಗೆ ಅನ್ವೇಷಣೆ ನಡೆಸಲು ಫ್ರೆಂಚ್ ಇಂಜಿನಿಯರ್‌ಗಳಿಗೆ ಆದ್ಯತೆ ಕೊಟ್ಟಿತು. ಅಲ್ಲದೆ ಚೀನಾ 1896ರಲ್ಲಿ ಕ್ವಾಂಗ್ಸಿ ಪ್ರಾಂತ್ಯದಲ್ಲಿ ಲುಂಗ್ ಚಾವರಗೆ ಫ್ರೆಂಚ್ ರೈಲ್ವೆ ಮಾರ್ಗದ ನಿರ್ಮಾಣಕ್ಕೆ ಒಪ್ಪಿಗೆ ನೀಡಿತು. ಮತ್ತು ಆಯಕಟ್ಟಿನ ಪ್ರದೇಶವಾಗಿದ್ದ ಹೈನಾನ್ ದ್ವೀಪವನ್ನು ಬೇರೆಯಾರಿಗೂ ಪರಭಾರೆ ಮಾಡಕೂಡದೆಂದು ಮತ್ತು ದಕ್ಷಿಣ ಚೀನಾದ ಬೇರೆ ಯಾವ ಪ್ರಾಂತ್ಯಗಳನ್ನು ಬೇರೆಯವರಿಗೆ ನೀಡಕೂಡದೆಂದು ಫ್ರಾನ್ಸ್ ಚೀನಾದಿಂದ ಭರವಸೆ ಪಡೆದುಕೊಂಡಿತು. ಹಾಗೂ ಯೂನಾನ್‌ಗೆ ರೈಲು ಮಾರ್ಗ ನಿರ್ಮಿಸುವ ಹಕ್ಕನ್ನು ತಾನು ಪಡೆದುಕೊಂಡಿತು. ಅಂತೆಯೆ ಕ್ವಾಂಗ್ ಚಾ ನೌಕಾನೆಲೆಯನ್ನು 99 ವರ್ಷಗಳ ಕಾಲ ಗುತ್ತಿಗೆಗೆ ಕೂಡ ತೆಗೆದುಕೊಂಡಿತು.

ಟೈನ್‌ಸ್ಟಿನ್ ಮತ್ತು ಪೀಕಿಂಗ್ ಒಪ್ಪಂದದ ಕರಾರುಗಳನ್ನು ಚೀನಾ ಮೇಲೆ ಗ್ರೇಟ್ ಬ್ರಿಟನ್, ಚೀನಾದಲ್ಲಿ ರಷ್ಯ ಮತ್ತು ಜರ್ಮನಿ ಹಾಗೂ ಫ್ರಾನ್ಸ್ ಏರ್ಪಡಿಸಿಕೊಳ್ಳುತ್ತಿದ್ದ ಹಿತಾಸಕ್ತಿ ವಲಯಗಳ ಬಗ್ಗೆ ಗಂಬೀರವಾಗಿ ಪರಿಗಣಿಸಿತು. ಹಾಗಾಗಿ ಬ್ರಿಟನ್ ಕೂಡ ಚೀನಾದಲ್ಲಿ ತನ್ನ ಆಸಕ್ತಿಗಳನ್ನು ರಕ್ಷಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಂಡಿತು. 1898ರ ಫೆಬ್ರವರಿಯಲ್ಲಿ ಯಾಂಗ್ಸಿ ಕಣಿವೆ ಪ್ರದೇಶದಲ್ಲಿ ತನ್ನ ವಿಶೇಷ ಹಕ್ಕುಗಳನ್ನು ಪಡೆದು, ಆ ಪ್ರದೇಶವನ್ನು ಯಾರಿಗೂ ಪರಭಾರೆ ಮಾಡದಂತೆ ನಿರ್ದೇಶಿಸಿತು. ಚೀನಾದಲ್ಲಿ ಬ್ರಿಟಿಷರ ವ್ಯಾಪಾರವು ಅಧಿಕವಾಗಿರುವವರೆಗೂ ಕಡಲ ಸಂಬಂಧದ ತೆರಿಗೆಗಳ ವಿಷಯವನ್ನು ಬ್ರಿಟಿಷ್ ಇನ್ಸ್‌ಪೆಕ್ಟರ್ ಜನರಲ್ ಎಂಬ ಅಧಿಕಾರಿಯು ನೋಡಿಕೊಳ್ಳುವಂತೆ ಚೀನಾವನ್ನು ಒಪ್ಪಿಸಿತು. ಹಾಗಾಗಿ ಚೀನಾದ ವಿದೇಶಿ ವ್ಯಾಪಾರದ 2/3ಭಾಗವು ಬ್ರಿಟನ್‌ನ ಹತೋಟಿಯಲ್ಲಿತ್ತು. ಉತ್ತರದಲ್ಲಿ ರಷ್ಯ ಮತ್ತು ಜರ್ಮನಿ ಮತ್ತು ದಕ್ಷಿಣದಲ್ಲಿ ಫ್ರಾನ್ಸ್ ಪಡೆದುಕೊಂಡಿದ್ದ ಸವಲತ್ತುಗಳಿಂದ ಮತ್ಸರಗೊಂಡ ಬ್ರಿಟನ್ 1898ರ ಮಾರ್ಚ್-ಜುಲೈ ನಡುವೆ ಒಂದಾದರ ಮೇಲೊಂದರಂತೆ ಬಹು ಮುಖ್ಯವಾದ ರಿಯಾಯಿತಿಗಳನ್ನು ಪಡೆದುಕೊಂಡಿತು. ರಷ್ಯ ಪೋರ್ಟ್ ಆರ್ಥರ್ ಮೇಲೆ ಹತೋಟಿ ಹೊಂದಿರುವವರೆಗೂ ಷಾಂಟುಂಗ್ ಪ್ರಾಂತ್ಯದಲ್ಲಿನ ವೈ ಹೈವೈನ್ನು ಬ್ರಿಟನ್ ಗುತ್ತಿಗೆಯಾಗಿ ಪಡೆಯಿತು. ಅಲ್ಲದೆ ಕೌಲೂನ್ ಮೇಲಿನ ತನ್ನ ಹತೋಟಿಯನ್ನು ಇಡಿ ಪರ್ಯಾಯ ದ್ವೀಪದ ಮೇಲೆ ವಿಸ್ತರಿಸ 99 ವರ್ಷಗಳ ಕಾಲದ ಗುತ್ತಿಗೆಗೆ ಪಡೆದುಕೊಂಡಿತು. ಈ ರೀತಿಯಲ್ಲಿ ರಷ್ಯ, ಜರ್ಮನಿ, ಫ್ರಾನ್ಸ್ ಮತ್ತು ಬ್ರಿಟನ್‌ಗಳು ಚೀನಾದಲ್ಲಿ ವಿಶೇಷ ಸವಲತ್ತುಗಳಿಗಾಗಿ ಪೈಪೋಟಿ ನಡೆಸುತ್ತಿದ್ದು ಅವುಗಳು ಪೈಪೋಟಿ ಹೆಚ್ಚಾಗಿ ರೈಲು ಮಾರ್ಗಗಳ ನಿರ್ಮಾಣ ಮತ್ತು ಆಡಳಿತಕ್ಕೆ ಸಂಬಂಧ ಪಟ್ಟುದುದಾಗಿತ್ತು.

ಪಾಶ್ಚಾತ್ಯ ರಾಷ್ಟ್ರಗಳು ಚೀನಾದಲ್ಲಿ ಪಡೆದ ಈ ವಿಶೇಷ ಸವಲತ್ತುಗಳು ಮತ್ತು ಗುತ್ತಿಗೆ ಪ್ರದೇಶಗಳು ಮೂಲತಹ ಚೀನಾವನ್ನು ವಿಭಜಿಸುವ ಉದ್ದೇಶವನ್ನು ಹೊಂದಿದ್ದವು. ಗುತ್ತಿಗೆಗಳನ್ನು ಪಡೆಯುವುದರ ಜೊತೆಗೆ ಗುತ್ತಿಗೆ ಪಡೆದ ಪ್ರದೇಶಗಳನ್ನು ಯಾವುಗೇ ಮೂರನೆ ರಾಷ್ಟ್ರಗಳಿಗೆ ಪರಭಾರೆ ಮಾಡದಂತೆ ಒಪ್ಪಂದ ಮಾಡಿಕೊಂಡಿದ್ದವು. ಹಾಗಾಗಿ 1899ರ ವೇಳೆಗೆ ಪಾಶ್ಚಾತ್ಯ ರಾಷ್ಟ್ರಗಳು ಚೀನಾದಲ್ಲಿ ಅಧಿಕೃತವಾಗಿ ಪ್ರಾದೇಶಿಕ ಹಕ್ಕುಗಳನ್ನು ಪಡೆದು ಚೀನಾದ ವಿಭಜನೆಯತ್ತಮುಂದುವರೆದಿದ್ದವು. ಆದರೆ ಚೀನಾದಲ್ಲಿನ 1899ರ ಘಟನೆ, ಬಾಕ್ಸರ್ ದಂಗೆ ತಾತ್ಕಲಿಕವಾಗಿ ಪಾಶ್ಚಾತ್ಯರ ಈ ಪ್ರಯತ್ನಗಳನ್ನು ತಡೆದು ನಿಲ್ಲಿಸಿತ್ತು. ಅಲ್ಲದೆ ಅಮೇರಿಕ ತಾನು ಕೂಡ ಚೀನಾದಲ್ಲಿ ತನ್ನ ಹಿತಾಸಕ್ತಿಗಳನ್ನು ವ್ಯಕ್ತಪಡಿಸಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ತೆರೆದ ಬಾಗಿಲ ಸಿದ್ಧಾಂತವನ್ನು ಪ್ರತಿಪಾದಿಸಿ ಎಲ್ಲ ವಿದೇಶಿಯರಿಗೆ ಸಮಾನ ಅವಕಾಶಗಳಿರಬೇಕೆಂದು ಒತ್ತಾಯಿಸಿತು. ಹಾಗಾಗಿ 19ನೇ ಶತಮಾನದ ಕೊನೆಯ ವೇಳೆಗೆ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದುರ್ಬಲಗೊಂಡಿದ್ದ ಚೀನಿ ಸರ್ಕಾರ ಪಾಶ್ಚಿಮಾತ್ಯರ ಚೀನಾ ಹಂಚಿಕೆಯನ್ನು ತಡೆಯುವಲ್ಲಿ ವಿಫಲರಾಗಿದ್ದು, ಯುವ ಜನತೆ ಪ್ರಾರಂಭಿಸಿದ ದಂಗೆ ಹಂಚಿಕೆ ಹಂಚಿ ಹೋಗುತ್ತಿದ್ದ ಚೀನಾವನ್ನು ಹೆಸರಿನ ಮಾತ್ರಕ್ಕಾದರು ಉಳಿಯುವಂತೆ ಮಾಡಿತು.

## 131.4 ತೆರೆದ ಬಾಗಿಲು ನೀತಿ.

ಚೀನಾ ಸರ್ಕಾರದ ಅಸಮರ್ಥತೆ ಮತ್ತು ಸೈನಿಕ ದೌರ್ಬಲ್ಯತೆಗಳನ್ನು ದುರುಪಯೋಗ ಪಡಿಸಿಕೊಂಡು ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಬೆಳೆಸಿಕೊಂಡ ಪಾಶ್ಚಾತ್ಯ ರಾಷ್ಟ್ರಗಳು ಚೀನಾವನ್ನು ಒಡೆದು ಹಂಚುವ ಪ್ರಯತ್ನಗಳನ್ನು ಗಂಭೀರವಾಗಿ ಪರಿಗಣಿಸಿದ ಅಮೇರಿಕಾ ಮತ್ತು ಏಷ್ಯಾದ ರಾಷ್ಟ್ರವಾದ ಜಪಾನ್ ಕೂಡ ತಮ್ಮ ಹಿತಾಸಕ್ತಿಗಳನ್ನು ಬೆಳೆಸಲು ಪ್ರಾರಂಭಿಸಿದವು. ಕೊರಿಯಾದಲ್ಲಿ ಹೆಚ್ಚಿನ ಹಿತಾಸಕ್ತಿ ಹೊಂದಿದ್ದ ಜಪಾನ್ ಟಾಂಗ್‌ಕ್ ದೇಶಿಯ ದಂಗೆಯ ಸಮಯದಲ್ಲಿ ಚೀನಾದೊಡನೆ ತಾನು ಸಹ ಸೈನ್ಯದ ಸಹಾಯವನ್ನು ಕಳುಹಿಸುವುದರ ಮೂಲಕ ಚೀನಾ ಮತ್ತು ಕೊರಿಯಾದ ರಾಜಕೀಯದಲ್ಲಿ ತನ್ನ ಅಸ್ತಿತ್ವವನ್ನು ರೂಢಿಸುವ ಪ್ರಯತ್ನ ಮಾಡಿತು. ದಂಗೆಯನ್ನು ಅಡಗಿಸಿದ ಕೊರಿಯಾ ಸೈನ್ಯಗಳನ್ನು ಹಿಂತೆಗೆದುಕೊಳ್ಳಲು ತಿಳಿಸಿದಾಗ ಪರತ್ತುಗೊಳನ್ನೊಡ್ಡಿ, ಚೀನಾದೊಂದಿಗೆ ಯುದ್ಧ ಸಾರಿತು. ಅಲ್ಲದೆ ಚೀನಾವನ್ನು ಸೋಲಿಸಿ, ಕೊರಿಯಾದ ಸ್ವಾತಂತ್ರ್ಯವನ್ನು ಚೀನಾ ಒಪ್ಪಿ, ಫಾರ್ಮೊಸಾ ಕಿಪಸ್ಕಡೊರೆಸ್ ಮತ್ತು ಲಿಯೋಟುಂಗ್ ಪರ್ಯಾಯ ದ್ವೀಪವನ್ನು ಜಪಾನಿಗೆ ಬಿಟ್ಟುಕೊಟ್ಟಿತು. ಹೊಸ ವ್ಯಾಪಾರ ಒಪ್ಪಂದದೊಂದಿಗೆ ಯುದ್ಧ ನಷ್ಟ ಪರಿಹಾರವನ್ನು ಕೊಡಲೊಪ್ಪಿತು. ಆದರೆ ತ್ರಿರಾಷ್ಟ್ರಗಳ ಮಾಧ್ಯ ಪ್ರವೇಶದಿಂದಾಗಿ ತಾನು ಪಡೆಯಬೇಕಾಗಿದ್ದ ಲಿಯೋಟುಂಗ್ ಪರ್ಯಾಯ ದ್ವೀಪವನ್ನು ಬಿಟ್ಟುಕೊಟ್ಟಿತು.

ಮೊದಲಿಗೆ ವಿದೇಶಿ ವ್ಯಾಪಾರಕ್ಕಾಗಿ ಚೀನಾದ ಬಾಗಿಲನ್ನು ತೆಗೆಸುವುದರಲ್ಲಿ ಅಮೇರಿಕಾವು ಪಾಲ್ಗೊಂಡಿದ್ದು, ವ್ಯಾಪಾರವನ್ನಳಿದ್ದು ಹೆಚ್ಚಿನ ಹಿತಾಸಕ್ತಿಗಳನ್ನು ಹೊಂದಿರಲಿಲ್ಲ. 1806ರ ದಶಕದಲ್ಲಿ ಅಂತರ್ಯುದ್ಧ ಮತ್ತು 1890ರ ದಶಕದಲ್ಲಿ ಕೆರೆಬಿಯಾನ್ ರಾಜ್ಯದಲ್ಲಿ ಸ್ಪೈನಿನ ವಿರುದ್ಧ ಯುದ್ಧದಲ್ಲಿ ತೊಡಗಿದ್ದುದರಿಂದ ತೀನಾದ ರಾಜಕೀಯದಲ್ಲಿ ಅಮೇರಿಕಾಕ್ಕೆ ಹೆಚ್ಚಿನ ಆಸಕ್ತಿ ತೋರಿಸಲಿಲ್ಲ. ಆದರೆ 1898ರಲ್ಲಿ ಸ್ಪೈನಿನೊಡನೆ ಯುದ್ಧ ಕೊನೆಗೊಂಡ ನಂತರ ಅಮೇರಿಕಾ ತನ್ನ ಸಿದ್ಧ ವಸ್ತುಗಳ ವಿತರಣೆಗಾಗಿ ಚೀನಾದ ಮಾರುಕಟ್ಟೆಗಳ ಕಡೆ ಗಮನ ಹರಿಸಿತು. ಅಲ್ಲದೆ ಅಮೇರಿಕಾ ಪಿಲಿಫೈನ್ಸ್ ದ್ವೀಪಗಳನ್ನು ವಶಪಡಿಸಿಕೊಂಡು ದೂರ ಪ್ರಾಚ್ಯದಲ್ಲಿನ ಆಗುಹೋಗುಗಳ ಬಗ್ಗೆ ಆಸಕ್ತಿ ವಹಿಸಿತ್ತು. ಆ ವೇಳೆಗಾಗಲೆ ಪಾಶ್ಚಿಮಾತ್ಯ ರಾಷ್ಟ್ರಗಳು ಚೀಮಾದಲ್ಲಿ ಪ್ರಭಾವಿ ವಲಯಗಳನ್ನು ಸ್ಥಾಪಿಸಿಕೊಂಡಿದ್ದು ಚೀನಾವನ್ನು ವಿಭಜಿಸುವ ಹವಣಿಕೆಯಲ್ಲಿದ್ದವು. ಸಾಮ್ರಾಜ್ಯಶಾಹಿ ಪ್ರಭುತ್ವಗಳ ಚೀನಾದಲ್ಲಿನ್ನ ನೀತಿ ಅಮೇರಿಕಾ ಮತ್ತು ಅಮೇರಿಕಾದ ರಾಜಕಾರಣಿಗಳನ್ನು ಕಳವಳಗೊಳ್ಳುವಂತೆ ಮಾಡಿದವು. ಫಿಲಿಫ್ಫೈನ್ಸ್ ದ್ವೀಪಗಳನ್ನು ವಶಪಡಿಸಿಕೊಂಡ ಅಮೇರಿಕಾ ಭೌಗೋಳಿಕವಾಗಿ ಚೀನಾದ ಸಮೀಪವನ್ನು ಹೊಂದಿದ್ದು, ಚೀನಾದಲ್ಲಿ ಅಳಿದುಳಿದ ಉಪಯುಕ್ತವಲ್ಲದ ಪ್ರದೇಶದಲ್ಲಿ ಹಿತಾಸಕ್ತಿಗಳನ್ನು ಮತ್ತು ಪ್ರಭಾವಿ ವಲಯಗಳನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುವುದರಲ್ಲಿ ಅರ್ಥವಿಲ್ಲವೆಂದು ಭಾವಿಸಿತು. ಆದರೆ ನಿರ್ಲಿಪ್ತವಾಗಿ ಏಷ್ಯಾ ಭಾಗದಲ್ಲಿನ ಬೆಳವಣಿಗೆಗಳನ್ನು ನೋಡಿ ಸಹಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಚೀನಾದಲ್ಲಿ ತನ್ನ ವ್ಯಾಪಾರದ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಪರಿಣಾಮಕಾರಿಯಾದ ನೂತನ ವಿಧಾನವನ್ನು ರೂಪಿಸಿತು. ಆ ವಿಧಾನವೇ ತೆರೆದ ಬಾಗಿಲು ನೀತಿ ಚೀನಾದಲ್ಲಿ ಯೂರೋಪಿನ ಯಾವ ರಾಷ್ಟ್ರವೂ ವ್ಯಾಪಾರದ ಏಕಸ್ವಾಮ್ಯವನ್ನು ಹೊಂದಿರ ಕೂಡದೆಂದು ಮತ್ತು ವ್ಯಾಪಾರಕ್ಕಾಗಿ ಚೀನಾದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳಿರಬೇಕೆಂಬುದು ತೆಗೆದ ಬಾಗಿಲು ನೀತಿಯ ಮುಖ್ಯ ಉದ್ದೇಶವಾಗಿತ್ತು.

ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾನ್ ಹೇ ತೆರೆಧ ಬಾಗಿಲ ನೀತಿಯನ್ನು ಪ್ರತಿಪಾದಿಸಿದನು. ಚೀನಾದಲ್ಲಿ ವಿದೇಶಿ ಪ್ರಭಾವಿ ವಲಯಗಳನ್ನು ವಸಾಹತುಗಳಿಗಾಗಿ ಮಾರ್ಪಡದಂತೆ ತಡೆಗಟ್ಟುವುದು ಈ ನೀತಿಯ ಹಿನ್ನಲೆಯಾಗಿತ್ತು. ಜಾನ್ ಹೇ 1899ರ ಸೆಪ್ಟಂಬರ್ 6ರಂದು ತನ್ನ ಪ್ರಸಿದ್ಧ 'ತೆರೆದ ಬಾಗಿಲ ನೀತಿ' ಯ ಸುತ್ತೋಲೆಯನ್ನು ಬ್ರಿಟನ್, ಜರ್ಮನಿ, ಇಟಲಿ ಮತ್ತು ಫ್ರಾನ್ಸ್‌ಗೂ ತಿಳಿಸಿತು. ತೆರೆದ ಬಾಗಿಲು ನೀತಿಯ ಅಂಶಗಳು ;

a) ಚೀನಾದಲ್ಲಿನ ಪಾಶ್ಚಾತ್ಯ ಹಿತಾಸಕ್ತಿ ವಲಯಗಳಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು.

b) ಚೀನಿಯರ ಸುಂಕದ ವಿಷಯದಲ್ಲಿ ಪಾಶ್ಚಾತ್ಯರು ಪ್ರವೇಶಿಸಕೂಡದೆಂದು

c) ರೈಲ್ವೆದರ ಮತ್ತು ಬಂದರು ತೆರಿಗೆಗಳ ದರದಲ್ಲಿ ತಾರತಮ್ಯ ನಿವಾರಿಸಬೇಕೆಂದು ತಿಳಿಸಿದ್ದನು. ಅಲ್ಲದೇ

d) ಗಣಿ ಉದ್ಯಮ ರೈಲ್ವೆ ಮಾರ್ಗ ನಿರ್ಮಾಣದ ರಿಯಾಯಿತಿ ಮತ್ತು ಬಂಡವಾಳದ ಬಗ್ಗೆ ಪ್ರಸ್ತಾಪಿಸಿರಲಿಲ್ಲ.

e) ಅಂತೆಯೆ ಚೀನಾದ ಪ್ರಾದೇಶಿಕ ಭದ್ರತೆಯ ಪ್ರಶ್ನೆಯು ಸಮಸ್ಯಾತ್ಮಕವಾಗಿದ್ದರಿಂದ ಅದರ ಗೋಜಿಗೇ ಹೋಗಲಿಲ್ಲ. ಜಾನ್ ಹೇ ಕಳುಹಿಸಿದ ಸುತ್ತೋಲೆಗೆ ಯಾವ ರಾಷ್ಟ್ರವು ತಕ್ಷಣ ಪ್ರತಿಕ್ರಿಯಸಲಿಲ್ಲ. ನಂತರ ಮೊದಲಿಗೆ ರಷ್ಯಾ ವ್ಯಾಪಾರದ ಸಮಾನ ಅವಕಾಶದ ಅಭಿಪ್ರಾಯದ ಬಗ್ಗೆ ಒಪ್ಪಿಗೆ ನೀಡಲು ನಿರಾಕರಿಸಿತು. ಬ್ರಿಟನ್ ಕೂಡ ಕೌಲೂನ್ ಮತ್ತು ವೈ ಹೈವೈ ಗಳಿಗೆ ಅನ್ವಯಿಸಲು ಮೊದಲು ಒಪ್ಪಲಿಲ್ಲ. ನಂತರ ಸಮ್ಮತಿಸಿತು. ಪರಿಣಾಮವಾಗಿ 1900ರಲ್ಲಿ ಅಮೇರಿಕಾ ಮತ್ತೆ ತೆರೆದ-

ಬಾಗಿಲು ನೀತಿಯನ್ನು ಪ್ರತಿಪಾದಿಸಿತು. ಹಾಗಾಗಿ ಅಮೇರಿಕಾ ಪ್ರತಿಪಾದಿಸಿದ ತೆರೆದ ಬಾಗಿಲು ನೀತಿ ಚೀನಾವನ್ನು ವಿದೇಶಿಯರು ಹರಿದು ಹಂಚಿಕೊಳ್ಳುವ ಸದ್ಯದ ಗಂಡಾಂತರದಿಂದ ತಪ್ಪಿಸಿದುವು. ಆದರೆ ಈ ನೀತಿಯು ಚೀನಾದ ಸಮಸ್ಯೆಗೆ ಸದಾ ಕಾಲಕ್ಕೆ ಅನ್ವಹಿಸಲು ಪರಿಹಾರದ ಸೂತ್ರವಾಗಿರಲಿಲ್ಲ.

## 131.5 ಚೀನಾದ ವಿಭಜನೆಯ ಭಯ ಮತ್ತು ಗಂಡಾಂತರದಿಂದ ಪಾರು.

ನಾವು ಈಗಾಗಲೆ ಚೀನಾದ ರಾಜಕೀಯ ಅಸಮರ್ಪಕತೆ ಮತ್ತು ಸೈನಿಕ ದುರ್ಬಲತೆಗಳ ಬಗ್ಗೆ ಹಾಗೂ ಅದನ್ನು ದುರುಪಯೋಗ ಪಡಿಸಿಕೊಂಡ ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಪ್ರಭುತ್ವಗಳ ಪ್ರಭಾವಿ ವಲಯಗಳನ್ನು ಸೃಷ್ಟಿಸಿಕೊಂಡ ಬಗ್ಗೆ ವಿವರಿಸಿದ್ದೇವೆ. ಹಾಗೂ ಚೀನಾದ ವಿಭಜನೆಯತ್ತ ಮುನ್ನಡೆದುದನ್ನು ಅಧ್ಯಯನ ಮಾಡಿದ್ದೇವೆ. ಆರ್ಥಿಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲೋಸದ ರಾಜಕೀಯ ಕೂಡ ಹಿತಾಸಕ್ತಿಗಳನ್ನು ಬೆಳೆಯಿಸಿಕೊಂಡ ಪಾಶ್ಚಿಮಾತ್ಯರು ಚೀನಾದ ಬಹು ಮುಖ್ಯ ಭೂಭಾಗಗಳಲ್ಲಿ ತಮ್ಮ ಪ್ರಭಾವಿ ವಲಯಗಳನ್ನು ಬೆಳೆಸಿ, ಆ ಪ್ರದೇಶಗಳನ್ನು ವಸಾಹತುಗಳನ್ನಾಗಿ ಪರಿವರ್ತಿಸುವ ಪ್ರಯತ್ನ ನಡೆಸಿದರು. ಪ್ರಭಾವಿ ವಲಯಗಳನ್ನು ಸ್ಥಾಪಿಸಿಲು ಐರೋಪ್ಯರು ಚೀನಾದ ಆರ್ಥಿಕ ಮತ್ತು ರಾಜಕೀಯ ದೌರ್ಬಲ್ಯಗಳನ್ನು ಬಳಸಿಕೊಂಡು ಅಸಮ ಒಪ್ಪಂದಗಳನ್ನು ಮಾಡಿಕೊಂಡರು. ಚೀನಿ ಸರ್ಕಾರ ಪಾಶ್ಚಾತ್ಯರನ್ನು ಎದುರಿಸುವ ಸಾಮರ್ಥ್ಯತೆ ಇಲ್ಲದ ಕಾರಣ ರಕ್ಷಣೆಗೆ ಫ್ರಾನ್ಸ್ ಜರ್ಮನಿ, ಬ್ರಿಟನ್ ಹಾಗೂ ಅಮೇರಿಕಗಳ ಜೊತೆ ಒಪ್ಪಂದಗಳಿಗೆ ಅನಿವಾರ್ಯವಾಗಿ ಸಹಿ ಮಾಡಿ ಎಲ್ಲ ಷರತ್ತುಗಳನ್ನು ಒಪ್ಪಿಕೊಂಡಿತು. ಕೊರಿಯಾದ ಮೇಲಿನ ಹಿತಾಸಕ್ತಿ ಹೊಂದಿದ್ದ ಜಪಾನ್ ಕೂಡ ಚೀನಾವನ್ನು ಯುದ್ಧದಲ್ಲಿ ಸೋಲಿಸಿ ಷಿಮನೋಸಕಿ ಒಪ್ಪಂದದ ಮೂಲಕ ಚೀನಾವನ್ನು ಕೊರಿಯಾದಿಂದ ಹೊರಗಟ್ಟಿತು. ಹಾಗಾಗಿ 19ನೇ ಶತಮಾನದ ಕೊನೆಯ ವೇಳೆಗೆ ಬಹುತೇಕ ಪ್ರಮಾಥ ಬಂದರುಗಳು ಅಂದರೆ ಪರ್ಯಾಯ ದ್ವೀಪಗಳು ಮತ್ತು ಮುಖ್ಯ ಭೂಮಿಗಳನ್ನು ಒತ್ತೆಯಿಟ್ಟಿದ್ದ ಚೀನಾ ರಾಜಕೀಯ ಸಮರ್ಥತೆ ಇಲ್ಲದ ಕಾರಣ ಸಂಪೂರ್ಣವಾಗಿ ಪಾಶ್ಚಿಮಾತ್ಯರ ವಸಾಹತುವಾಗಿ ಪರಿವರ್ತಿತವಾಗುವ ಸಂದರ್ಭ ಸನ್ನಿಹಿತವಾಗಿತ್ತು. ಈ ಬೆಳವಣಿಗೆ ಚೀನಾಕ್ಕೆ ಅಷ್ಟೇ ಅಲ್ಲದೆ ಏಷ್ಯಾದ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲೂ ಕೂಡ ಆತಂಕಕಾರಿಯಾಗಿತ್ತು. ಎಲ್ಲ ರೀತಿಯ ಸವಲತ್ತುಗಳನ್ನು ಮತ್ತು ರಿಯಾಯಿತಿಗಳನ್ನು ಪಡೆದುಕೊಂಡಿದ್ದ ಪಾಶ್ಚಿಮಾತ್ಯ ವಿದೇಶಿ ರಾಷ್ಟ್ರಗಳು ತಾವು ಹೊಂದಿದ್ದ ಪ್ರಭಾವಿ ವಲಯಗಳಲ್ಲಿ ಸ್ವತಂತ್ರ್ಯವಾದ ನೀತಿ ಅನುಸರಿಸಲು ಪ್ರಾರಂಭಿಸಿದ್ದವು. ಪ್ರಾಭಾವಿ ವಲಯಗಳು ಭಿನ್ನ ಪ್ರಾದೇಶಿಕ ನೆಲೆಗಳಲ್ಲಿದ್ದುದರಿಂದ ಹಿತಾಸಕ್ತಿಗಳ ಹಿನ್ನಲೆಯಲ್ಲಿ ಪಾಶ್ಚಿಮಾತ್ಯರ ನಡುವೆ ಕಿತ್ತಾಟ ಘರ್ಷಣೆಗಳು ಕಡಿಮೆಯಾಗಿ ಚೀನಾವನ್ನು ಪೋಷಣೆ ಮಾಡುವಲ್ಲಿ ಒಂದು ಮತ್ತೊಂದಕ್ಕೆ ಸಹಕಾರಿಯಾಗಿ ವರ್ತಿಸಲು ಪ್ರಾರಂಭಿಸಿದ್ದವು. ದುರ್ಬಲಗೊಂಡಿದ್ದ ಚೀನಾ ಪಾಶ್ಚಿಮಾತ್ಯರ ಆಟಿಕೆಯಾಗಿ ಬಳಕೆಯಾಗಿದ್ದು ಹರಿದು ಹಂಚಲು ಆ ರಾಷ್ಟ್ರಗಳು ತಮ್ಮ ತಮ್ಮಲೇ ಒಪ್ಪಂದ ಮಾಡಿಕೊಂಡಿದ್ದವು. ಚೀನಾದ ವ್ಯಾಪಾರ, ವಾಣಿಜ್ಯ ಮತ್ತು ತೆರಿಗೆ ನೀತಿ ಹಾಗೂ ಆದಾಯ ಸಂಗ್ರಹಣೆಗಳಲ್ಲಿದರ ಮೇಲೆ ವಿದೇಶಿ ಆಡಳಿತಗಳು ಅಧಿಕಾರ ಹೊಂದಿದ್ದು, ಮಂಚೂ ಸರ್ಕಾರ ವಿದೇಶಿಯರಿಂದ ಚೀನಿಯರನ್ನು ಸ್ವತಂತ್ರಗೊಳಿಸುವುದು ದುಸಾಧ್ಯವಾಗಿತು. ಆ ವೇಳೆಗಾಗಲೆ ಆಫೀಮು - ಯುದ್ಧಗಳ ನಂತರ ಚೀನಿಯರಿಗೆ ಎಲ್ಲ ರೀತಿಯ ಸಮಸ್ಯೆಗಳ ಅರಿವಾಗಿದ್ದು ಯುವಜನತೆ ಮತ್ತು ಸಾಮಾನ್ಯರಿಗೆ ಮಂಚೂ ಪ್ರಭುತ್ವ ಬೇಸರ ತಂದಿತು. ಚೀನಿಯರ ತೈಪಿಂಗ್ ದಂಗೆ ಮತ್ತು ಬಾಕ್ಸರ್ ದಂಗೆಗಳು ನೇರವಾಗಿ ಮಂಚೂ ದುರಾಡಳಿತವನ್ನು ಕೊನೆಗಾಣಿಸುವವುದೇ ಚೀನಾದ ರಾಜಕೀಯ ಭವಿಷ್ಯ ಸಾಧುವೆಂದು ತಿಳಿದಿದ್ದವು. ಹಾಗಾಗಿ ರಾಜಕೀಯ ಆಂದೋಲನ ಮತ್ತು ಕ್ರಾಂತ್ರಿಗಳೆ ಸರಿಯಾದ ಉತ್ತರವೆಂದು ಚೀನಿಯರು ಭಾವಿಸಿದ್ದವು. ಹಿತಾಸಕ್ತಿ ಮತ್ತು ಪ್ರಭಾವಿ ವಲಯಗಳನ್ನು ಬೆಂಬಲಿಸಿಕೊಂಡು ಸಾಮ್ರಾಜ್ಯ ಷಾಹಿ ಪ್ರಭುತ್ವಗಳು ಚೀನಾವನ್ನು ಹಂಚಿಕೊಂಡು ವಸಾಹತುಗಳನ್ನು ಸ್ಥಾಪಿಸಲು ಪ್ರಯತ್ನ ನಡೆಸಿದ್ದಕ್ಕೆ ಕಾಲಕ್ಕೆ ಕೆಲವು ಬದಲಾಣೆಗಳು ಸದ್ಯಕ್ಕೆ ವಿಭಜನೆಗೊಳಗಾಗುವ ಗಂಡಾಂತರದಿಂದ ಪಾರು ಮಾಡಿದವು. ಅವುಗಳೆಂದರೆ:

i) ಚೀನಾದ ಹಾಗೂ ಏಷ್ಯಾದ ರಾಜಕಾರಣದಲ್ಲಿ ಅಮೇರಿಕಾ ನೇರವಾಗಿ ಪ್ರವೇಶಿಸಿ ಪ್ರಭಾವಿ ವಲಯಗಳನ್ನು ಸ್ಥಾಪಿಸುವುದಕ್ಕೆ ಬದಲಾಗಿ 'ತೆರೆದ ಬಾಗಿಲು ನೀತಿ' ಯನ್ನು ಅನುಸರಿಸಲು ಐರೋಪ್ಯರಿಗೆ ಒತ್ತಾಯ ಹೇರಿತು. ಅಮೇರಿಕಾದ ಈ ತೆರೆದ ಬಾಗಿಲ ನೀತಿಯಿಂದ ಚೀನಾವು ಹರಿದು ಹಂಚಿ ಹೋಗುವ ಗಂಡಾಂತರದಿಂದ ಪಾರಾಯಿತು

ii) ಐರೋಪ್ಯ ರಾಷ್ಟ್ರಗಳಲ್ಲೆ ಪ್ರಬುದ್ಧಮಾನ ಅಸ್ತಿತ್ವದಲ್ಲಿದ್ದ ಗ್ರೇಟ್ ಬ್ರಿಟನ್ ಆಗತಾನೆ ಆಧುನೀಕರಣಗೊಂಡ ಸಾಮ್ರಾಜ್ಯಷಾಹಿ ದಾರಿ ಹಿಡಿದ ಜಪಾನಿನೊಂದಿಗೆ ಮೈತ್ರಿ ಒಪ್ಪಂದ ಮಾಡಿಕೊಳ್ಳುವ ಮೂಲಕ ಏಷ್ಯಾ ಭಾಗದಲ್ಲಿ ಸಮ ಬೆತ್ತತೆ ಕಾಪಿಡಿಕೊಳ್ಳುವ ಉದ್ದೇಶವನ್ನು ಹೊಂದಿತ್ತು ಮತ್ತು ಆ ಮೂಲಕ ಪರೋಕ್ಷವಾಗಿ ಚೀನಾದ ರಾಜಕೀಯ ಅಸ್ತಿತ್ವವನ್ನು ಉಳಿಸಿತು.

iii) ಬೆಳೆದ ಸಾಮ್ರಾಜ್ಯಷಾಹಿ ಪ್ರಭುತ್ವಗಳ ವಸಾಹತು ನೀತಿ ಚೀನಾದಲ್ಲಿ ಅಲ್ಲದೆ ಪ್ರಪಂಚದ ಇತರೆ ಭಾಗಗಳಲ್ಲೂ ತಮ್ಮ ಹಿತಾಸಕ್ತಿಗಳ ಸಂಪರ್ಕಗಳಿಗೆ ಕಾರಣವಾಗಿದ್ದು, ಅದರ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಚೀನಾವನ್ನು ಹಂಚಿಕೊಳ್ಳುವ ಪ್ರಯತ್ನಕ್ಕೆ ತಡೆ ಹಾಕಿ ಕೊಂಡವು.

iv) ಅಲ್ಲದೆ ಅಫೀಮು ಯುದ್ಧಗಳ ನಂತರ ಚೀನಾ ಐರೋಪ್ಯ ರಾಷ್ಟ್ರಗಳೊಡನೆ ಅಸಮ ಒಪ್ಪಂದಗಳನ್ನು ಮಾಡಿಕೊಂಡು ದುರ್ಬಲ ಸ್ಥಿತಿಯನ್ನು ತಲುಪಿದ್ದು, ಅದನ್ನು ಮನಗಂಡ ಚೀನಿ ಯುವ ಜನತೆ ಪ್ರತಿಭಟಿಸಲು ಪ್ರಾರಂಭಿಸಿತು. ಹಾಗಾಗಿ ತೈಪಿಂಗ್ ದಂಗೆ ಮತ್ತು ಮುಖ್ಯವಾಗಿ ಬಾಕ್ಸರ್ ದಂಗೆ ಮಂಚೂಗಳ, ಪಾಶ್ಚಿಮಾತ್ಯರ ಮತ್ತು ಕ್ರೈಸ್ತರ ವಿರುದ್ಧದ ಹೋರಾಟವಾಗಿತ್ತು. ಮತ್ತು ಬಾಕ್ಸರ್ ದಂಗೆ ಬಹು ಮಟ್ಟಿಗೆ ಐರೋಪ್ಯರ ಚೀನಾದಲ್ಲಿನ ವಸಾಹತು ನೀತಿಯನ್ನು ತಡೆಗಟ್ಟಿತು.

v) ಕೊನೆಯದಾಗಿ, ಚೀನಾದ ಬಗ್ಗೆ ಐರೋಪ್ಯ ರಾಷ್ಟ್ರಗಳು ಹೊಂದಿದ್ದ ಭಾವನೆ ಅಂದರೆ ಈ ವೇಳೆಗಾಗಲೆ ಹಲವಾರು ಬಾರಿ ಪಾಶ್ಚಿಮಾತ್ಯರಿಂದ ಅವಮಾನಿತಗೊಂಡ ಚೀನಾ ಯಾವ ಸಂದರ್ಭದಲ್ಲಿ ಬೇಕಾದರೂ ಎಚ್ಚರಗೊಂಡು ಸಾಮ್ರಾಜ್ಯಶಾಹಿ ನೀತಿ ಮತ್ತು ವಸಾಹತು ಶಾಹಿ ನೀತಿಯ ವಿರುದ್ಧ ತಿರುಗಿ ಬೀಳಬಹುದೆಂಬ ಆತಂಕ ಕೂಡ ಐರೋಪ್ಯರಲ್ಲಿದ್ದು, ಚೀನಾದಲ್ಲಿ ವಸಾಹತು ಧೋರಣೆಯನ್ನು ಕೈ ಬಿಟ್ಟವು. ಹಾಗಾಗಿ ಒಟ್ಟಾರೆ ಮೇಲೆ ವಿವರಿಸಿದ ಹಲವು ಘಟನೆಗಳ ಮತ್ತು ಹಿತಾಸಕ್ತಿಗಳು ಚೀನಾ ವಿಭಜಿತವಾಗುವ ಗಂಡಾಂತರದಿಂದ ತಪ್ಪಿಸಿದವು ಮತ್ತು ಅದರಿಂದುಟಾಗುವ ಪರಿಣಾಮಗಳು ಕೂಡ ಬದಲಾದ ದಾರಿ ಹಿಡಿದವು.

## 131.6 ಒಟ್ಟಾರೆ ಸಾರಾಂಶ ನೀಡುವ ಬನ್ನಿ.

ಪ್ರಾಚೀನ ಕಾಲದಿಂದಲೂ ಚೀನಾ ತನ್ನ ಸಂಸ್ಕೃತಿ, ಸಾಹಿತ್ಯ ಮತ್ತು ಧರ್ಮ ಹಾಗೂ ರಾಜಕೀಯ ಬೆಳವಣಿಗೆಯಲ್ಲಿ ವಿಶಿಷ್ಟತೆಯನ್ನು ಹೊಂದಿದ್ದು, ಆಧುನಿಕ ಕಾಲದವರೆಗೂ ತನ್ನ ಐಕ್ಯತೆಯನ್ನು ಕಾಪಾಡಿಕೊಂಡು ಬಂದಿತ್ತು. ಚೀನಿ ವಸ್ತುಗಳಿಗಾಗಿ ತಮ್ಮ ವ್ಯಾಪಾರಿ ಆಸಕ್ತಿಗಳನ್ನು ಬೆಳೆಯಿಸಿಕೊಂಡ ಐರೋಪ್ಯರು ಸವಲತ್ತುಗಳಿಗಾಗಿ ಚೀನಾದಲ್ಲಿ ಹುಡುಕಾಟ ನಡೆಸಿದ್ದರು. ವಿದೇಶಿಯರನ್ನು ಕ್ರೂರಿಗಳು ಮತ್ತು ಅನಾಗರೀಕರೆಂದೆ ಪರಿಗಣಿಸಿದ್ದ ಚೀನಾ ಪಾಶ್ಚಿಮಾತ್ಯರನ್ನು ದೂರವಿಟ್ಟಿದ್ದು ಅಫೀಮು ಬಳಕೆ ಚೀನಯರನ್ನು ದುರ್ಬಲಗೊಳಿಸಿತು. ವಿದೇಶಿಯರ ಜೊತೆ ವ್ಯಾಪಾರ ನಡೆಸಲು ಚೀನಾ ಮಧ್ಯ ವರ್ತಿಗಳಾದ ಕೋಹಾಂಗ್ ವ್ಯಾಪಾರಿ ವರ್ಗವನ್ನು ಬಳಸಿಕೊಂಡಿದ್ದು. ವಿದೇಶಿಯರನ್ನು ಕೆಲವೆ ದ್ವೀಪಗಳಿಗೆ ಸೀಮಿತಗೊಳಿಸಿತ್ತು. ಚೀನಾದಲ್ಲಿ ಅಫೀಮು ದುರ್ಬಳಕೆಯನ್ನು ಬಳಸಿಕೊಂಡ ಪಾಶ್ಚಿಮಾತ್ಯ ವ್ಯಾಪಾರ ಸಂಪರ್ಕ ಮತ್ತು ಅಸಮ ಒಪ್ಪಂದಗಳನ್ನು ಮಾಡಿಕೊಂಡು 19ನೇ ಶತಮಾನದ ವೇಳೆಗೆ ರಷ್ಯ ಮತ್ತು ಜಪಾನನ್ನು ಒಳಗೊಂಡಂತೆ ಎಲ್ಲ ಐರೋಪ್ಯ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು ಬೆಳೆಯಿಸಿಕೊಂಡಿದ್ದು ವ್ಯಾಪಾರಿ ಹಕ್ಕುಗಳನ್ನು ಗಳಿಸಿದ್ದವು. ಪಾಶ್ಚಿಮಾತ್ಯರ ಒಳನುಗ್ಗುವಿಕೆಯಿಂದಾಗಿ ಚೀನಿಯರು. ಅಸಮ ಒಪ್ಪಂದಗಳನ್ನು ಮಾಡಿಕೊಂಡು ಪಾಶ್ಚಾತ್ಯರ ಅಧಿಕಾರಗಳನ್ನು ಮತ್ತು ವಸ್ತುಗಳನ್ನು ತಮಗೆ ಇಚ್ಛೆಯಿಲ್ಲದಿದ್ದರೂ ಒಪ್ಪಿಕೊಂಡರು. ಇದರಿಂದಾಗಿ ಚೀನಿಯರು ಪ್ರತ್ಯೇಕತೆಯೂ ಕೊನೆಗೊಂಡಿತು. ಪ್ರಾದೇಶಿಕ ಹಿಡಿತ, ವ್ಯಾಪಾರ ವ್ಯಾಪಾರಿ ಸುಂಕ, ಸಾರಿಗೆ ವ್ಯವಸ್ಥೆ ಮತ್ತು ಅಂಚೆ ಪದ್ಧತಿಗಳೆಲ್ಲವನ್ನು ಹಿಡಿತಕ್ಕೆ ತೆಗೆದುಕೊಂಡ ಐರೋಪ್ಯರು ಚೀನಾವನ್ನು ಲೂಟಿ ಮಾಡುವುದಿಲ್ಲ. ಪೈಪೋಟಿ ನಡೆಸಿದ್ದರು. ಪರಿಣಾಮ ಪ್ರಾದೇಶಿಕವಾಗಿ ವಿಭಜಿತಗೊಂಡು ಐರೋಪ್ಯರ ಹಿಡಿತಕ್ಕೊಳಗಾದ ಚೈನಾದ ಸ್ಥಿತಿ ಒಡೆದ ಕಲ್ಲಂಗಡಿ ಹೋಳಿನಂತಾಯಿತು.

1894-95ರ ಚೀನಾ ಜಪಾನಿನ ಯುದ್ಧ, ಚೀನಾದ ಸೋಲು ಕುಳ್ಳ ರಾಷ್ಟ್ರ ಜಪಾನಿನ ಗೆಲುವು ಮತ್ತು ಐರೋಪ್ಯರಂತೆ ಜಪಾನ್ ಕೂಡ ಏಷ್ಯಾದಲ್ಲಿ ರಾಜಕೀಯ ಹಿತಾಸಕ್ತಿಗಳನ್ನು ಬೆಳೆಯಿಸಿಕೊಳ್ಳಲು ದಾರಿಮಾಡಿಕೊಟ್ಟಿತು. ಹಾಗಾಗಿ 19ನೇ ಶತಮಾನದ ಕೊನೆಯ ವೇಳೆಗೆ ಅಮೇರಿಕಾ ಜಪಾನ್ ಮತ್ತು ರಷ್ಯಾವನ್ನು ಒಳಗೊಂಡಂತೆ ಎಲ್ಲ ಐರೋಪ್ಯ ರಾಷ್ಟ್ರಗಳು ಚೀನಾ ಮತ್ತು ಸುತ್ತಣ ಭೂಪ್ರದೇಶಗಳಲ್ಲಿ ಪ್ರಾದೇಶಿಕ ಹಿಡಿತಗಳನ್ನೊಳಗೊಂಡಿದ್ದು, ತಮ್ಮದೆ ಆದ ಪ್ರಭಾವಿ ವಲಯಗಳನ್ನು ಸ್ಥಾಪಿಸಿಕೊಂಡರು. ರಷ್ಯ, ಜರ್ಮನಿ ಮತ್ತು ಫ್ರಾನ್ಸಿನ ಜತೆಗೂಡಿ ಜಪಾನಿನ ವಿರುದ್ಧ, ಮಧ್ಯ ಪ್ರದೇಶ ಮಾಡಿ, ಯುದ್ಧ ನಷ್ಟ ಪರಿಹಾರ, ತುಂಬಿಕೊಡಬೇಕಾದ ಚೀನಾದ ಬೆಂಬಲಕ್ಕೆ ನಿಂತು ಮಂಚೂರಿಯಾದಿಂದ ವ್ಲಾಡಿವೊಸ್ತಾತು ಸಮೀಪದನರೆಗೆ ರೈಲ್ವೆ ಮಾರ್ಗ ನಿರ್ಮಿಸಿ, ಮಂಚೂರಿಯಾದ ಮೇಲೆ ತನ್ನ ಹಿಡಿತ ಸಾಧಿಸಿತು. ಪೀಕಿಂಗ್ ಒಪ್ಪಂದದ ನಂತರ ಜರ್ಮನಿ ಪೀಕಿಂಗ್ ರಾಯಭಾರಿ ಕಳುಹಿಸಿ. 1897ರಲ್ಲಿ ಷಾಂಟುಂಗ್ ಪ್ರಾಂತ್ಯದಲ್ಲಿನ ಕಿಯೋಚೌ ಕೊಲ್ಲಿಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತ್ತು. ಷಾಂಟುಂಗ್ ಪ್ರದೇಶದಲ್ಲಿ ಬಂಡವಾಳ ತೊಡಗಿಸುವ ಮೂಲಕ ಪ್ರಾದೇಶಿಕ ವಿಶೇಷ ಹಕ್ಕನ್ನು ಪಡೆದುಕೊಂಡಿತು. ಫ್ರಾನ್ಸ್ ಕೂಡ ದಕ್ಷಿಣ ಚೀನಾದಲ್ಲಿ ತನ್ನ ಹಿತಾಸಕ್ತಿಗಳನ್ನು ಬೆಳೆಯಿಸಿಕೊಂಡಿದ್ದು, 1895ರಲ್ಲಿ ಚೀನೀ ಸರ್ಕಾರ ಕ್ವಾಂಗ್ಸಿ. ಕ್ವಾಂಗ್‌ಟುಂಗ್ ಮತ್ತು ಯುನಾನ್ ಪ್ರಾಂತ್ಯಗಳಲ್ಲಿ ಹೊಸಗಣಿ ಉದ್ಯಮಗಳನ್ನು ಪ್ರಾರಂಭಿಸಲು ಫ್ರೆಂಚ್ ಇಂಜಿನೀಯರ್‌ಗಳಿಗೆ ಆದ್ಯತೆ ಕೊಟ್ಟಿದ್ದು, ಆಯಾಕಟ್ಟಿನ ಪ್ರದೇಶವಾಗಿದ್ದ ಹೈನಾನ್ ದ್ವೀಪವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತು. ಚೀನಾದಲ್ಲಿ ಹೆಚ್ಚಿನ ಪ್ರಾಬಲ್ಯ ಸಂಪಾದಿಸಿಕೊಂಡು, ಅಫೀಮು ಯುದ್ಧಗಳಲ್ಲಿ ಚೀನಾವನ್ನು ಸೋಲಿಸಿ ಟೈನ್‌ಸ್ಟೀನ್ ಮತ್ತು ಪೀಕಿಂಗ್ ಒಪ್ಪಂದದ ಕರಾರುಗಳನ್ನು ಸೋಲಿಸಿ ಟೈನ್‌ಸ್ಟೀನ್ ಮತ್ತು ಪೀಕಿಂಗ್ ಒಪ್ಪಂದದ ಕರಾರುಗಳನ್ನು ವಿಧಿಸಿದ್ದು ಗ್ರೇಟ್ ಬ್ರಿಟನ್ 1890ರ ದಶಕದ ಬೆಳವಣಿಗೆಗಳನ್ನು ಗಂಭೀರವಾಗಿ ಪರಿಗಣಿಸಿ, 1898ರಲ್ಲಿ ಯಾಂಗ್ಸೀಸ್ ಕಣಿವೆ ಪ್ರದೇಶದಲ್ಲಿ ವಿಶೇಷ ಹಕ್ಕುಗಳನ್ನು ಪಡೆದುಕೊಂಡು, ರಾಜತಾಂತ್ರಿಕ ಸಂಬಂಧಗಳನ್ನು [illegible]ಗೊಳಿಸಿತು. ನಂತರ ರಷ್ಯ ಪೋರ್ಟ್

ಆರ್ಥರ್ ಮೇಲೆ ಹತೋಟಿ ಸಾಧಿಸಿದಾಗ ಬದಲಾಗಿ ಬ್ರಿಟನ್ ಷಾಂಟುಂಗ್ ಪ್ರಾಂತ್ಯದ ವೈ ಹೈ ವೈ ನ್ನು ಗುತ್ತಿಗೆಗೆ ಪಡೆಯಿತು. ಮತ್ತು ಕೌಲಾನ್ ದ್ವೀಪದ ಮೇಲಿನ ತನ್ನ ಹಿಡಿತವನ್ನು ವಿಸ್ತರಿಸಿ ಇಡಿ ಪರ್ಯಾಯ ದ್ವೀಪದ ಮೇಲೆ ಅಧಿಪತ್ಯ ಸಾಧಿಸಿತು. ಪಾಶ್ಚಾತ್ಯ ರಾಷ್ಟ್ರಗಳು ಚೀನಾದಲ್ಲಿ ಪಡೆದ ಈ ವಿಶೇಷ ಸವಲತ್ತುಗಳು ಮತ್ತು ಗುತ್ತಿಗೆ ಪ್ರದೇಶಗಳು ಮೂಲತಹ ಚೀನಾವನ್ನು ವಿಭಜಿಸುವ ಉದ್ದೇಶಗಳನ್ನು ಹೊಂದಿದ್ದವು. ಚೀನಿಯರ ರಾಜಕೀಯ ಅಸಮರ್ಥತೆ ಮತ್ತು ಸೈನಿಕ ದೌರ್ಬಲ್ಯವನ್ನು ದುರುಪಯೋಗ ಪಡೆಸಿಕೊಂಡ ಐರೋಪ್ಯರು ಮತ್ತು ಜಪಾನ್ ಚೀನಾದ ಪ್ರಾದೇಶಿಕ ಹಿಡಿತಗಳನ್ನು ಬಿಗಿಗೊಳಿಸಿ ಭೌಗೋಳಿಕವಾಗಿ ಚೀನಾ ರಾಷ್ಟ್ರವನ್ನೆ ವಿಭಜಿಸಲು ಮುಂದಾಗಿದ್ದವು. 1860ರ ಸಂದರ್ಭದ ಅಂತರ್ ಯುದ್ಧ ಮತ್ತು 1890ರ ದಶಕದ ಸ್ಪೈನಿನೊಡನೆ ಯುದ್ಧದಲ್ಲಿ ತೊಡಗಿದ್ದ ಅಮೇರಿಕಾ 19ನೇ ಶತಮಾನದ ಕೊನೆಯವರೆವಿಗೂ ಏಷ್ಯಾದ ರಾಜಕಾರಣದಲ್ಲಿ ತಲೆ ಹಾಕಿರಲಿಲ್ಲ. ಫಿಲಿಪೈನ್ಸ್‌ನ್ನು ವಶಪಡಿಸಿಕೊಂಡ ನಂತರ ತನ್ನ ಒಡೆದ ಹಡಗುಗಳಿಗೆ ಮತ್ತು ಉಗಿ ಶಕ್ತಿಯು ಬಳಕೆಗೆ ಕಲ್ಲಿದ್ದಿಲನ್ನು ಸಂಗ್ರಹಿಸಿಡಲು ಮೊದಲಿಗೆ ಚೀನಾ ಮತ್ತು ಜಪಾನಿ ಸಮುದ್ರ ತೀರಗಳಲ್ಲಿ ಹಿತಾಸಕ್ತಿಗಳನ್ನು ಹೊಂದಿತ್ತು. ಚೀನಾದಲ್ಲಿ ಪ್ರಾದೇಶಿಕ ಹಿತಾಸಕ್ತಿಗಳಿಗಾಗಿ ಐರೋಪ್ಯರು ಪೈಪೋಟಿ ನಡೆಸಿ ಹರಿದು ಹಂಚಿಕೊಳ್ಳಲು ಪ್ರಾರಂಬಿಸಿದಾಗ, ಅಮೇರಿಕಾ ತನ್ನ ವ್ಯಾಪಾರಿ ಹಿತಾಸಕ್ತಿಗಳನ್ನು ಉಳಿಸಿಕೊಳ್ಳಲು ತೆರೆದ ಬಾಗಿಲ ನೀತಿಯನ್ನು ಜಾರಿಯಲ್ಲಿ ತಂದಿತು. ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿಯಾದ ಜಾನ್ ಹೇ ತೆರೆಗೆ ಬಾಗಿಲು ನೀತಿಯನ್ನು ಪ್ರತಿ ಪಾದಿಸಿದ್ದನು. ಚೀನಾದಲ್ಲಿ ಐರೋಪ್ಯರು ಪ್ರಭಾವಿವಲಯಗಳನ್ನು ನಿರ್ಮಿಸಿಕೊಂಡಿದ್ದು. ಅವುಗಳನ್ನು ವಸಾಹತುಗಳಾಗಿ ಮಾರ್ಪಡಿಸುವ ಹವಣಿಕೆಯಲ್ಲಿದ್ದರು. ಹಾಗಾಗಿ ಅಮೇರಿಕಾದ ತೆರೆದ ಬಾಗಿಲ ನೀತಿ ಐರೋಪ್ಯರ ಚೀನಿ ವಸಾಹತು ನೀತಿಯನ್ನು ವಿರೋಧಿಸುವ ಮತ್ತು ತಡೆಗಟ್ಟುವ ಪ್ರಯತ್ನವೆ ಆಗಿತ್ತು. ಮತ್ತು ಚೀನಾದಲ್ಲಿನ ವ್ಯಾಪಾರಕ್ಕೆ ಎಲ್ಲರಿಗೂ ಸಮಾನವಾದ ಅವಕಾಶಗಳು, ಸ್ವತಂತ್ರ್ಯ ಚೀನಿ ಸುಂಕ ನೀತಿ, ರೈಲ್ವೆ ಮತ್ತು ಗಣಿ ಉದ್ಯಮಗಳಲ್ಲಿ ಪಾಶ್ಚಾತ್ಯರನ್ನು ತಡೆಯುವುದು ಪ್ರಮುಖ ಉದ್ದೇಶವಾಗಿತ್ತು. ಹಾಗಾಗಿ ಅಮೇರಿಕಾದ ತೆರೆದ ಬಾಗಿಲು ನೀತಿ. ಚೀನಾದಲ್ಲಿ ಸವಲತ್ತುಗಳಿಗಾಗಿ ಪಾಶ್ಚಿಮಾತ್ಯರ ಹುಡುಗಾಟ ಮತ್ತು ನೇರ ಪೈಪೋಟಿ, ಮಂಚೂ ಅಸಮರ್ಥತೆ ಮತ್ತು ಅಸಮ ಒಪ್ಪಂದಗಳ ವಿರುದ್ಧ ಚೀನಿ ಜನತೆಯ ಹೋರಾಟಗಳು ಅದರಲ್ಲೂ ತೈಪಿಂಗ್ ದಂಗೆ ಮತ್ತು ಬಾಕ್ಸರ್ ದಂಗೆಗಳು ಮತ್ತು 20ನೇ ಶತಮಾನದ ಪ್ರಾರಂಭದಲ್ಲಿ ಆದ ಆಂಗ್ಲೋ- ಜಪಾನಿಯರ ಮೈತ್ರಿ ಒಪ್ಪಂದ ಹೆಚ್ಚಿನದಾಗಿ ಪಾಶ್ಚಿಮಾತ್ಯರಿಗೆ ಚೀನಿಯರ ಚೀನಾದೇಶದ ಶಕ್ತಿಯ ಬಗ್ಗೆಗಿದ್ದ ಭಯ, ಇವೆಲ್ಲವೂ ಚೀನಾವನ್ನು ಐರೋಪ್ಯರ ಹರಿದು ಹಂಚುವ ಗಂಡಾಂತರದಿಂದ ಪಾರು ಮಾಡಿದವು. ಆದರೆ ಪ್ರಭಾವಿ ವಲಯಗಳಲ್ಲಿ ಸವಲತ್ತುಗಳನ್ನು ಪಡೆದ ಐರೋಪ್ಯ ರಾಷ್ಟ್ರಗಳು ಜಪಾನನ್ನು ಬಳಸಿಕೊಂಡಂತೆ ತಮ್ಮ ಹಿಡಿತದೊಂದಿಗೆ ವ್ಯಾಪಾರ ಮತ್ತು ವಾಣಿಜ್ಯಗಳನ್ನು ಮುಂದುವರೆಸಿದವು.

## 131.7 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ.

**I** ಕೆಳಗಿನ ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ.

a) ಜನರಲ್ ಜಾನ್ ಹೇ

b) ಮಂಚೂರಿಯ ಸೈಬೀರಿಯನ್ ರೈಲ್ವೆ.

c) ಪೀಕಿಂಗ್ ಒಪ್ಪಂದ

**II** ಕೆಳಗಿನವುಗಳಿಗೆ 15ಸಾಲನ್ನು ಮೀರದಂತೆ ಉತ್ತರಿಸಿ

1) ಚೀನಾದ ಮೇಲಿನ ವಿದೇಶಿಯರ ಧಾಳಿಗಳನ್ನು ವಿವರಿಸಿ.

2) ಚೀನಿ ಏಕಾಂತತೆಯ ನೀತಿಯನ್ನು ವಿವರಿಸಿ.

3) ಉಂಡಿ ಕಲ್ಲಂಗಡಿ ಒಡೆದು ಹೋಳಾದ ಪ್ರಶ್ನೆಯನ್ನು ವಿವರಿಸಿ.

**III** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1) 19ನೇ ಶತಮಾನದ ಕೊನೆಯ ದಶಕದಲ್ಲಿ ಚೀನಾವನ್ನು ವಿಭಜಿಸಲು ಐರೋಪ್ಯರು ಮಾಡಿದ ಪ್ರಯತ್ನಗಳನ್ನು ವಿವರಿಸಿ

2) ಅಮೇರಿಕಾದ ತೆರೆರ ಬಾಗಿಲು ನೀತಿಯನ್ನು ಕುರಿತು ಬರಯಿರಿ.

3) ಚೀನಾ ವಿಭಜನೆಯ ಗಂಡಾಂತರದಿಂದ ಪಾರಾಗಲು ಕಾರಣಗಳೇನು.

## 131.8 ಹೆಚ್ಚಿನ ಅಧ್ಯಯನಕ್ಕೆ ಆಕರಗಳು


1) John.X.Harrison : China since 1800. A.D.

2) K.S. Latourette : History of the Far east.

3) Inmanneus.C.Y. Hsu : The Rise of Modern China.


ಪ್ರೊ. ಷಡಕ್ಷರಯ್ಯ

# ಘಟಕ - 132

# 1894 - 950 ಚೀನಾ ಜಪಾನ್ ಯುದ್ಧ

132.0 ಧ್ಯೇಯೋದ್ದೇಶಗಳು

132.1 ಪೀಠಿಕೆ

132.2 ಚೀನಾ - ಯುದ್ಧದ ಹಿನ್ನೆಲೆ

132.3 ಚೀನಾ - ಜಪಾನ್ ಯುದ್ಧಕ್ಕೆ ಕಾರಣಗಳು

- 132.3.1 ಕೊರಿಯಾದಲ್ಲಿನ ಜಪಾನಿಯರ ಹಿತಾಸಕ್ತಿ
- 132.3.2 ಕೊರಿಯಾದಲ್ಲಿ ರಷ್ಯನ್ನರ ವಿಸ್ತರಣಾ ನೀತಿ
- 133.3.3 ಆರ್ಥಿಕ ಹಿತಾಸಕ್ತಿಗಳು
- 133.3.4 ಕೊರಿಯಾದಲ್ಲಿನ ಆಂತರೀಕ ಸಮಸ್ಯೆಗಳು
- 133.3.5 ಟಾಂಗಾರ್ಕ್ ಅಥವಾ ಟಾಂಗ್‌ಹಾಕ್ ದಂಗೆ
- 133.3.6 ಐರೋಪ್ಯ ರಾಷ್ಟ್ರಗಳ ನಡವಳಿಕೆ

132.4 ಯುದ್ಧದ ಘಟನೆಗಳು

132.5 1895 ರ ಷಿಮನೋಸರೆ ಒಪ್ಪಂದ

133.6 ಯುದ್ಧದ ಪರಿಣಾಮಗಳು

132.7 ಒಟ್ಟಾರೆ ಸಾರಾಂಶ ನೀಡುವ ಬನ್ನಿ

132.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

132.9 ಹೆಚ್ಚಿನ ಅಧ್ಯಯನಕ್ಕೆ ಆಕರಗಳು

## 132.0 ಧ್ಯೇಯೋದ್ದೇಶಗಳು

ಈ ಯೂನಿಟ್‌ನಲ್ಲಿ ನಾವು ವಿವರಿಸುವ ಮತ್ತು ಚರ್ಚಿಸುವ ವಿಚಾರಗಳೆಂದರೆ ಯುದ್ಧಕ್ಕೆ ಮುನ್ನ ಚೀನಾ ಮತ್ತು ಜಾಪನಿನ ನಡುವಿನ ಸಂಬಂಧಗಳು ಕೊರಿಯ ಮತ್ತು ಚೀನಾದ ಐತಿಹಾಸಿಕ ಹಿನ್ನಲೆ ಕೊರಿಯಾದ ಆಂತರೀಕ ಸ್ಥಿತಗಳು ಮತ್ತು ಚೀನಾ ಮತ್ತು ಜಪಾನ್ ಯುದ್ಧಕ್ಕೆ ಕಾರಣವಾದ ಅಂಶಗಳು, ಷಿಮನೋಸಕಿ ಒಪ್ಪಂದ ಮತ್ತು ಪರಿಣಾಮಗಳು. ನಾವು ಪಾಠವನ್ನು ಅಧ್ಯಯನ ಮಾಡಿದ ನಂತರ ತಿಳಿಯಬಹುದಾದ ವಿಷಯಗಳು :

* ಚೀನಾ ಮತ್ತು ಜಪಾನಿನ ನಡುವಿನ ಪ್ರಾರಂಭಿಕ ಸಂಬಂಧಗಳು.
* ಕೊರಿಯಾದಲ್ಲಿನ ಚೀನಿಯರ ರಾಜಕೀಯ ಹಿತಾಸಕ್ತಿಗಳು.
* ಕೊರಿಯಾದಲ್ಲಿ ಜಪಾನಿಯರ ರಾಜಕೀಯ ಹಿತಾಸಕ್ತಿಗಳು.
* ದೇಶೀಯ ಟಾಂಗಾರ್ಕ್ ಅಥವಾ ಟಾಂಗ್ ಹಾಕ್ ದಂಗೆ.
* ಚೀನಾ ಮತ್ತು ಜಪಾನೀ ಸೈನ್ಯ ಸಹಾಯ.
* ಕೊರಿಯಾದಲ್ಲಿನ ಐರೋಪ್ಯರ ನಡವಳಿಕೆಗಳು ಮತ್ತು ಸಂಬಂಧಗಳು.
* ಕೊರಿಯಾದಲ್ಲಿನ ಐರೋಪ್ಯಂರ ನಡವಳಿಕೆಗಳು ಮತ್ತು ಸಂಬಂಧಗಳು.
* 1894 - 95 ರ ಚೀನಾ ಜಪಾನ್ ಯುದ್ಧ ಘಟನೆಗಳು.
* 1895 ರ ಷಿಮನೋಸರೆ ಒಪ್ಪಂದ ಮತ್ತು ಒಪ್ಪಂದದ ಕರಾರುಗಳು ಮತ್ತು
* ಚೀನಾ ಜಪಾನ್ ಯುದ್ಧದ ಪರಿಣಾಮಗಳು.

## 132.1 ಪೀಠಿಕೆ

ಪ್ರಾಚೀನ ಕಾಲದಿಂದಲೂ ಕೊರಿಯಾ ರಾಜಕೀಯವಾಗಿ ಮತ್ತು ಸಂಸ್ಕೃತಿಕವಾಗಿ ಚೀನಾಕ್ಕೆ ಅಂಟಿಕೊಂಡಿದ್ದು ಭೌಗೋಳಿಕವಾಗಿ ಯಾಲೂ ನದಿಯು ಮಂಚೂರಿಯಾ ಮತ್ತು ಕೊರಿಯಾಗಳ ನಡುವಿನ ಪ್ರಾಕೃತಿಕ ಗಡಿಯಾಗಿದ್ದ ಕೊರಿಯಾ ದಕ್ಷಿಣಕ್ಕೆ ಜಪಾನಿನ ಕಡೆ ಚಾಚಿಕೊಂಡಿದೆ. ಹಾಗಾಗಿ ಕೊರಿಯಾ ದೇಶದ ಇತಿಹಾಸ ಚೀನಾ, ಆದರಲ್ಲೂ ಪ್ರಮುಖವಾಗಿ ಮಂಚೂರಿಯ ಮತ್ತು ಜಾಪನ್ ದೇಶಗಳ ಇತಿಹಾಸದೊಡನೆ ಹೆಣೆದುಕೊಂಡಿದೆ. ರಾಜಕೀಯವಾಗಿ ಮೊದಲಿನಿಂದಲೂ ಕೊರಿಯಾ ಚೀನಾ ದೇಶದ ಸಾಮಂತ ರಾಜ್ಯವಾಗಿದ್ದು, ಕೊರಿಯಾದ ರಾಜರುಗಳು ಚೀನಿ ಪ್ರಭುತ್ವದ ರಾಜಧಾನಿ ಪೀಕಿಂಗ್‌ನಿಂದ ಆಜ್ಞೆ ಮತ್ತು ಸಹಕಾರ ಪಡೆದು ಆಳ್ವಿಕೆ ನಡೆಸಿದ್ದರು. 19 ನೇ ಶತಮಾನದ ಜಪಾನಿನ ಮೀಜಿ ಪುನರುತ್ಥಾನ ಜಪಾನ್ ಆಧುನೀಕರಣಗೊಳ್ಳಲು ಸ್ಫೂರ್ತಿ ನೀಡಿದ್ದು, ಶತಮಾನದ ಕೊನೆಯ ವೇಳೆಗೆ ವಿವಿಧ ಸುಧಾರಣೆಗಳ ಮೂಲಕ ಜಪಾನ್ ಕೂಡ ಪ್ರಗತಿ ಸಾಧಿಸಿವೆ ಮತ್ತು ಐರೋಪ್ಯ ರಾಷ್ಟ್ರಗಳಂತೆ ವಿಶ್ವದ ಭಾಗದಲ್ಲಿ ವಿಸ್ತರಣಾ ನೀತಿಯನ್ನು ಪ್ರಾರಂಭಿಸಿತು. ಹಾಗಾಗಿ ಚೀನಾವು ಅಧಿಕಾರದ ಹಿನ್ನಲೆಯಲ್ಲಿ ಜಪಾನಿಯರ ಸ್ಪರ್ಧೆಯನ್ನು ಎದುರಿಸಬೇಕಾಯಿತು. ಮಂಚೂನಗಳು ಚೀನಾದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದ ಮೇಲೆ ಚೀನಾ ಮತ್ತು ಜಪಾನ್‌ಗಳ ನಡುವೆ ಯಾವ ಅಧಿಕೃತ ಸಂಬಂಧಗಳು ಏರ್ಪಟ್ಟಿರಲಿಲ್ಲ.

1870 ರ ದಶಕದಲ್ಲಿ ಚೀನಾದೊಡನೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡ ಜಪಾನ್ ಕೊರಿಯಾದ ಮೇಲಿನ ಹಿಡಿತಕ್ಕಾಗಿ ಚೀನಾದೊಡನೆ ಸೆಣಸಾಟ ನಡೆಸಲು ಸಿದ್ಧವಾಯಿತು. ಕೊರಿಯಾದಲ್ಲಿನ ಆಂತರೀಕ ಸಮಸ್ಯೆಗಳು. ಚೀನಿಯರ ಪರವಾದ ಮತ್ತು ಜಪಾನಿ ಪರವಾದ ಗುಂಪುಗಳ ನಡುವಿನ ಘರ್ಷಣೆ, ದೇಶೀಯ ದಂಗೆ, ಕೊರಿಯನ್ನರ ಅಧಿಕಾರಕ್ಕೆ ಸವಾಲಾಗಿದ್ದು, ಚೀನಿಯರ ಸಹಾಯ ಪಡೆಯಲು ಕೊರಿಯಾ ಮುಂದಾಗಿತ್ತು. ಹಿತಾಸಕ್ತಿಯನ್ನು ಹೊಂದಿದ್ದ ಜಪಾನ್ ಕೊರಿಯಾದ ಆಂತರೀಕ ವಿಚಾರದಲ್ಲಿ ತಲೆ ಹಾಕಿ, ಚೀನಿಯಂಚೂ ಪ್ರಭುತ್ವದ ದುರ್ಬಲತೆಯನ್ನು ಬಳಸಿಕೊಂಡು ಯುದ್ಧಕ್ಕೆ ಕೈಹಾಕಿತು. ಸುಧಾರಣೆಗಳ ಪ್ರಯೋಜನ ಪಡೆದ ಜಪಾನಿ ಆಡಳಿತ, ಸೈನಿಕ ಮತ್ತು ಉಪಕರಣಗಳಲ್ಲಿ ಆಧುನಿಕರಣಗೊಂಡಿದ್ದು, ತಾಂತ್ರಿಕವಾಗಿ ಪ್ರಬಲವಾಗಿದ್ದು, ಜಪಾನಿ ಸೈನ್ಯ ಚೀನಾವನ್ನು ಸುಲಭವಾಗಿ ಸೋಲಿಸಿತು ಹಾಗು ಷಿಮನೋಸಕಿ ಒಪ್ಪಂದದ ಮೂಲಕ ಷರತ್ತುಗಳನ್ನು ಹೇರಿದ ಜಪಾನ್ ಚೀನಾವನ್ನು ಅವಮಾನಕರವಾಗಿ ನಡೆಸಿಕೊಂಡಿತ್ತು.

## 132.2 ಚೀನಾ ಜಪಾನ ಯುದ್ಧದ ಹಿನ್ನೆಲೆ

ಕೊರಿಯಾದಲ್ಲಿನ ದಂಗೆ ಮತ್ತು ಜಪಾನಿನ ಆಕ್ರಮಣಕಾರಿ ನೀತಿ ಚೀನಾ ಮತ್ತು ಜಪಾನಿನ ನಡುವಿನ ಯುದ್ಧಕ್ಕೆ ಪ್ರಮುಖ ಕಾರಣವಾಗಿದ್ದರೂ, ಅದರ ಹಿನ್ನೆಲೆಯನ್ನು ದಶಕಗಳಷ್ಟು ಹಿಂದಿನಿಂದಲೂ ಗುರುತಿಸಬಹುದು. ಕೊರಿಯಾ ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಚೀನಾದೊಡನೆ ಮತ್ತು ಭೋಗೋಳಿಕವಾಗಿ ಜಪಾನಿಗೆ ಅಂಟಿಕೊಂಡಿದ್ದು ಚೀನಾ ಕೊರಿಯಾದ ಮೇಲಿನ ತನ್ನ ಅಧಿಪತ್ಯವನ್ನು ಮುಂದುವರೆಸಿಕೊಂಡು ಹೋಗಲು ಆಸಕ್ತರಾಗಿದ್ದಾರೆ, ಆಧುನೀಕರಣಗೊಂಡ ಜಪಾನ್ ತನ್ನ ಹಿತಾಸಕ್ತಿಗಳನ್ನು ಉಳಿಸಿಕೊಳ್ಳಲು ರಿಕ್ಯೂ ದ್ವೀಪಗಳು ಮತ್ತು ಕೊರಿಯಾದಲ್ಲಿ ವಿಸ್ತರಣಾ ನೀತಿಯನ್ನು ಅನುಸರಿಸಿತು. ಚೀನಾ ಮತ್ತು ಜಪಾನ್ ಎರಡು ರಾಷ್ಟ್ರಗಳು ರಿಕ್ಯೂ ದ್ವೀಪಗಳ ಮೇಲೆ ಅಧಿಕಾರವನ್ನು ಹೊಂದಿದ್ದು, 1871 ರಲ್ಲಿ ತಮ್ಮ ವ್ಯಾಪಾರ ಸಂಬಂಧಗಳ ಒಪ್ಪಂದ ಮಾಡಿಕೊಳ್ಳುವ ಮೊದಲೇ ರಿಕ್ಯೂ ದ್ವೀಪಗಳಲ್ಲಿ ತೊಂದರೆಗಳು ಉದ್ಭವಿಸಿದವು. ಮೊದಲಿನಿಂದಲೂ ರಿಕ್ಯೂ ದ್ವೀಪದ ರಾಜರುಗಳು ಚೀನಾಕ್ಕೆ ಪೊಗದಿ ಸಲ್ಲಿಸುತ್ತಿದ್ದು 17 ನೇ ಶತಮಾನದಲ್ಲೂ ಸಟ್ಸುಮ ವರ್ಗಕ್ಕೆ ಸೇರಿದ್ದ ಪೂಜಿವಾರನು ರಿಕ್ಯೂ ದ್ವೀಪಗಳ ಮೇಲೆ ಆಕ್ರಮಣ ಮಾಡಿ ಉತ್ತರ ಭಾಗದ ದ್ವೀಪಗಳನ್ನು ತನ್ನ ಹತೋಟಿಗೆ ಒಳಪಡಿಸಿಕೊಂಡಿದ್ದನು. ಹಾಗಾಗಿ ರಿಕ್ಯೂ ದ್ವೀಪಗಳ ಮೇಲೆ ರಾಜಕೀಯ ಹಿಡಿತ ಸಾಧಿಸಿದ್ದು ಎರಡು ರಾಷ್ಟ್ರಗಳು ಅವರಿಂದ ಪೊಗದಿ ಪಡೆಯುತ್ತಿದ್ದರು, ಮೀಜಿ ಪುನರ್ ಸ್ಥಾಪನೆಯ ನಂತರ ಜಪಾನ್ ಸರ್ಕಾರವು, ಕಿನಾವದ ರಾಜನಿಗೆ ಟೋಕಯೋದಲ್ಲಿ ಬಂದು ನೆಲೆಸಲು ವ್ಯವಸ್ಥೆ ಮಾಡಿ ರಿಕ್ಯೂ ದ್ವೀಪಗಳಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ನೋಡಿಕೊಳ್ಳಲು ನಾಹ ಎಂಬಲ್ಲಿ ವಿದೇಶಾಂಗ ಕಛೇರಿಯನ್ನು ತರೆಯಿತು. ರಿಕ್ಯುದಲ್ಲಿ ಹಿಡಿತ ಸಾಧಿಸಿದ ಹಿನ್ನೆಲೆಯಲ್ಲೆ ಘಟನೆಯೊಂದು ನಡೆದಿದ್ದು, ರಿಕ್ಯೂ ದ್ವೀಪಗಳ ನಿವಾಸಿಗಳಿಂದ ಕೂಡಿದ್ದ ಹಡಗೊಂದು ಬಿರುಗಾಳಿ ಒಡೆತಕ್ಕೆ ಸಿಕ್ಕಿ ನುಚ್ಚುನೂರಾಗಿದ್ದು, ಹಡಗಿನಲ್ಲಿದ್ದ 64 ಜನರಲ್ಲಿ ಉಳಿದಿದ್ದ 54 ಜನರನ್ನು ಫಾರ್ಮೋಸ ದ್ವೀಪದ ತೀರವನ್ನು ತಲುಪಿದಾಗ, ಅಲ್ಲಿನ ಮೂಲ ನಿವಾಸಿಗಳು ಅವರನ್ನು ಕೊಲೆಗೈದರು. ಜಪಾನ್ ತನ್ನ ಪ್ರಜೆಗಳ ಸಾವಿಗೆ ತಕ್ಕ ನಷ್ಟ ಪರಿಹಾರವನ್ನು ಕೊಡಬೇಕೆಂದು ಚೀನಾವನ್ನು ಒತ್ತಾಯಿಸಿತು. ಆದರೆ ಚೀನಾ ಆ ಘಟನೆಗೂ ತನಗೂ ಸಂಬಂಧವಿಲ್ಲವೆಂದು ಪ್ರತಿವಾದಿಸಿ ತನ್ನ ಜವಾಬ್ದಾರಿಯನ್ನು ನಿರಾಕರಿಸಿದಾಗ ಜಪಾನ್ ಫಾರ್ಮೋಸಾವನ್ನು ವಶಪಡಿಸಿಕೊಳ್ಳಲು ಸೈನ್ಯವನ್ನು ಕಳುಹಿಸಿತು. ಬ್ರಿಟಿಷರ ಮಧ್ಯಸ್ಥಿಕೆಯಿಂದ ಚೀನಾ ಮತ್ತು ಜಪಾನ್ ಇತ್ಯರ್ಥ ಒಪ್ಪಂದಕ್ಕೆ ಸಹಿ ಮಾಡಿದವು. ಒಪ್ಪಿಗೆಯ ಪ್ರಕಾರ ಜಪಾನ್ ರಿಕ್ಯೂ ದ್ವೀಪಗಳ ಮೇಲೆ ನ್ಯಾಯಬದ್ಧ ಅಧಿಕಾರದ ಹಕ್ಕನ್ನು ಪಡೆಯಿತು. ಮತ್ತು 1879 ರಲ್ಲಿ ರಿಕ್ಯೂ ದ್ವೀಪಗಳನ್ನು ಸೇರಿಸಿ ಒರೇನಾವ ಪ್ರಾಂತ್ಯ ಅಧಿಕಾರವನ್ನು ಸ್ಥಾಪಿಸುವ ಮೂಲಕ ಚೀನಾ ಮತ್ತು ಜಪಾನಗಳ ನಡುವಿನ ಹಿತಾಸಕ್ತಿಗಳ ಘರ್ಷಣೆಗೆ ಕಾರಣವಾಯಿತು.

## 132.3.0 ಚೀನಾ ಜಪಾನ್ ಯುದ್ಧಕ್ಕೆ ಕಾರಣಗಳು

ಚೀನಾಕ್ಕೆ ಪೊಗದಿ ಸಲ್ಲಿಸುತ್ತಿದ್ದ ರಾಜ್ಯಗಳಲ್ಲಿ ಒಂದಾಗಿದ್ದು ಕೊರಿಯಾ ರಾಜ್ಯ ಬಹುಮಟ್ಟಿಗೆ ಸ್ವತಂತ್ರ್ಯವಾಗಿದ್ದರೂ ಚೀನಿಯರ ಸಾಂಸ್ಕೃತಿಕ ಮೌಲ್ಯಗಳಿಂದ ಪ್ರಭಾವಿತವಾಗಿದ್ದ ಜೀವನ ವ್ಯವಸ್ಥೆಯಲ್ಲಿ ಶ್ರೀಮಂತರ ಹಿಡಿತದಲ್ಲಿದ್ದ ರಾಜ್ಯದ ಮೂಲ ಆಡಳಿತ ಸಂಸ್ಥೆಗಳು ಚೀನಾದ ಮಾದರಿಯಲ್ಲಿದ್ದವು. ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಆಡಳಿತಾಧಿಕಾರಗಳ ಸಹಾಯದಿಂದ ರಾಜನು ಆಡಳಿತ ನಡೆಸುತ್ತಿದ್ದನು. ಚೀನಾದೊಂದಿಗೆ ಬಿಟ್ಟರೆ ಕೊರಿಯಾ ಬೇರೆ ಯಾವ ದೇಶದೊಂದಿಗೂ ಸಂಪರ್ಕವನ್ನು ಇಟ್ಟುಕೊಂಡಿರಲಿಲ್ಲ, ಆದ್ದರಿಂದ ಅದನ್ನು 'ಸನ್ಯಾಸಿ ರಾಜ್ಯ' ವೆಂದೆ ಕರೆಯುತ್ತಿದ್ದರು.

19 ನೇ ಶತಮಾನದ ಆರಂಭದಿಂದಲೂ ಐರೋಪ್ಯರು ಕೊರಿಯಾದೊಡನೆ ವ್ಯಾಪಾರ ಸಂಪರ್ಕ ಬೆಳೆಸಲು ಮುಂದಾಗಿದ್ದು, ಫಲಿಸದ ಕಾರಣ ಮತ್ತೆ 1860 ರ ದಶಕದಲ್ಲಿ ಕೊರಿಯಾ ಪ್ರವೇಶಿಸಿ ಕ್ರೈಸ್ತ ಧರ್ಮವನ್ನು ಹರಡಲು ಪ್ರಯತ್ನಿಸಿದರು. ಬ್ರಿಟಿಷರು, ರಷ್ಯನ್ನರ ಮತ್ತು ಫ್ರೆಂಚ್‌ರ ಹಡಗುಗಳು ಕೊರಿಯಾ ತೀರ ಪ್ರದೇಶವನ್ನು ಪ್ರವೇಶಿಸಿದವು. ಐರೋಪ್ಯರ ಮತಾಂತರ ಕಾರ್ಯ ಕೊರಿಯನ್ನರನ್ನು ಕೋಪಾದ್ರಿತರನ್ನಾಗಿ ಮಾಡಿದ್ದು, ಜೆಸುಯಟ ಪಾದ್ರಿಗಳು ಸೇರದಂತೆ ಹಲವಾರು ಕ್ರೈಸ್ತರನ್ನು ಕೊಲೆ ಮಾಡಿದರು. ಫ್ರಾನ್ಸ್ ಈ ಬಗ್ಗೆ ವಿವರಣೆ ಕೇಳಿದಾಗ ದೇಶಿ ಸರ್ಕಾರವು ಕೊರಿಯಾವು ಚೀನಾದ ಅಧೀನ ರಾಜ್ಯವೆಂದು ಮತ್ತು ವಿದೇಶಿ ವ್ಯವಹಾರಗಳಿಗೆ ಸಂಬಂಧಿಸಿದ ವಿಷಯಗಳನ್ನು ಚೀನಾದೊಂದಿಗೆ ವ್ಯವಹರಿಸಬೇಕೆಂದು ತಿಳಿಸಿತು. ಅಲ್ಲದೆ ಅಮೇರಿಕಾ ನೌಕ ಸಿಬ್ಬಂದಿಯ ಕೊಲೆಗೂ ಇದೇ ರೀತಿಯಾಗಿ ಪ್ರತಿಕ್ರಿಯಿಸಿದ್ದು, ಆ ನಂತರದಲ್ಲಿ ಚೀನಾ ಸರ್ಕಾರ ಕೂಡ ಜವಾಬ್ದಾರಿಯಾಗಿ ಉತ್ತರ ನೀಡದೆ ಜಾರಿಕೊಂಡಿತು. ಹಾಗಾಗಿ ಕೊರಿಯಾದಲ್ಲಿನ ರಾಜಕೀಯ ಅಸ್ತಿತ್ವ ಬೇಜವಾಬ್ದಾರಿತನದಿಂದ ಕೂಡಿದ್ದು ಮುಂದಿನ ಸಮಸ್ಯೆಗೆ ದಾರಿ ಮಾಡಿಕೊಟ್ಟಿತು. ಒಟ್ಟಾರೆ ಚೀನಾ ಜಪಾನ್ ಯುದ್ಧ ಕೊರಿಯಾದಲ್ಲಿನ ಆಸಕ್ತಿಗಳ ಘರ್ಷಣೆಯಾಗಿದ್ದು, ಚೀನಾ ತನ್ನ ಸಾಂಪ್ರದಾಯಿಕ ಪ್ರಭುತ್ವದ ಮೂಲಕ ಕೊರಿಯಾವನ್ನೆ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದಂತೆ ಜಪಾನ್ ಕೊರಿಯದಲ್ಲಿ ಸ್ವತಂತ್ರ್ಯ ಅಸ್ತಿತ್ವವನ್ನು ಬಿಟ್ಟು ಆ ಮೂಲಕ ತನ್ನ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳಲು ಮುಂದುವರೆಯಿತು. ಚೀನಾ ಜಪಾನಿನ ಹಿತಾಸಕ್ತಿಗಳ ಪೈಪೋಟಿಯ ಜೊತೆಗೆ ಇನ್ನೂ ಹಲವಾರು ಕಾರಣಗಳು ಚೀನಾ ಮತ್ತು ಜಪಾನನ್ನು ಯುದ್ಧಕ್ಕೆ ದೂಡಿದವು.

### 132.3.1 ಕೊರಿಯಾದಲ್ಲಿನ ಜಪಾನಿಯರ ಹಿತಾಸಕ್ತಿ

ರಿಕ್ಯೂ ದ್ವೀಪಗಳ ಮೇಲೆ ಹತೋಟಿಯೊಂದಿದ ಜಪಾನ್ ಭೌಗೋಳಿಕವಾಗಿ ಮತ್ತು ಆರ್ಥಿಕವಾಗಿ ಸಂಪನ್ಮೂಲ ಭರಿತವಾದ ಕೊರಿಯಾದಲ್ಲಿ ತನ್ನ ಹಿತಾಸಕ್ತಿಗಳನ್ನು ಬೆಳೆಸಲು ಇಚ್ಛಿಸಿದ್ದು, ರಾಜತಾಂತ್ರಿಕ ಮತ್ತು ವ್ಯಾಪಾರದ ಸಂಬಂಧಗಳನ್ನು ಹೊಂದಲು ನಿಯೋಗವೊಂದನ್ನು ಕಳುಹಿಸಿತು. ಕೊರಿಯಾದ ರಾಜನು ಕಿರಿಯವನಾಗಿದ್ದು, ಆಡಳಿತದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ರೀಜಂಟ್ ತೈವಾನ್ ಕುನ್ ವಿದೇಶಿ ಸಂಪರ್ಕ ವಿರೋಧಿಯು ಮತ್ತು ಪ್ರತ್ಯೇಕವಾದಿಯು ಆಗಿದ್ದನು. ತೈವಾನ್ ಕುನ್ ತನ್ನ ಪ್ರಜೆಗಳಿಗೆ ಜಪಾನಿಯರೊಂದಿಗೆ ಯಾವ ಸಂಪರ್ಕಗಳನ್ನು ಹೊಂದಕೂಡದೆಂದು ಎಚ್ಚರಿಕೆ ನೀಡಿ ಕೊರಿಯನ್ನರಲ್ಲಿ ಜಪಾನಿಯ ವಿರುದ್ಧದ ದ್ವೇಶ ಭಾವನೆಗಳಿಗೆ ಕಾರಣನಾಗಿದ್ದನು. ಜಪಾನ್ ಕೊರಿಯೊದೊಡನೆ ಸಂಪರ್ಕ ಬೆಳಸಲು ಪರದಾಟ ನಡೆಸಿದ್ದು, ಯತ್ನಗಳು ಫಲಿಸದೆ ಹೋದಾಗ ಒಂದು ಸಣ್ಣ ನೌಕಾಪಡೆಯನ್ನು ಕೊರಿಯಾದ ತೀರಕ್ಕೆ ಕಳುಹಿಸಿತು. ಕೊರಿಯಾದ ನೌಕಾಪಡೆಯವರು ಜಪಾನಿನ ಮೇಲೆ ಆಕ್ರಮಣ ಮಾಡಿದರು. ಇದರಿಂದ ಯುದ್ಧ ಪ್ರಾರಂಭವಾಗಿದ್ದು ಜಪಾನ್ ಕೊರಿಯಾವನ್ನು ತನ್ನ ಆಧೀನಕ್ಕೊಳಪಡಿಸಿಕೊಳ್ಳಲು ಪ್ರಯತ್ನಿಸಿತು. ಹಾಗೂ ಅಭಿಪ್ರಾಯ ಪಡೆಯಲು ಪೀಕಿಂಗ್‌ಗೆ ನಿಯೋಗವೊಂದನ್ನು ಕಳುಹಿಸಿತು. ಕೊರಿಯ ಅವಲಂಬಿತ ರಾಜ್ಯವೇ ಹೊರತು ಅದರ ಮೇಲೆ ತನಗೆ ಹತೋಟಿ ಇಲ್ಲವೆಂದು ತಿಳಿಸಿದರೂ ಕೂಡ ವಿದೇಶಿ ವ್ಯವಹಾರಗಳ ಮೇಲ್ವಿಚಾರಕನಾಗಿದ್ದಲ್ಲೀ ಹುಂಗ್ - ಚಾಂಗ್ ಕೊರಿಯಾದೊಡನೆ ಸಂಧಾನ ನಡೆಸಲು ಜಪಾನಿ ಪ್ರತಿನಿಧಿಗಳಿಗೆ ಸಿಯೋಲ್ಸ್‌ನಲ್ಲಿ ವ್ಯವಸ್ಥೆ ಮಾಡಿದ್ದು ತೀರ್ಮಾನಗಳು ವಿಳಂಬವಾಗಿದ್ದವು. ಜಪಾನ್ ಯುದ್ಧದ ಬೆದರಿಕೆ ಹೇರಿ 1875 ರಲ್ಲಿ ಕಾಂಗುಹ ಒಪ್ಪಂದ ಮಾಡಿಕೊಂಡಿತು. ಹಾಗು ಒಪ್ಪಂದದ ಪ್ರಕಾರ ಫೂಸನ್, ಇಂಚೋನ್ ಮತ್ತು ಪೋನ್ಸನ್ ಮೂರು ಕೊರಿಯಾ ಬಂದರುಗಳನ್ನು ವ್ಯಾಪಾರಕ್ಕಾಗಿ ಪಡೆಯಿತು ಮತ್ತು ಕೊರಿಯಾ ಸ್ವಾತಂತ್ರ್ಯ ರಾಜ್ಯವೆಂದು ಮತ್ತು ಜಪಾನ್‌ನೊಂದಿಗೆ ಅದರ ಸಮಾನತೆಯನ್ನು ಗುರ್ತಿಸಿತು.

ಕಾಂಗುಹಾ ಒಪ್ಪಂದ ಮಾಡಿಕೊಂಡ ಜಪಾನ್ ಕೊರಿಯಾದ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದ್ದು, ಕೊರಿಯಾದೊಂದಿಗಿನ ಸಂಬಂಧವನ್ನು ಕಳೆದಕೊಳ್ಳುವ ಅಪಾಯಕರ ಸ್ಥಿತಿಯಲ್ಲಿರುವುದನ್ನು ಮನಗಂಡ ಚೀನಾ, ಕೊರಿಯಾ ವಿದೇಶಿಯರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸೂಚಿಸಿತು. ಕೊರಿಯಾ 1882 ರಲ್ಲಿ ಅಮೇರಿಕಾದೊಂದಿಗೆ, 1883 ರಲ್ಲಿ ಬ್ರಿಟನ್, 1884 ರಲ್ಲಿ ಜರ್ಮನಿ ಮತ್ತು 1886 ರಲ್ಲಿ ಇಟಲಿ, ರಷ್ಯ ಮತ್ತು ಫ್ರಾನ್ಸ್‌ನೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿತು. ಆದರೆ ಕೊರಿಯಾ ತಾನೊಂದು ಸ್ವತಂತ್ರ್ಯ ರಾಜ್ಯವಾಗಿ ಸಂಧಾನಗಳನ್ನು ಮಾಡಿಕೊಂಡರೂ, ತಾನು ಚೀನಾದ ಸಾಮಂತ ರಾಜ್ಯವೆಂದು ತನ್ನ ಪತ್ರಗಳಲ್ಲಿ ತಿಳಿಸಿತು.

ಕೊರಿಯಾದ ರಾಜನ ಆಸ್ಥಾನದಲ್ಲಿ ಚೀನಾ ಮತ್ತು ಜಪಾನಗಳ ಬಗ್ಗೆ ಪರ ಮತ್ತು ವಿರೋಧದಿಂದ ಕೂಡಿದ ಎರಡು ಪಕ್ಷಗಳಿದ್ದವು. ಚೀನಾದ ಯುಆನ್ ಕೈ ಚೀನಿಯರ ಪರವಾಗಿದ್ದವರನ್ನು ಬೆಂಬಲಿಸಿದ್ದು, ಜಪಾನೀ ಪ್ರತಿನಿಧಿ ಕೊರಿಯಾದ ಪೂರ್ಣ ಸ್ವತಂತ್ರತೆಯನ್ನು ಬೆಂಬಲಿಸಿದ್ದನು. ಚೀನಾ ಫ್ರಾನ್ಸಿನೊಡನೆ ಯುದ್ಧದಲ್ಲಿದ್ದಾಗ ಟೋಕೂಜೂಯಿ ಜಪಾನಿನ ಪ್ರತಿನಿಧಿ, ಜಪಾನಿಯರ ಪರವಾದ ಸುಧಾರಣ ಪಕ್ಷದವರ ಸಲಹೆಯನ್ನು ಬೆಂಬಲಿಸಿ ರಾಜವನ್ನು ಸೆರೆಹಿಡಿದು ಕೊರಿಯಾದಲ್ಲಿ ಹಲವು ಸುಧಾರಣೆಗಳನ್ನು ಜಾರಿಯಲ್ಲಿ ತಂದನು. ಹಾಗು ಜಪಾನ್ ಕೂಡ ಅರಮನೆಯ ರಕ್ಷಣೆಗಾಗಿ ಸೈನ್ಯವನ್ನು ಕಳುಹಿಸಿತು. ಯು ಆನ್ ಷಿ ಕೂಡ ಸೈನ್ಯವನ್ನು ಕಳುಹಿಸಿದ್ದು. ನೆಡೆದ ಯುದ್ಧದಲ್ಲಿ ಚೀನಿ ಸೈನ್ಯ ಜಪಾನಿಯರನ್ನು ಸೋಲಿಸಿತು. 1885 ರಲ್ಲಿ ಜಪಾನಿನ ಇಟೊ ಹಿರೊಟೂಮಿ ಮತ್ತು ಚೀನಾದ ಲೀ ಹುಂಗ್ - ಚಾಂಗ್ ಟೈನ್‌ಸ್ಟಿನ್ ಒಪ್ಪಂದಕ್ಕೆ ಸಹಿ ಹಾಕಿದರು. 1885 ರ ನಂತರದಲ್ಲಿಯು ಆನ್ ಷಿಕೈ ಕೊರಿಯಾದಲ್ಲಿ ಹೆಚ್ಚಿನ ಅಧಿಕಾರವನ್ನು ಹೊಂದಿದ್ದು. ಕೊರಿಯಾದ ವ್ಯಾಪಾರ, ವಾಣಿಜ್ಯ ಮತ್ತು ರಾಜ ತಾಂತ್ರಿಕ ಸಂಬಂಧಗಳನ್ನು ನಿರ್ದೇಶಿಸತೊಡಗಿದ್ದನು. 1889 ರಲ್ಲಿ ಕೊರಿಯಾದ ಸರ್ಕಾರವು ಯು ಆನ್ ಷಿಕೈನ ಆದೇಶದ ಮೇಲೆಗೆ ಕೊರಿಯ ಮತ್ತು ಜಪಾನ್ ಸರ್ಕಾರಗಳು ಹಿಂದೆ ಮಾಡಿಕೊಂಡಿದ್ದ ಒಪ್ಪಂದಕ್ಕೆ ವಿರುದ್ಧವಾಗಿ ಜಪಾನಿ ವರ್ತಕರಿಗೆ ಅಕ್ಕಿಯನ್ನು ಮಾರಕೂಡದೆಂದು ನಿಷೇಧಿಸಿ ಆಜ್ಞೆ ಹೊರಡಿಸಿತು. ಈ ರೀತಿಯ ಕಿರುಕುಳದಿಂದ ಜಪಾನಿನ ಸರ್ಕಾರವು ಸಿಟ್ಟಿಗೆದ್ದು ಸೇಡು ತೀರಿಸಿಕೊಳ್ಳಲು ತ್ವರಿತವಾದ ಸಿದ್ಧತೆಯಲ್ಲಿ ತೊಡಗಿತು.

### 132.3.2 ಕೊರಿಯಾದಲ್ಲಿ ರಷ್ಯನ್ನರ ವಿಸ್ತರಣಾ ನೀತಿ

ದಕ್ಷಿಣ ಏಷ್ಯಾದಲ್ಲಿ ಕೊರಿಯ ಪ್ರಾಕೃತಿಕ ಬಾಗಿಲಿನಂತಿದ್ದು, 19 ನೇ ಶತಮಾನದ ವೇಳೆಗೆ ಐರೋಪ್ಯರು, ರಷ್ಯ ಮತ್ತು ಜಪಾನನ್ನು ಒಳಗೊಂಡಂತೆ ಅಮೇರಿಕಾ ಕೂಡ ಕೊರಿಯಾದಲ್ಲಿ ವ್ಯಾಪಾರಿ ಆಸಕ್ತಿಯನ್ನು ಬೆಳೆಯಿಸಿಕೊಂಡವು. ಜೊತೆಗೆ ಜಪಾನಿನ ರೀತಿ ರಷ್ಯ ಕೂಡ ಕೊರಿಯಾದ ಮೇಲಿನ ಚೀನಾದ ಅಧಿಪತ್ಯವನ್ನು ಮಿತಗೊಳಿಸಲು ಪ್ರಯತ್ನಿಸಿತು. ರಷ್ಯ ಕೊರಿಯಾದಲ್ಲಿ ಹಿಮರಹಿತ ಮುಕ್ತ ಬಂದರುಗಳನ್ನು ತನ್ನ ಆಧೀನಕ್ಕೊಳಪಡಿಸಿಕೊಳ್ಳಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದು ಅದಕ್ಕೆ ಚೀನಾ ಮತ್ತು ಜಪಾನಿನ ವಿರೋಧವಿದ್ದರೂ ಲಜುರೋವ್ ಬಂದರನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿತು. ಜೊತೆಗೆ ಆ ವೇಳೆಗಾಗಲೆ ಉತ್ತರ ಕೊರಿಯಾದ ಸಮೀಪವಿರುವ (ಹೊಸ್ಸೂರಿ) ನದಿಯ ಪೂರ್ವದ ಬಾಗವನ್ನು ಆಕ್ರಮಿಸಿಕೊಂಡಿದ್ದು ವ್ಲಾಡಿವೊಸ್ಟಾಕ್ ಬಂದರನ್ನು ಸ್ಥಾಪಿಸಿದ್ದು, ಟ್ರಾನ್ಸ್ ಸೈಬೀರಿಯನ್ಸ್ ರೈಲ್ವೆ ಮಾರ್ಗದ ಮೂಲಕ ವ್ಯಾಪಾರ ವಹಿವಾಟುಗಳನ್ನು ಮುಂದುವರೆಸಿಕೊಂಡು ಬಂದಿತ್ತು. ಟ್ರಾನ್ಸ್ ಸೈಬೀರಿಯನ್ ರೈಲ್ವೆ ಮಾರ್ಗಗಳ ಮೂಲಕ ಪೂರ್ವ ಏಷ್ಯ ಭಾಗದಲ್ಲಿನ ರಷ್ಯಾದ ಚಟುವಟಿಕೆಗಳನ್ನು ಗಂಭೀರವಾಗಿ ಪರಿಗಣಿಸಿದ ಜಪಾನ್ ರಷ್ಯಾದ ಈ ಬೆಳವಣಿಗೆಯನ್ನು ತಡೆಯಲು ಮುಂದಾಯಿತು. ಅಲ್ಲದೆ ಗ್ರೇಟ್ ಬ್ರಿಟನ್ ಕೂಡ ಕೊರಿಯಾದ ದ್ವೀಪಗಳಲ್ಲಿನ ಹ್ಯಾಮಿಲ್ಟನ್

ಬಂದರನ್ನು ವಶಪಡಿಸಿಕೊಳ್ಳುವುದರ ಮೂಲಕ ರಷ್ಯಾದ ಪ್ರಯತ್ನಗಳಿಗೆ ಅಡ್ಡಿ ಮಾಡಿತ್ತು. ಕೊನೆಗೆ ರಷ್ಯಾ ಲಜುರೋವ್ ಬಂದರಿನ ಮೇಲಿನ ಆಸೆಯನ್ನು ತೊರೆದು 1888ರಲ್ಲಿ ಕೊರಿಯಾದೊಡನೆ ಕೇವಲ ವ್ಯಾಪಾರಿ ಒಪ್ಪಂದವನ್ನು ಮಾಡಿಕೊಂಡಿತು. ಜೊತೆಗೆ ರಷ್ಯಾದ ಪರವಾದ ನಿಲುವುಗಳನ್ನು ಬೆಂಬಲಿಸುವ ನೀತಿ ನಿಯಮಗಳನ್ನು ಕೊರಿಯಾ ಪಾಲಿಸುವಂತೆ ಒತ್ತಾಯಿಸಿತಾದರೂ, ಚೀನಾ ಜಪಾನಿನ ನೀತಿಯನ್ನು ವಿರೋಧಿಸುತ್ತದೆ. ರಷ್ಯಾದ ಹಿತಾಸಕ್ತಿಗಳನ್ನು ಸಹ ವಿರೋಧಿಸಿತು. ಹಾಗಾಗಿ ರಷ್ಯ ಕೊರಿಯಾದಲ್ಲಿ ತನ್ನ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವಲ್ಲಿ ವಿಫಲವಾದರೂ, ಮುಂದೆ ಮಂಚೂರಿಯಾದ ಮೇಲಿನ ಹಿತಾಸಕ್ತಿಗಳನ್ನು ಸಾಧಿಸುತ್ತ ಜಪಾನಿನ ಕೊರಿಯಾದ ಹಿತಾಸಕ್ತಿಗಳಿಗೆ ಕಡಿವಾಣ ಹಾಕಿತು.

### *132.3.3 ಆರ್ಥಿಕ ಹಿತಾಸಕ್ತಿಗಳು*

ಪೂರ್ವ ಏಷ್ಯಾದಲ್ಲಿ ಕೊರಿಯಾ ಭೌಗೋಳಿಕವಾಗಿ ಮತ್ತು ಆರ್ಥಿಕವಾಗಿ ಹೆಚ್ಚಿನ ಸಂಪನ್ಮೂಲಗಳನ್ನು ಹೊಂದಿದ್ದು ಜಪಾನನ್ನು ಒಳಗೊಂಡಂತೆ ಐರೋಪ್ಯ ರಾಷ್ಟ್ರಗಳಿಗೆ ಧಾನ್ಯದ ಖಣಜವಾಗಿತ್ತು. ಜಪಾನ್ ಸಾವಿರಾರು ಬೆಟ್ಟಗುಡ್ಡಗಳಿಂದ ಆವೃತ್ತವಾದ ಪ್ರದೇಶವಾಗಿದ್ದು ಕೇವಲ ಪ್ರತಿಶತ 16ರಷ್ಟು ಭೂಮಿ ಮಾತ್ರವೆ ವ್ಯವಸಾಯಕ್ಕೆ ಯೋಗ್ಯವಾಗಿತ್ತು. ಪ್ರತಿಯಾಗಿ ಪೂರ್ವ ಏಷ್ಯಾದಲ್ಲಿನ ಕೊರಿಯಾದಲ್ಲಿ ಬತ್ತದ ಬೆಳೆ ಪ್ರಮುಖವಾಗಿದ್ದು, ಜಪಾನೀಯರಿಗೆ ಕೊರಿಯಾದಲ್ಲಿನ ಆಹಾರ ಪದಾರ್ಥಗಳು ಮತ್ತು ಗಣಿಗಳು ಹೆಚ್ಚು ಉಪಯುಕ್ತವಾಗಿ ಕಂಡು ಬಂದವು. ಹಾಗಾಗಿ ಜಪಾನ್ ಕೊರಿಯಾದಲ್ಲಿ ತನ್ನ ಆರ್ಥಿಕ ಹಿತಾಸಕ್ತಿಗಳನ್ನು ಬೆಳೆಸಿಕೊಂಡಿತ್ತು. ಈಗಾಗಲೆ ವಿವರಿಸಿದಂತೆ ಕೊರಿಯಾದ ರಾಜನ ಆಸ್ಥಾನದಲ್ಲಿ ಜಪಾನಿ ಪರವಾದ ಮತ್ತು ಚೀನಿ ಪರವಾದ ಪಕ್ಷಗಳಿದ್ದು, ಅದನ್ನು ಬಳಸಿಕೊಂಡ ಜಪಾನ್ ರಾಜನನ್ನು ಸೆರೆ ಹಿಡಿದು ಕೊರಿಯಾದ ಆಡಳಿತದ ಮೇಲೆ ಹಿಡಿತ ಸಾಧಿಸಿತ್ತಾದರೂ ಚೀನಾದ ಯುಆನ್‌ಷಿಕ್ಕೆ ಬೆಂಬಲಿತ ಸೈನ್ಯ ಜಪಾನಿಯರನ್ನು ಸೋಲಿಸಿ ಕೊರಿಯಾದ ಜಪಾನಿನ ಹಿಡಿತವನ್ನು ತಪ್ಪಿಸಿದ್ದರು. ಹಾಗೂ ಕೊರಿಯಾದ ವ್ಯಾಪಾರ, ವಾಣಿಜ್ಯ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ತಾನೇ ನಿರ್ದೇಶಿಸತೊಡಗಿದ್ದು, 1889ರಲ್ಲಿ ಅವನ ಆದೇಶದ ಮೇರೆಗೆ ಒಪ್ಪಂದಗಳಿಗೆ ವಿರುದ್ಧವಾಗಿ ಜಪಾನಿ ವರ್ತಕರಿಗೆ ಕೊರಿಯಾ ಅಕ್ಕಿಯನ್ನು ಮಾರಕೂಡದೆಂದು ನಿಷೇಧ ಹೇರಿದನು. ಯುಆನ್ ನಿರ್ದೇಶಿತ ಕೊರಿಯಾ ಸರ್ಕಾರ ಜಪಾನಿಗೆ ಅಕ್ಕಿ ರಫ್ತನ್ನು ನಿಷೇಧಿಸಿ ಆಜ್ಞೆ ಹೊರಡಿಸಿತು. ಜಪಾನಿನಲ್ಲಿ ಆಹಾರದ ಕೊರತೆಯಿದ್ದು ಅದರಲ್ಲೂ ಕೊರಿಯಾದ ಅಕ್ಕಿಯ ಮೇಲೆ ಜಪಾನ್ ಅವಲಂಬಿತವಾಗಿದ್ದರಿಂದ ನಿಷೇಧವನ್ನು ತೆಗೆದುಹಾಕುವಂತೆ ಕೊರಿಯ ಸರ್ಕಾರದ ಮೇಲೆ ಜಪಾನ್ ಒತ್ತಡವನ್ನು ಹೇರಿತು. ಆಹಾರದ ಕೊರತೆಯನ್ನು ನೀಗಿಸಲು ಕೊರಿಯಾದಿಂದ ಹೆಚ್ಚಿನ ಅಕ್ಕಿಯನ್ನು ಖರೀದಿಸುವುದರ ಮೂಲಕ ಕೊರಿಯಾದಲ್ಲಿನ ಅಕ್ಕಿಯ ಬೆಲೆ ತುಟ್ಟಿಯಾಯಿತು. ಹಾಗಾಗಿ ಕೊರಿಯನ್ನರು ಜಪಾನಿಯರನ್ನು ದ್ವೇಷಿಸತೊಡಗಿದರು. ಅಲ್ಲದೆ ಕೊರಿಯಾದಲ್ಲಿ ಹಡಗು ವ್ಯಾಪಾರ ಮತ್ತು ವಾಣಿಜ್ಯಗಳನ್ನು ಜಪಾನ್ ಶೀಘ್ರವಾಗಿ ಬೆಳಸಿ, ಕೊರಿಯಾದ ಪ್ರತಿಶತ 40 ಕ್ಕಿಂತ ಹೆಚ್ಚಾಗಿ ವ್ಯಾಪಾರವನ್ನು ಜಪಾನ್ ತನ್ನ ಹಿಡಿತದಲ್ಲಿಟ್ಟುಕೊಂಡಿತ್ತು. ಹಾಗಾಗಿ ಆರ್ಥಿಕವಾಗಿ ಜಪಾನ್ ಕೊರಿಯಾದ ಮೇಲೆ ಹೆಚ್ಚಿನ ಹಿತಾಸಕ್ತಿ ಹೊಂದಿದ್ದು, ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಸಮಯ ಕಾಯುತಿತ್ತು.

### *132.3.4 ಕೊರಿಯಾದಲ್ಲಿನ ಆಂತರಿಕ ಸಮಸ್ಯೆಗಳು*

ಕೊರಿಯಾ ಮೊದಲಿನಿಂದಲೂ ಚೀನಾದ ಅಧೀನ ಅಧಿಪತ್ಯವನ್ನು ಹೊಂದಿದ್ದು, 1863ರಲ್ಲಿ 12ವರ್ಷದ ಬಾಲಕ ಕೊರಿಯಾದ ಸಿಂಹಾಸನವನ್ನೇರಿದನು. ಆದರೆ ಅಧಿಕಾರವೆಲ್ಲವನ್ನು ಪ್ರತಿಗಾಮಿಯೂ ಮತ್ತು ಪ್ರತ್ಯೇಕವಾದಿಯೂ ಆಗಿದ್ದ ಅವನ ತಂದೆ ತೈವಾನಂಕುನ್ ಹೊಂದಿದ್ದನು. ಆಡಳಿತವು ಭ್ರಷ್ಟಾಚಾರದಿಂದಲೂ ಮತ್ತು ಪ್ರಜಾ ಪೀಡನೆಯಿಂದಲೂ ಕೂಡಿದ್ದಿತು. ರಾಜಕೀಯ ಗುಂಪುಗಳು ರಾಜನ ಕೃಪಾಕಟಾಕ್ಷದ ಮೂಲಕ ಅಧಿಕಾರದ ಹತೋಟಿ ಹೊಂದಿರಲು ಸ್ಪರ್ಧೆಯಲ್ಲಿ ತೊಡಗಿದ್ದವು. ವಿಕೇಂದ್ರೀಕೃತ ಸೈನಿಕ ಶಕ್ತಿಯನ್ನು ಹೊಂದಿದ್ದ ಕೊರಿಯಾ ಆರ್ಥಿಕ ವ್ಯವಸ್ಥೆಯಲ್ಲಿನ ಭೂಮಾಲೀಕತ್ವ ಅಸಮಾನತೆಯನ್ನು ಹೊಂದಿದ್ದು, ಬಹುತೇಕ ಕೊರಿಯನ್ನರ ಬಡತನದ ರೇಖೆಯಿಂದ ಕೆಳಗಿದ್ದರು.

1873ರಲ್ಲಿ ಕೊರಿಯಾದ ರಾಜಕುಮಾರನು ಪ್ರಾಪ್ತ ವಯಸ್ಸಿಗೆ ಬಂದ ಮೇಲೆ ಚೀನಿ ಪರವಾಗಿದ್ದು, ಅವನ ತಂದೆ ರೀಜೆಂಟ್ ಕುನ್‌ನ್ನು ಅಧಿಕಾರದಿಂದ ನಿವೃತ್ತಿ ಹೊಂದಿದನು. ಅಧಿಕಾರವನ್ನು ಚಲಾಯಿಸುವ ಅಪೇಕ್ಷೆ ಹೊಂದಿದ್ದ ರಾಣಿ ಮತ್ತು ಅವಳ ಕಡೆಯವರು ಕೊರಿಯಾವನ್ನು ಆಧುನೀಕರಣಗೊಳಿಸಬೇಕೆಂದು ಬಯಸಿ ಜಪಾನಿ ಅಧಿಕಾರಿಗಳನ್ನು ಆಹ್ವಾನಿಸಿದರು. ಅಧಿಕಾರದಿಂದ ನಿರ್ಗಮಿಸಿದ್ದ ತೈವಾನ್ ಕುನ್ ಜಪಾನಿ ಅಧಿಕಾರಗಳು ಹಣ ದುರುಪಯೋಗ ಪಡಿಸಿಕೊಂಡುದನ್ನು ಬಳಸಿಕೊಂಡು ಕೊರಿಯಾದ ಸೈನಿಕರನ್ನು ಅರಮನೆಯನ್ನು ಮುತ್ತಿಗೆ ಹಾಕುವಂತೆ ಪ್ರಚೋದಿಸಿದರು. ಅರಮನೆಗೆ ಮುತ್ತಿಗೆ ಹಾಕಿದ ಸೈನಿಕರು ರಾಣಿಯ ಪಕ್ಷದವರಲ್ಲಿ ಕೆಲವರನ್ನು ಮತ್ತು ಜಪಾನಿ ಸಲಹೆಗಾರನೊಬ್ಬನನ್ನು ಕೊಂದು ಹಾಕಿದರು ಮತ್ತು ಜಪಾನಿ ರಾಯಭಾರಿ ಕಚೇರಿಗೆ ಮುತ್ತಿಗೆ ಹಾಕಿದರು. ಚೀನಾ ಮತ್ತು ಜಪಾನ್ ಎರಡು ರಾಷ್ಟ್ರಗಳು ಸೈನ್ಯವನ್ನು ಕಳುಹಿಸಿದವು.ನಾ ತೈವಾನ ಕುನ್‌ನ್ನು ಬಂಧಿಸಿ ಅವನನ್ನು ಶಿಕ್ಷೆಗೆ ಒಳಪಡಿಸಲು ಟೈನ್‌ಸ್ಟೀನ್‌ಗೆ ಕಳುಹಿಸಿತು. ಜಪಾನ್ ಚೀನಾವನ್ನು ಕಡೆಗಾಣಿಸಿ ಕೊರಿಯಾದೊಡನೆ ಸಂಧಾನ ನಡೆಸಿತು. ನಷ್ಟ ಪರಿಹಾರವನ್ನು ಮತ್ತು ಕ್ಷಮಾಪಣೆಯನ್ನು ಪಡೆದುಕೊಂಡು ಸಿಯೋಲ್‌ನಲ್ಲಿ ತನ್ನ ರಾಯಭಾರಿ ಕಚೇರಿಯನ್ನು ಮತ್ತು ರಕ್ಷಣೆಗಾಗಿ ಒಂದು ರಕ್ಷಣಾ ದಳವನ್ನು

ಸ್ಥಾಪಿಸಿತು. ಆದರೆ ನಂತರದಲ್ಲಿ ಯುಆನ್ ಷಿಕೈ ಸೈನ್ಯ ಚೀನಾ ಪರವಾದ ಕೊರಿಯನ್ನರನ್ನು ಬೆಂಬಲಿಸಿಕೊಂಡು ಜಪಾನಿ ಸೈನ್ಯ ಸೋಲಿಸಿದ್ದು, ಜಪಾನ್ ಚೀನಾದೊಡನೆ ಒಪ್ಪಂದ ಮಾಡಿಕೊಂಡಿತು. ಮತ್ತು ತಮ್ಮ ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಒಪ್ಪಿತು. ಒಟ್ಟಾರೆ ಕೊರಿಯಾದಲ್ಲಿನ ದುರ್ಬಲ ಸ್ಥಿತಿಯನ್ನು ಬಳಸಿಕೊಂಡು ಯಾವುದೇ ವಿದೇಶಿ ರಾಷ್ಟ್ರಗಳು ಕೊರಿಯಾದೊಳಗೆ ಪ್ರವೇಶಿಸುವುದನ್ನು ನಿರ್ಬಂಧಿಸಿದ ಜಪಾನ್ ತನ್ನ ಹಿತಾಸಕ್ತಿಗಳನ್ನು ಉಳಿಸಿಕೊಳ್ಳುವಲ್ಲಿ ಸಫಲವಾಯಿತು.

ಕೊರಿಯಾದ ಮೇಲಿನ ಹತೋಟಿಗಾಗಿ ಜಪಾನ್ ಚೀನಾದೊಡನೆ ಹೋರಾಡಬೇಕಾಗಿದ್ದರಿಂದ ಜಪಾನ್ ತಾನು ಪೂರ್ಣ ಸಿದ್ಧತೆಗಳನ್ನು ಮಾಡಿಕೊಳ್ಳುವವರೆಗೆ ಕಾಯಲು ಸಿದ್ಧವಿತ್ತು. ಆದರೆ ಕೊರಿಯಾದಲ್ಲಿ ರಷ್ಯನ್ನರ ಕಾರ್ಯಾಚರಣೆಗಳು ಜಪಾನ್‌ನ್ನು ಗಾಬರಿಗೊಳಿಸಿದವು. ರಷ್ಯ ಟ್ರಾನ್ಸ್ ಸೈಬೀರಿಯನ್ ರೈಲ್ವೆಯ ನಿರ್ಮಾಣವನ್ನು ಪೂರ್ಣಗೊಳಿಸಿದ ಪಕ್ಷದಲ್ಲಿ ಪೂರ್ವ ಏಷ್ಯಾದಲ್ಲಿ ರಷ್ಯಾದ ಮುನ್ನಡೆಯನ್ನು ತಡೆಗಟ್ಟುವುದು ಕಷ್ಟವೆಂದು ಜಪಾನ್ ಭಾವಿಸಿತು. ಜಪಾನಿನ ನಾಯಕರು ಕೂಡ ಕೊರಿಯಾ ಸ್ವತಂತ್ರ್ಯವಾಗಿರಬೇಕೆಂಬುದು ಮತ್ತು ಜಪಾನಿನ ಹತೋಟಿಯಲ್ಲಿರಬೇಕೆಂದು ಅಪೇಕ್ಷಿಸಿದ್ದರು. ಈ ಉದ್ದೇಶಗಳನ್ನು ಸಾಧಿಸಿಕೊಳ್ಳುವುದಕ್ಕಾಗಿ ಜಪಾನ್ ಚೀನಾದೊಡನೆ ಯುದ್ಧ ಮಾಡಲು ಸಿದ್ಧವಾಯಿತು.

### *132.3.5 ಟಾಂಗಾರ್ತ್ ಅಥವಾ ಟಾಂಗ್ ಹಾಕ್ ದಂಗೆ*

ಚೀನಿ ಜಪಾನ್ ರಾಷ್ಟ್ರಗಳನ್ನು ಯುದ್ಧದೆಡೆಗೆ ಸೆಳೆದ ಘಟನೆ ಕೊರಿಯಾದಲ್ಲಿನ ದೇಶೀಯ ಗಲಭೆ ಟಾಂಗಾರ್ತ್ ದಂಗೆಯೆಂದೆ ಪ್ರಸಿದ್ಧಿಯಾಗಿದೆ. ಟಾಂಗ್ ಹಾಕ್ ಅಥವಾ ಪ್ರಾಚ್ಯ ಕಲಿಕೆ ಸಂಘ ಮೂಲತಃಹ ಒಂದು ಧಾರ್ಮಿಕ ಪಂಥವಾಗಿದ್ದು, ಅದರ ಅನುಯಾಯಿಗಳು ಪಾಶ್ಚಾತ್ಯ ನಾಗರೀಕತೆಯ ವಿರುದ್ಧ ಪೌರಾತ್ಯ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಬೆಳೆದ ಸಂಘಟನೆಯಾಗಿತ್ತು. ಅನಂತರದಲ್ಲಿ ಈ ಧಾರ್ಮಿಕ ಪಂಥ ರಾಜಕೀಯ ಚಳುವಳಿಯಾಗಿ ಮಾರ್ಪಟ್ಟು ಜನ ಸಾಮಾನ್ಯರ ಅನುಕೂಲಕ್ಕಾಗಿ ಪ್ರಜಾಪೀಡಿತ ಭ್ರಷ್ಟ ಅಧಿಕಾರಿಗಳನ್ನು ಕೊಲೆ ಮಾಡಬೇಕೆಂದು ಪ್ರತಿವಾದಿಸತೊಡಗಿತು. ಭ್ರಷ್ಟ ಸರ್ಕಾರದ ಅಧಿಕಾರಿಗಳಿಂದ ತೊಂದರೆಗೊಳಗಾಗಿದ್ದ ಜನ ಸಾಮಾನ್ಯರು ಟಾಂಗ್ ಹಾಕ್ ದಂಗೆ ಕಾರರಿಗೆ ಬೆಂಬಲ ನೀಡಿದರು. 1894 ರ ಮಾರ್ಚಿಯಲ್ಲಿ ದಕ್ಷಿಣ ಪ್ರಾಂತ್ಯದಲ್ಲಿ ಪ್ರಾರಂಭವಾದ ದಂಗೆ ಕೆಲವೆ ತಿಂಗಳಲ್ಲಿ ವ್ಯಾಪಕವಾಗಿ ಹರಡಿತು. ದಂಗೆ ವಿದೇಶಿ ವಿರುದ್ಧದ ಕ್ರೈಸ್ತ ಧರ್ಮದ ವಿರುದ್ಧದ ಮತ್ತು ಮುಂದುವರೆದು ಜಪಾನೀಯರ ವಿರುದ್ಧದ ನಿಲುವನ್ನು ಹೊಂದಿದ್ದು ಅದೆಲ್ಲಕ್ಕೂ ಕಾರಣ ಕೊರಿಯಾದ ಭ್ರಷ್ಟ ಸರ್ಕಾರವೆಂದು ಅದಕ್ಕಾಗಿ ಭ್ರಷ್ಟ ಸರ್ಕಾರವನ್ನು ನಿರ್ಮೂಲ ಮಾಡಲು ಪ್ರಯತ್ನಿಸಿತು. ಕೊರಿಯಾ ಸರ್ಕಾರವು ದಂಗೆಕಾರರನ್ನು ಹತ್ತಿಕ್ಕಲು ಸೈನ್ಯವನ್ನು ಕಳುಹಿಸಿತು. ಆದರೆ ದಂಗೆಕೋರರು ಕೊರಿಯಾದ ಸೈನ್ಯವನ್ನು ಮೊದಲ ಹಂತದಲ್ಲಿ ಸೋಲಿಸಿದರು. ಯುಆನ್ ಷಿಕೈನ ಸಲಹೆಯ ಮೇರೆಗೆ ಚೀನಾ 15,000 ಚೀನೀ ಸೈನಿಕರನ್ನು ಕೊರಿಯಾಕ್ಕೆ ಕಳುಹಿಸಿತು. ಈ ವಿಷಯವನ್ನು ಟೀನ್‌ಟ್ಸಿನ್ ಒಪ್ಪಂದದ ಪ್ರಕಾರ ಜಪಾನಿಗೂ ತಿಳಿಸಲಾಯಿತು. ಜಪಾನಿ ಸರ್ಕಾರವು 7000 ಜಪಾನಿ ಸೈನ್ಯವನ್ನು ಕೊರಿಯಾಕ್ಕೆ ಕಳುಹಿಸಿ ಮತ್ತಷ್ಟು ಸೈನ್ಯದ ಸಿದ್ಧತೆಯಲ್ಲಿ ತೊಡಗಿತು. ಚೀನಾವು ಜಪಾನ್ ತನ್ನ ಸೈನ್ಯವನ್ನು ಕೊರಿಯಾಕ್ಕೆ ಕಳುಹಿಸುವುದೆಂದು ಭಾವಿಸಿರಲಿಲ್ಲ. ಆದರೆ ಚೀನಿ ಮತ್ತು ಜಪಾನಿ ಸೈನ್ಯಗಳು ಕೊರಿಯಾಕ್ಕೆ ಬರುವ ಮೊದಲೆ ದಂಗೆಯು ಶಮನಗೊಂಡಿತ್ತು ಹಾಗೂ ದಂಗೆಕೋರರ ಮೇಲೆ ಕೊರಿಯಾ ಸರ್ಕಾರವು ಹತೋಟಿಯನ್ನು ಹೊಂದಿತ್ತು. ಹಾಗಾಗಿ ಆ ಸಂದರ್ಭದಲ್ಲಿ ಕೊರಿಯಾ ಸರ್ಕಾರಕ್ಕೆ ಯಾರ ಸಹಾಯವು ಬೇಕಿರಲಿಲ್ಲ. ಆದರೆ ಕೊರಿಯಾದಲ್ಲಿ ಜಮಾವಣೆಗೊಂಡಿದ್ದ ಎರಡು ಸೈನ್ಯಗಳು ಸಿಯೋಲ್ ಹೊರಗಡೆ ದ್ವೇಷದಿಂದ ಒಂದು ಇನ್ನೊಂದನ್ನು ಎದುರು ನೋಡುತ್ತಿದ್ದವು.

ಕೊರಿಯಾದಲ್ಲಿನ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ಜಪಾನ್ ಮುಂದಾಗಿದ್ದಿತು. ಭೌಗೋಳಿಕವಾಗಿ ಕೊರಿಯಾದ ಸ್ಥಾನಮಾನ ಜಪಾನಿನ ಹೃದಯಕ್ಕೆ ಗುರಿಯಿಟ್ಟ ಪಿಸ್ತೂಲಿನಂತಿದ್ದು, ಕೊರಿಯಾ ಯಾವುದೇ ಪರ ರಾಷ್ಟ್ರದ ಹಿಡಿತದಲ್ಲಿರುವುದು ಅಪಾಯಕಾರಿ ಎಂದೆ ಪರಿಗಣಿಸಿತು. ಆ ದ ಕಾರಣ ಆರ್ಥಿಕ ಹಿತಾಸಕ್ತಿಗಳನ್ನು ಹೊಂದಿದ್ದ ಜಪಾನ್ ಚೀನಾಕ್ಕೆ ಆಹ್ವಾನ ನೀಡಿ, ಎರಡು ರಾಷ್ಟ್ರಗಳು ಸೇರಿ ಕೊರಿಯಾದಲ್ಲಿ ಹಣಕಾಸು, ಆಡಳಿತ ಮತ್ತು ಸೈನಿಕ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ತರಬೇಕೆಂದು ಬಯಸಿತು. ಚೀನಾ ಕೊರಿಯಾದ ಆಂತರಿಕ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ತಿಳಿಸಿತು. ಜಪಾನ್ ತಾನೇ ಮುಂದುವರೆದು ಸುಧಾರಣೆಗಳನ್ನು ತರಲು ಯತ್ನಿಸಿತು.

### *132.3.6 ಐರೋಪ್ಯ ರಾಷ್ಟ್ರಗಳ ನಡವಳಿಕೆ*

ಮೊದಲಿನಿಂದಲೂ ಅಮೆರಿಕಾವನ್ನು ಒಳಗೊಂಡಂತೆ ಐರೋಪ್ಯ ರಾಷ್ಟ್ರಗಳು ಚೀನಾದಲ್ಲಿ ತಮ್ಮ ವ್ಯಾಪಾರಿ ಮತ್ತು ಆಡಳಿತಾತ್ಮಕ ಹಿತಾಸಕ್ತಿಗಳನ್ನು ಹೊಂದಿದ್ದು, ಕೊರಿಯಾದ ಆಂತರಿಕ ಹಿನ್ನೆಲೆಯಲ್ಲಿ ತಲೆ ಹಾಕಿದ ಜಪಾನ್ ಮತ್ತು ಚೀನಾ ಒಂದಕ್ಕೊಂದು ಎದುರಾದಾಗ ಐರೋಪ್ಯ ರಾಷ್ಟ್ರಗಳು ಸ್ವಾಭಾವಿಕವಾಗಿ ಚೀನಾದ ಬೆಂಬಲಕ್ಕೆ ನಿಂತುವು. ಕೆಲ ಸಮಯದವರೆಗೆ ಚೀನಿಯರ ಕಾರಣಕ್ಕೆ ಬೆಂಬಲ ನೀಡಿದ ಬ್ರಿಟನ್ ಕೊರಿಯಾದ ಪ್ರದೇಶವನ್ನು ಜಪಾನ್ ಆಕ್ರಮಿಸಿಕೊಳ್ಳುವುದನ್ನು ಪ್ರಶ್ನಿಸಿ ಎರಡು ರಾಷ್ಟ್ರಗಳ ನಡುವಿನ ವಿವಾದವನ್ನು ಬಗೆಹರಿಸಲು ಮಧ್ಯಸ್ಥಿಕೆಗೆ ಪ್ರಯತ್ನಿಸಿ ವಿಫಲವಾಯಿತು. ಕೊರಿಯಾ ಪ್ರಬಲವಾದ ಜಪಾನಿನ ಹಿಡಿತದಲ್ಲಿರುವುದಕ್ಕಿಂತ ದುರ್ಬಲವಾದ ಚೀನಾದ ಹತೋಟಿಯಲ್ಲಿರುವುದೆ ತನಗೆ ಒಳ್ಳೆಯದೆಂದು ಭಾವಿಸಿದ ರಷ್ಯಾ ಚೀನಾಕ್ಕೆ ತನ್ನ ಬೆಂಬಲ ಸೂಚಿಸಿತು. ಕೊರಿಯಾದ ಸ್ವಾತಂತ್ರಕ್ಕೆ ಧಕ್ಕೆ

ತರುವ ಜಪಾನಿನ ಯಾವುದೇ ಕ್ರಮವನ್ನು ವಿರೋಧಿಸಿತು. ಜಪಾನ್ ಕೊರಿಯಾದಲ್ಲಿ ತನಗೆ ಯಾವುದೇ ಪ್ರಾದೇಶಿಕ ಆಸಕ್ತಿ ಇಲ್ಲವೆಂದು ಕೇವಲ ಸುಧಾರಣೆಗಳನ್ನು ತರುವಲ್ಲಿ ತಾನು ಆಸಕ್ತಿ ಹೊಂದಿರುವುದಾಗಿ ಆ ಮೂಲಕ ಐರೋಪ್ಯ ವ್ಯಾಪಾರಕ್ಕೆ ನುಕೂಲವಾಗುವುದೆಂದು ಮತ್ತು ಯುದ್ಧ ಅನಿವಾರ್ಯವಾದರೆ ಐರೋಪ್ಯರ ವ್ಯಾಪಾರಿ ಕೇಂದ್ರವಾಗಿದ್ದ ಷಾಂಘೈ ಪ್ರದೇಶದ ಮೇಲೆ ತಾನು ಆಕ್ರಮಣ ಮಾಡುವುದಿಲ್ಲವೆಂದು ತಿಳಿಸಿತು. ಐರೋಪ್ಯ ರಾಷ್ಟ್ರಗಳು ಜಪಾನಿನ ಸೈನಿಕ ಶಕ್ತಿಯ ಬಗ್ಗೆ ಹಗುರವಾದ ಭಾವನೆಗಳನ್ನು ಹೊಂದಿದ್ದು ಯುದ್ಧದಲ್ಲಿ ಜಪಾನ್ ಗೆಲುವು ಅಸಾಧ್ಯವೆಂದೆ ನಂಬಿದ್ದವು. ಆ ಕಾರಣ ಜಪಾನಿಯರ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದವು. ಪ್ಯಾಂಗ್ ಪ್ಯಾಂಗ್ ಮತ್ತು ಯಾಲು ಯುದ್ಧಗಳಲ್ಲಿ ಜಪಾನ್ ಗೆದ್ದಾಗ ಐರೋಪ್ಯರು ದಿಗ್ಭ್ರಮೆಗೊಂಡರು. ಬ್ರಿಟನ್ ತಾನು ಫ್ರಾನ್ಸ್, ಜರ್ಮನಿ, ರಷ್ಯಾ ಮತ್ತು ಅಮೆರಿಕಾವನ್ನು ಆಹ್ವಾನಿಸಿ ಒಟ್ಟಾಗಿ ಚೀನಿ ಜಪಾನಿನ ನಡುವಿನ ಸಂಧಾನ ಕೈಗೊಳ್ಳಲು ಅಪೇಕ್ಷಿಸಿತು. ಆದರೆ ಜರ್ಮನಿ ಮತ್ತು ಅಮೆರಿಕಾ ತಿರಸ್ಕರಿಸಿದ ಕಾರಣ ಬ್ರಿಟನ್ ಆ ಯೋಜನೆಯನ್ನು ಕೈ ಬಿಟ್ಟಿತು. ಹಾಗಾಗಿ ಐರೋಪ್ಯರಲ್ಲಿ ಜಪಾನಿನ ಬಗ್ಗೆ ಇದ್ದ ಹಗುರವಾದ ಭಾವನೆ ಮತ್ತು ನಿರ್ಲಿಪ್ತತೆ ಪರೋಕ್ಷವಾಗಿ ಚೀನಾ ಜಪಾನ್ ಯುದ್ಧದಲ್ಲಿ ಜಪಾನೀಯರ ಪರವಾದ ನಿಲುವಾಯಿತು.

## 132.4 ಯುದ್ಧದ ಘಟನೆಗಳು

ಕೊರಿಯಾದ ದೇಶೀಯ ದಂಗೆಯನ್ನು ಬಳಸಿಕೊಂಡು ಸೈನ್ಯ ಜಮಾವಣೆ ಮಾಡಿದ್ದು, ಚೀನಾ ಮತ್ತು ಜಪಾನ್ ರಾಷ್ಟ್ರಗಳು ದಂಗೆ ಶಮನಗೊಂಡ ನಂತರ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ವಿಚಾರದಲ್ಲಿ ವಿಳಂಬ ನೀತಿಯನ್ನು ಅನುಸರಿಸಿದವು. ಟೋಕಿಯೋದಲ್ಲಿನ ಜಪಾನಿ ಮಂತ್ರಿ ಮಂಡಲವು ಕೊರಿಯಾದಿಂದ ಚೀನಾದ ಸೈನ್ಯವನ್ನು ಹೊರಗಟ್ಟಲು ಯುದ್ಧ ಮಾಡುವಂತೆ ಸೂಚಿಸಿತು. ಜಪಾನಿಯ ಸುಧಾರಣೆ ಸಲಹೆಗಳನ್ನು ಕೊರಿಯಾ ಸರ್ಕಾರ ನಿರ್ಲಕ್ಷಿಸಿದ ಕಾರಣ, ಜಪಾನಿಯರ ಸೈನ್ಯವು ಜುಲೈ 23ರಂದು ಕೊರಿಯಾದ ರಾಜನನ್ನು ಬಂಧಿಸಿ ಸುಧಾರಣೆಗಳ ಮೂಲಕ ಸರ್ಕಾರದ ಪುನರ್ ವ್ಯವಸ್ಥೆ ಕಾರ್ಯದಲ್ಲಿ ತೊಡಗಿತು. ಜಪಾನ್ ಯುದ್ಧ ಘೋಷಿಸಲಾರದೆಂದು ನಂಬಿದ್ದ ಚೀನಾ ಕೊರಿಯಾಕ್ಕೆ ಹೆಚ್ಚಿನ ಸೈನ್ಯ ಕಳುಹಿಸುವ ಗೋಜಿಗೆ ಹೋಗಲಿಲ್ಲ. ಚೀನಾದ ಈ ಧೋರಣೆ ಜಪಾನಿಗೆ ಸುಲಭವಾಗಿ ಸಿಯೋಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ದಾರಿ ಮಾಡಿತು. 1894 ನೇ ಜುಲೈ 25 ರಂದು ನೇರವಾಗಿ ಯುದ್ಧ ಕಾರ್ಯಾಚರಣೆ ಪ್ರಾರಂಭವಾಗಿದ್ದು, ಮೊದಲಿಗೆ ಚೀನಿ ಸೈನಿಕರಿದ್ದ ಕೌಷಿಂಗ್ ನೌಕೆಯನ್ನು ಜಪಾನಿಗರು ಹಳದಿ ಸಮುದ್ರದಲ್ಲಿ ಮುಳುಗಿಸಿದರು. ನಂತರ ಜನರಲ್ ಒಷಿಮನ ನೇತೃತ್ವದಲ್ಲಿದ್ದ ಜಪಾನಿ ಸೈನ್ಯ ಕೊರಿಯಾದ ಭಾಗದಲ್ಲಿ ಚೀನಿ ಸೈನ್ಯವನ್ನು ಸೋಲಿಸಿತು. ಅಂತೆಯೇ 12 ನೌಕೆಗಳಿಂದ ಕೂಡಿದ್ದ ಚೀನಿ ನೌಕಾ ಪಡೆಯನ್ನು ಯಾಲು ನದಿಯ ಮುಖಜ ಭೂಮಿಯಲ್ಲಿ ಜಪಾನಿಯರ ನೌಕಾಪಡೆಯು ಅಡ್ಡಗಟ್ಟಿ ಸೋಲಿಸಿತು. 1894ರ ಅಕ್ಟೋಬರ್‌ನಲ್ಲಿ ಯಮಗಾಟನ ನೇತೃತ್ವದ ಜಪಾನಿ ಸೈನ್ಯ ಯಾಲು ನದಿಯನ್ನು ದಾಟಿ ಮಂಚೂರಿಯಾಕ್ಕೆ ಪ್ರವೇಶಿಸಿತು. ಜನರಲ್ ಓಮಯುನ ನೇತೃತ್ವದ ಮತ್ತೊಂದು ಸೈನ್ಯ ಪ್ರವೇಶಿಸಿ ಮುಖ್ಯ ಬಂದರು ಪ್ರದೇಶಗಳನ್ನು ಹಿಡಿದುಕೊಂಡಿತು. ಅಪಾರ ಹಣವನ್ನು ಖರ್ಚು ಮಾಡಿ ನಿರ್ಮಿಸಲಾಗಿದ್ದ ಪೋರ್ಟ್ ಆರ್ಥರ್ ನೌಕಾ ನೆಲೆಯು ಜಪಾನಿಯರ ವಶವಾಯಿತು. 1895ರ ಮಾರ್ಚಿನಲ್ಲಿ ಜಪಾನಿ ಸೈನ್ಯಗಳು ಒಟ್ಟುಗೂಡಿ ವಾಂಟುಂಗ್, ಫಾರ್ಮೋಸಾ ಮತ್ತು ಪೆಸ್ಕಡೋರೆಸ್‌ಗಳ ಮೇಲೆ ಆಕ್ರಮಣ ಮಾಡಿ ವಶ ಪಡಿಸಿಕೊಂಡವು. ದುರ್ಬಲ ಚೀನಾ ಸೋತು ಶರಣಾಯಿತು.

## 132.5 1895ರ ಷಿಮನೋಸಕಿ ಒಪ್ಪಂದ

ಚೀನಾದ ಲೀಹಂಗ್ ಚಾಂಗ್‌ನು ಯುದ್ಧದಲ್ಲಿ ದಕ್ಷಿಣ ಚೀನಾದ ಪ್ರಾಂತ್ಯಾಧಿಕಾರಿಗಳ ಸಹಾಯ ಪಡೆಯುವಲ್ಲಿ ವಿಫಲನಾಗಿದ್ದನು. ಅವನು ಚೀನಾ ಸೋಲಿನ ಕಹಿಯನ್ನು ನೋಡುತ್ತಿರುವ ಸಂದರ್ಭದಲ್ಲಿಯೇ ಶಾಂತಿ ಸಂಧಾನಕ್ಕಾಗಿ ಐರೋಪ್ಯ ರಾಷ್ಟ್ರಗಳ ಮಧ್ಯಸ್ಥಿಕೆಯನ್ನು ಎದುರು ನೋಡುತ್ತಿದ್ದನು. ಚೀನಾದ ಸೋಲಿಗೆ ಲೀ ಹಂಗ್ ಚಾಂಗ್‌ನೆ ಜವಾಬ್ದಾರನೆಂದು ಪೀಕಿಂಗ್ ಸರ್ಕಾರದ ಆಪಾದನೆಗೊಳಗಾಗಿದ್ದ ಅವನು ಜಪಾನ್ ಕಠಿಣವಾದ ಷರತ್ತುಗಳನ್ನು ಎಲ್ಲಿ ಹೇರುವುದೋ ಎಂದು ಹೆದರಿ ಶಾಂತಿ ಸಂಧಾನಕ್ಕೆ ತಾನೆ ಮೊದಲು ಮುಂದಾದನು. ಲೀ ಹಂಗ್ ಚಾಂಗ್ ಜಪಾನಿನ ಪ್ರಧಾನಿ ಇಟೋ ಹಿರೋ ಬೂಮಿಯೊಂದಿಗೆ ಶಾಂತಿ ಸಂಧಾನದ ಮಾತುಕತೆಗಳನ್ನಾಡಲು ಜಪಾನಿನ ಷಿಮನೋಸಕಿಗೆ ಹೋದನು. ಸಂಧಾನದ ಮಾತುಕತೆಗಳು ಒಂದು ತಿಂಗಳ ಕಾಲ ಮುಂದುವರೆದು ಏಪ್ರಿಲ್ 17ರಂದು ಷಿಮನೋಸರೆ ಒಪ್ಪಂದಕ್ಕೆ ಇಬ್ಬರು ಸಹಿ ಹಾಕಿದರು.

*. ಷಿಮನೋಸಕಿ ಒಪ್ಪಂದದ ಕರಾರುಗಳು*

1. ಈ ಒಪ್ಪಂದದಿಂದಾಗಿ ಕೊರಿಯಾದ ಸಂಪೂರ್ಣ ಸ್ವಾತಂತ್ರ್ಯವನ್ನು ಚೀನಾ ಒಪ್ಪಿಕೊಂಡಿತು.
2. ಫಾರ್ಮೋಸ್, ಪೆಸ್ಕಡೋರೆಸ್ ಮತ್ತು ಲಿಯೋಟುಂಗ್ ಪರ್ಯಾಯ ದ್ವೀಪಗಳನ್ನು ಜಪಾನಿಗೆ ಬಿಟ್ಟುಕೊಡಲು ಚೀನಾ ಒಪ್ಪಿತಾದರು, ರಷ್ಯ, ಜರ್ಮನಿ, ಮತ್ತು ಫ್ರಾನ್ಸ್‌ಗಳ ತ್ರಿರಾಷ್ಟ್ರ ಮಧ್ಯ ಪ್ರವೇಶದಿಂದಾಗಿ ಈ ಕರಾರು ಕಾರ್ಯಗತವಾಗಲಿಲ್ಲ.
3. ಯುದ್ಧ ನಷ್ಟ ಪರಿಹಾರವಾಗಿ 200 ಮಿಲಿಯನ್ ಟೇಲ್ಸ್ ಹಣವನ್ನು ಚೀನಾ ಜಪಾನಿಗೆ ಕೊಡಲು ಒಪ್ಪಿಕೊಂಡಿತು.

4. ಷಾಷಿ, ಚಾಂಗ್‌ಚಿಂಗ್ ಸೂಚೋವ ಮತ್ತು ಹಾಂಗ್ ಚ್ಯೆ ಬಂದರುಗಳನ್ನು ಜಪಾನಿಯರ ವ್ಯಾಪಾರ ಮತ್ತು ಕೈಗಾರಿಕೆ ಉದ್ದೇಶಗಳಿಗೆ ಬಳಸಿಕೊಳ್ಳಲು ಬಿಟ್ಟುಕೊಟ್ಟಿತು.

5. ಚೀನಾ ಜಪಾನಿನೊಂದಿಗೆ ಒಂದು ಹೊಸ ಒಪ್ಪಂದ ಮಾಡಿಕೊಂಡು ವ್ಯಾಪಾರ ವಾಣಿಜ್ಯಗಳಿಗೆ ಸಂಬಂಧಿಸಿದಂತೆ ಮೋಸ್ಟ್ ಫೇವರೇಟ್ ನೇಷ್‌ನ್ ಅಸ್ತಿತ್ವವನ್ನು ಒಪ್ಪಿಕೊಂಡಿತು.

6. ಜಪಾನಿಗೆ ಚೀನಾದಲ್ಲಿ ಅಧಿಕ ಪ್ರಾದೇಶಿಕ ಹಕ್ಕುಗಳನ್ನು ನೀಡಿತು.

7. ಚೀನಾಕ್ಕೆ ಕಸ್ಟಮ್ಸ್ ತೆರಿಗೆ ನೀಡಿ ಜಪಾನ್ ಯಾವುದೇ ರೀತಿಯಾದ ಯಂತ್ರಗಳನ್ನು ಚೀನಾದ ಭಾಗಗಳಿಗೆ ರವಾನಿಸುವ ಹಕ್ಕನ್ನು ಪಡೆಯಿತು.

8. ಮತ್ತು ಚೀನಾದ ಒಳಗೆ ಜಪಾನಿಯರು ಸಿದ್ಧ ವಸ್ತುಗಳನ್ನು ತಯಾರಿಸಲು ಮತ್ತೆ ಅವುಗಳ ಮೇಲೆ ಚೀನ ಯಾವ ರೀತಿಯಾದ ತೆರಿಗೆಗಳನ್ನು ವಿಧಿಸಕೂಡದೆಂಬ ಷರತ್ತಿಗೂ ಒಪ್ಪಿಗೆ ನೀಡಿತು.

## 132.6 ಯುದ್ಧದ ಪರಿಣಾಮಗಳು

1894-95ರ ಚೀನಾ ಜಪಾನ್ ಯುದ್ಧ ಜಪಾನಿನ ಷರತ್ತುಗಳನ್ನು ಒಪ್ಪುವ ಮೂಲಕ ಷಿಮನೋಸಕಿ ಒಪ್ಪಂದದೊಂದಿಗೆ ಕೊನೆ ಕಂಡಿದ್ದರೂ ಕೂಡ, ಅದರ ಪರಿಣಾಮಗಳು ಏಷ್ಯಾದ ಮತ್ತು ಅಂತರ ರಾಷ್ಟ್ರೀಯ ರಾಜಕೀಯದ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದವು.

1. ಈ ಯುದ್ಧದ ಗೆಲುವಿನಿಂದಾಗಿ ಜಪಾನಿನ ರಾಜಕೀಯ ಅಸ್ತಿತ್ವ ಗಣನೀಯವಾಗಿ ಬೆಳೆದಿದ್ದು, ಐರೋಪ್ಯರಿಗೆ, 'ಹಳದಿಗುಳಿಗೆ'ಯಾಗಿ ಪರಿಣಮಿಸಿತು. ಹಾಗಾಗಿ ಐರೋಪ್ಯರೊಂದಿಗೆ ಅಸಮ ಒಪ್ಪಂದಗಳನ್ನು ಮಾಡಿಕೊಂಡಿದ್ದ ಜಪಾನ್ ಅದಕ್ಕೆ ಅಂತ್ಯ ಹಾಡಿತು. ಮತ್ತು ತಾನೂ ಕೂಡ ಐರೋಪ್ಯರಂತೆ ಷಾಹಿಧೋರಣೆಗಳನ್ನು ಅನುಸರಿಸಿತು.

2. ಚೀನಾದಿಂದ ಪಡೆದ ಬೃಹತ್ ಮಟ್ಟದ ಯುದ್ಧ ನಷ್ಟ ಪರಿಹಾರ ಜಪಾನಿನ ಆರ್ಥಿಕ ಸಾಧನೆಗಳಿಗೆ ಹೆಚ್ಚಿನ ಸಹಕಾರಿಯಾಯಿತು. ಜಪಾನ್ ತನ್ನ ಸೈನ್ಯ, ನೌಕಾದಳ, ಕೈಗಾರಿಕೆಗಳು ಮತ್ತು ಗಣಿ ಉದ್ಯಮಗಳನ್ನು ಬಲಯುತಗೊಳಿಸಿತು.

3. ಚೀನಾ ಜಪಾನ್ ಯುದ್ಧದಲ್ಲಿನ ಜಪಾನಿಯರ ಗೆಲುವು ಜಪಾನ್‌ನ್ನು ಪಾಶ್ಚಾತ್ಯ ರಾಷ್ಟ್ರಗಳ ಸಾಲಿಗೆ ಸೇರಿದ್ದರಿಂದ ಪಾಶ್ಚಿಮಾತ್ಯರು ಜಪಾನಿನ ಮೇಲೆ ಯಾವುದೇ ರೀತಿ ವ್ಯಾಪಾರಿ ವಾಣಿಜ್ಯಗಳ ಒತ್ತಡವನ್ನು ಹೇರಲು ವಿಫಲವಾದವು.

4. ಯುದ್ಧ ಜಪಾನೀಯರಲ್ಲಿ ಐಕ್ಯತೆ ಮತ್ತು ರಾಷ್ಟ್ರೀಯ ಭಾವನೆಗಳನ್ನು ಮೂಡಿಸಿತಲ್ಲದೆ, ಜಪಾನಿಯರಲ್ಲಿ ಉಗ್ರ ರಾಷ್ಟ್ರೀಯತೆ ಬೆಳೆಯಲು ಕಾರಣವಾಯಿತು. ಮತ್ತು ಸೈನಿಕ ಪ್ರಭುತ್ವವು ಹೆಚ್ಚಿನ ಅಧಿಕಾರವನ್ನು ಪಡೆಯಿತು.

5. ಎಲ್ಲದಕ್ಕಿಂತ ಹೆಚ್ಚಿನದಾಗಿ ಐರೋಪ್ಯ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು ಏಷ್ಯಾದಲ್ಲಿ ಬೆಳೆಸಿ ಉಳಿಸಿಕೊಳ್ಳಲು ಪರದಾಡುತ್ತಿದ್ದು ಈ ಸಂದರ್ಭದಲ್ಲಿ ಜಪಾನಿನ ಗೆಲುವು, ಪಾಶ್ಚಿಮಾತ್ಯರ ಅಗ್ರರಾಷ್ಟ್ರವಾಗಿದ್ದ ಬ್ರಿಟನ್‌ಗೆ ಪೌರಾತ್ಯ ಮೈತ್ರಿ ಒಪ್ಪಂದದ ಮೂಲಕ ಬ್ರಿಟನ್ ಮತ್ತು ಜಪಾನ್ ಎರಡು ರಾಷ್ಟ್ರಗಳು ರಷ್ಯಾದ ವಿಸ್ತರಣಾ ನೀತಿಗೆ ತಡೆ ಹಾಕಿದವು.

ಇವೆಲ್ಲಕ್ಕು ಪ್ರತಿಯಾಗಿ ಚೀನಿಯರ ಸೋಲು ಮಂಚೂ ಆಳ್ವಿಕೆಯ ದುರ್ಬಲತೆಯನ್ನು ಹೊರಹಾಕಿತು. ಮಂಚೂ ಪ್ರಭುತ್ವ ಪ್ರಜಾಬೆಂಬಲವನ್ನು ಕಳೆದುಕೊಂಡಿತು. ಚೀನೀ ಯುವ ಜನತೆ ಸೋಲಿಗೆ ಮಂಚೂ ಆಡಳಿತವೆ ಕಾರಣವೆಂದು ದೂಷಿಸಿದರು ಮತ್ತು ಮಂಚೂ ಪ್ರಭುತ್ವವನ್ನು ಕೊನೆಗಾಣಿಸಲು ಬಾಕ್ಸರ್ ದಂಗೆಯೆ ನಡೆಯಿತು. ಆದರೆ ಇವೆಲ್ಲ ಬೆಳವಣಿಗೆಗಳ ಮಧ್ಯೆ ಚೀನಾಕ್ಕೆ ದೊರೆತ ಲಾಭವೆಂದರೆ ಅಮೆರಿಕಾದ ತೆರೆದ ಬಾಗಿಲು ನೀತಿ ಮತ್ತು ಐರೋಪ್ಯರ ಸವಲತ್ತುಗಳಿಗಾಗಿ ನಡೆಸಿದ ಪರದಾಟದಿಂದಾಗಿ ಚೀನಾವನ್ನು ವಿಭಜಿಸಿ ಅಧಿಕಾರ ಹೊಂದುವ ಐರೋಪ್ಯರ ಉದ್ದೇಶ ಬದಲಾಗಿ, ಬೆಳೆಯುತ್ತಿರುವ ಜಪಾನನ್ನು ತಡೆಹಿಡಿಯಲು ಮತ್ತು ಏಷ್ಯದಲ್ಲಿ ಸಮಚಿತ್ತತೆಯನ್ನು ಕಾಪಾಡಲು ಚೀನಿಯರ ಐಕ್ಯತೆಯನ್ನು ಉಳಿಸುವಲ್ಲಿ ಕೊನೆಗೊಂಡಿತು.

## 132.7 ಒಟ್ಟಾರೆ ಸಾರಾಂಶ ನೀಡುವ ಬನ್ನಿ

ಮೊದಲಿನಿಂದಲೂ ಕೊರಿಯಾ ಚೀನಾದೇಶದ ಸಾಮಂತ ಪ್ರಭುತ್ವವಾಗಿದ್ದು, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಚೀನಿಯರ ಪ್ರಭಾವಕ್ಕೊಳಗಾಗಿತ್ತು. ಚೀನಾ ಮತ್ತು ಜಪಾನ್ ನಡುವಿನ ಯುದ್ಧಕ್ಕೆ ಸನ್ಯಾಸಿ ರಾಜ್ಯವೆಂದೆ ಹೆಸರಾದ ಕೊರಿಯಾವೆ ಪ್ರಮುಖ ಹಿನ್ನೆಲೆಯಾಗಿದ್ದು, ಕೊರಿಯಾದಲ್ಲಿ ದೇಶೀಯ ದಂಗೆ ಅಂದರೆ ಟಾಂಗ್ ಹಾಕ್ ದಂಗೆ, ಚೀನಾ ಮತ್ತು ಜಪಾನನ್ನು ಯುದ್ಧದೆಡೆಗೆ

 ನೂಕಿದವು. 19ನೇ ಶತಮಾನದಲ್ಲಿನ ಮಿಜಿ ಪುನರ್‌ಸ್ಥಾಪನೆ ಮತ್ತು ಸುಧಾರಣೆಗಳು, ಅವುಗಳ ಮೂಲಕ ಆಧುನೀಕರಣಗೊಂಡ

ಜಪಾನ್ ತಾನು ಕೂಡ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ನೀತಿಯನ್ನು ಅನುಸರಿಸಲು ಪ್ರಾರಂಭಿಸಿತು. ಕೊರಿಯಾ ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಚೀನಾದೊಡನೆ ಮತ್ತು ಭೌಗೋಳಿಕವಾಗಿ ಜಪಾನಿಗೆ ಅಂಟಿಕೊಂಡಿದ್ದು ಜಪಾನ್ ಮತ್ತು ಚೀನಾ ಎರಡು ರಾಷ್ಟ್ರಗಳು ಕೊರಿಯಾದಲ್ಲಿ ಆಸಕ್ತಿ ಹೊಂದಿದ್ದವು. ಕೊರಿಯಾದ ರಿತ್ಯೂ ದ್ವೀಪಗಳಲ್ಲಿ ಸಂಭವಿಸಿದ ತೊಂದರೆಗಳು ಈ ದ್ವೀಪಗಳ ಮೇಲಿನ ಜಪಾನಿ ಹಿಡಿತ ನೆಪಮಾತ್ರಕ್ಕಿದ್ದರೂ, 1870 ರ ಶದಶಕದಲ್ಲಿ ನಡೆದ ಘಟನೆ ಅಂದರೆ ರಿಕ್ಯೂ ದ್ವೀಪದ ನಿವಾಸಿಗಳ್ ಹದಗೊಂಡು ಒಡೆದು, ನಿವಾಸಿಗಳು ಫಾರ್ಮೋಸಾ ತೀರವನ್ನು ತಲುಪಿದಾಗ ಅಲ್ಲಿನ ಮೂಲನಿವಾಸಿಗಳು ರಿತ್ಯೂ ನಿವಾಸಿಗಳನ್ನು ಕೊಂದು ಹಾಕಿದರು ಜಪಾನ್ ತನ್ನ ಪ್ರಜೆಗಳ ಸಾವಿಗೆ ತಕ್ಕ ನಷ್ಟಪರಿಹಾರವನ್ನು ಚೀನಾ ನೀಡುವಂತೆ ಒತ್ತಾಯಿಸಿದಾಗ ಚೀನಾ ಜವಾಬ್ದಾರಿಯನ್ನು ನಿರಾಕರಿಸಿ, ಅಂತಿಮವಾಗಿ ಬ್ರಿಟೀಷರ ಮಧ್ಯಸ್ಥಿಕೆಯಿಂದ ರಿಕ್ಯೂ ದ್ವೀಪಗಳ ಮೇಲೆ ಜಪಾನ್ ನ್ಯಾಯಯುತವಾದ ಹಕ್ಕನ್ನು ಪಡೆಯಿತು ಹಾಗೂ ಈ ಬೆಳವಣಿಗೆಗಳು ಮುಂದೆ ಚೀನಾ ಮತ್ತು ಜಪಾನಿಯರ ನಡುವೆ ಯುದ್ಧಕ್ಕೆ ನಾಂದಿಯಾಯಿತು.

ಚೀನಾಕ್ಕೆ ಪೊಗದಿ ಸಲ್ಲಿಸುತ್ತಿದ್ದ ಕೊರಿಯಾ ಚೀನಿ ಸಂಸ್ಕೃತಿ ಸಾಮಾಜಿಕ ಮೌಲ್ಯ, ಧರ್ಮ ಮತ್ತು ಚೀನಿ ಪರೀಕ್ಷಾ ಪದ್ಧತಿಗಳಿಂದ ಪ್ರಭಾವಿತವಾಗಿದ್ದು ಚೀನಾವನ್ನು ಹೊರತುಪಡಿಸಿ ಬೇರೆ ಯಾವುದೆ ಪರರಾಷ್ಟ್ರದೊಂದಿಗೆ ಸಂಪರ್ಕ ಹೊಂದಿರಲಿಲ್ಲ. ಆದಾಗ್ಯೂ 19ನೇ ಶತಮಾನದಲ್ಲಿ ಐರೋಪ್ಯರು ಕೊರಿಯಾದಲ್ಲಿ ಒಳನುಗ್ಗಿ ಧರ್ಮ ಪ್ರಚಾರ ಮತ್ತು ವ್ಯಾಪಾರಗಳನ್ನು ನಡೆಸಲು ಪ್ರಾರಂಭಿಸಿದ್ದರು. ಕೊರಿಯಾ ಉದ್ದಕ್ಕೂ ಚೀನಿ ಅಧಿಪ್ರಭುತ್ವವೆಂದೆ ಪರಿಗಣಿತವಾಗಿದ್ದರೂ ಯಾವುದೆ ರೀತಿಯಾದ ರಾಜಕೀಯ ಮತ್ತು ವ್ಯಾಪಾರ ಸಂಬಂಧಗಳಿಗೆ ಚೀನಾ ಬೇಜವಾಬ್ದಾರಿತನವನ್ನು ತೋರಿಸಿತ್ತು. ಹಾಗಾಗಿ ಅಧಿಕಾರದ ಹಿನ್ನೆಲೆಯಲ್ಲಿ ಚೀನಾ ಸಾಮ್ರಾಟ ಅಸ್ತಿತ್ವವನ್ನು ಹೊಂದಿದ್ದರು. ಸಮಸ್ಯೆಗಳಿಗೆ ಮತ್ತು ಜವಾಬ್ದಾರಿಗಳನ್ನು ಕಳಚಿ ಜಾರಿಕೊಳ್ಳುತ್ತಿತ್ತು.

ರಿಕ್ಯೂ ದ್ವೀಪಗಳ ಮೇಲೆ ಹಿಡಿತ ಸಾಧಿಸಿದ ಜಪಾನ್ ರಷ್ಯದ ವಿಸ್ತರಣಾ ನೀತಿಯನ್ನು ಗಂಭೀರವಾಗಿ ಪರಿಗಣಿಸಿ, ಕೊರಿಯಾದಲ್ಲಿ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಬೆಳಸಲು ಪ್ರಾರಂಭಿಸಿತು. ಕೊರಿಯಾ ರಾಜನ ಆಸ್ಥಾನದಲ್ಲಿ ಎರಡು ರಾಜಕೀಯ ಗುಂಪುಗಳಿದ್ದು ಒಂದು ಜಪಾನಿ ಪರವಾಗಿದ್ದರೆ ಮತ್ತೊಂದು ಚೀನಿ ಪರವಾದ ನಿಲುವನ್ನು ಹೊಂದಿದ್ದವು. ಕೊರಿಯಾದ ರೀಜೆಂಟ್ ಆಗಿದ್ದ ತೈವಾನ್ ಕುನ್ ಕೊರಿಯನ್ನರಲ್ಲಿ ಜಪಾನಿ ವಿರುದ್ಧದ ಭಾವನೆಗಳನ್ನು ಮೂಡಿಸಲು ಯತ್ನಿಸಿದ್ದನ್ನು ಕೊರಿಯನ್ನರು ಜಪಾನಿ ನೌಕೆಯ ಮೇಲೆ ಆಕ್ರಮಣ ಮಾಡಲಾಗಿ ಜಪಾನ್ ನೇರವಾಗಿ ಕೊರಿಯಾದಲ್ಲಿ ಆಸಕ್ತಿ ಬೆಳೆಸಲು ಕಾರಣವಾಯಿತು. ಜಪಾನ್ ಪೀಕಿಂಗ್‌ಗೆ ನಿಯೋಗವೊಂದನ್ನು ಕಳುಹಿಸಿ ನಡೆಯಬಹುದಾದ ಯುದ್ಧದ ಬಗ್ಗೆ ಅಭಿಪ್ರಾಯ ಕೇಳಿತು. ಚೀನಾ ಮೊದಲಿಗೆ ಬೇಜವಾಬ್ದಾರಿ ತೋರಿಸಿದರೂ ಆನಂತರ ಲೀ ಹಂಗ್ ಚಾಂಗ್ ಸಂಧಾನ ನಡೆಸಲು ಒಪ್ಪಿ 1875ರಲ್ಲಿ ಕಾಂಗುಹ ಒಪ್ಪಂದವಾಯಿತು ಮತ್ತು ಜಪಾನ್ ಕೊರಿಯಾದ 3 ಬಂದರುಗಳನ್ನು ವ್ಯಾಪಾರಕ್ಕೆ ಪಡೆಯಿತು. ಜಪಾನನ್ನು ತಡೆಹಿಡಿಯಲು ಯೋಚಿಸಿದ ಚೀನಾ ಕೊರಿಯಾಕ್ಕೆ ಐರೋಪ್ಯ ರಾಷ್ಟ್ರಗಳೊಂದಿಗೆ ವ್ಯಾಪಾರಿ ಒಪ್ಪಂದ ಮಾಡಿಕೊಳ್ಳಲು ಸೂಚಿಸಿತು.

ಜಪಾನಿ ಪರವಾದ ಕೊರಿಯನ್ನರ ಬೆಂಬಲ ಪಡೆದ ಜಪಾನಿನ ಇಟೋ ಸರ್ಕಾರ ಕೊರಿಯಾದಲ್ಲಿ ವ್ಯಾಪಾರ ವಾಣಿಜ್ಯ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿ ನಿರ್ದೇಶಿಸುವ ಪ್ರಯತ್ನ ಮಾಡಿತು. ಚೀನಾದ ಯು ಆನ್ ಷಿಕೈನ ಬೆಂಬಲಿಗರು ವಿರೋಧಿಸಿದರು ಮತ್ತು ಕೊರಿಯಾದ ಆಡಳಿತದಲ್ಲಿ ಅಧಿಕಾರ ಹೊಂದಿದ್ದ ಯು ಆನ್ ಸಲಹೆ ಮೇರೆಗೆ ಜಪಾನಿ ವರ್ತಕರಿಗೆ ಅಕ್ಕಿಯನ್ನು ಮಾರದಂತೆ ನಿಷೇಧಿಸಿದರು. ಕೊರಿಯಾದಲ್ಲಿ ಆರ್ಥಿಕ ಹಿತಾಸಕ್ತಿಗಳನ್ನು ಹೊಂದಿದ್ದ ಜಪಾನ್ ಅದರಲ್ಲೂ ಆಹಾರ ಉತ್ಪನ್ನಗಳ ಅವಶ್ಯಕತೆಯಿಂದಾಗಿ ಕೊರಿಯಾದಲ್ಲಿ ಹೆಚ್ಚಿನ ಅಧಿಕಾರ ಹೊಂದಲು ಹವಣಿಸತೊಡಗಿತು. ರಷ್ಯ ಕೂಡ ಮಂಚೂರಿಯಾದಲ್ಲಿ ಆಸಕ್ತಿ ಬೆಳೆಯಿಸಿಕೊಂಡಿದ್ದು ಕೊರಿಯಾದಲ್ಲಿನ ಹಿಮರಹಿತ ಬಂದರುಗಳನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಹವಣಿಸಿತ್ತು. ಹಾಗಾಗಿ ಜಪಾನ್ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಯನ್ನು ಹೊಂದಿದ್ದು, ರಷ್ಯ ಕೂಡ ಕೊರಿಯಾದಲ್ಲಿನ ವ್ಯಾಪಾರಿ ಆಸಕ್ತಿಯನ್ನು ಅಪೇಕ್ಷಿಸಿತು. ಕೊರಿಯಾದಲ್ಲಿನ ಆಂತರಿಕ ಸಮಸ್ಯೆಗಳು 1863ರಿಂದಲೆ ಉಲ್ಬಣಗೊಂಡಿತು, ಆಡಳಿತ ಭ್ರಷ್ಟಾಚಾರ, ರಾಜಕೀಯ ಗುಂಪುಗಳ ಹಣಾಹಣಿ, ತೈವಾನ್ ಕುನ್‌ನ ಒಡೆದು ಆಳುವ ನೀತಿ ಮೊಜಲಾಜ ಸಮಸ್ಯೆಗಳು ರಾಜಕೀಯವಾಗಿ ದುರ್ಬಲ ಸ್ಥಿತಿಯಲ್ಲಿತ್ತು. ಯಾವುದೆ ವಿದೇಶಿ ರಾಷ್ಟ್ರಗಳು ಕೊರಿಯಾದ ಮೇಲೆ ಹಿಡಿತ ಸಾಧಿಸದಂತೆ ನೋಡಿಕೊಳ್ಳುವ ಉದ್ದೇಶ ಹೊಂದಿದ್ದ ಜಪಾನ್, ಕೊರಿಯಾದಲ್ಲಿ ಸುಧಾರಣೆಗಳನ್ನು ತರುವ ಮೂಲಕ ಸ್ವತಂತ್ರ ರಾಷ್ಟ್ರವನ್ನಾಗಿ ಮತ್ತು ಜಪಾನಿನ ಹಿತಾಸಕ್ತಿ ವಲಯವನ್ನಾಗಿ ಪರಿವರ್ತಿಸಲು ಪ್ರಯತ್ನಿಸಿತು.

ಕೊರಿಯಾದಲ್ಲಿನ ದೇಶೀಯ ದಂಗೆ, ಟಾಂಗ್ ಪಾಕ್ ಅಂದರೆ ಪ್ರಾಚ್ಯ ಕಲಿಕೆ ಸಂಘ ಧಾರ್ಮಿಕ ಪಂಥವಾಗಿದ್ದು ಆನಂತರ ರಾಜಕೀಯ ಚಳುವಳಿಯಾಗಿ ಮಾರ್ಪಟ್ಟಿತು. ಟಾಂಗ್ ಹಾಕ್ ದಂಗೆ ವಿದೇಶಿ ವಿರುದ್ಧ, ಕ್ರೈಸ್ತದ ಧರ್ಮದ ಮತ್ತು ಜಪಾನಿಯರ ವಿರುದ್ಧದ ನಿಲುವನ್ನು ಹೊಂದಿದ್ದು, ಕೊರಿಯಾ ಸರ್ಕಾರ ಮೊದಲಿಗೆ ದಂಗೆ ಅಡಗಿಸಲು ನಿಷ್ಫಲವಾಗಿದ್ದು, ಹಾಗಾಗಿ ಚೀನಿ ಮತ್ತು ಜಪಾನಿ ಸೈನ್ಯಗಳು ದಂಗೆಯನ್ನು ಅಡಗಿಸಲು ಕೊರಿಯಾದಲ್ಲಿ ಬಂದು ಸೇರಿದವು. ವಿದೇಶಿ ಸೈನ್ಯಗಳು ಬರುವ ಮೊದಲೆ ದಂಗೆ ಶಮನಗೊಂಡಿದ್ದು ಸೈನ್ಯಗಳ ಹಿಂದಿರುಗುವಿಕೆ ಚೀನಿ ಜಪಾನೀಯರ ನಡುವಿನ ಯುದ್ಧಕ್ಕೆ ತಕ್ಷಣದ ಕಾರಣವಾಯಿತು. ಜೊತೆಗೆ ಐರೋಪ್ಯ ರಾಷ್ಟ್ರಗಳು ಮೊದಲಿಗೆ ಚೀನಿ ಪರವಾದ ನಿಲುವನ್ನು ಹೊಂದಿದ್ದರೂ ಆ ನಂತರ ನಿರ್ಲಿಪ್ತವಾದವು. ಯುದ್ಧ ಕೇವಲ ಕಲವೆ ತಿಂಗಳಿಗೆ

ಸೀಮಿತವಾಗಿದ್ದು, ಪ್ಯಾಂಗ್ ಹಾಂಗ್ ಮತ್ತು ಯಾಲು ಯುದ್ಧಗಳಲ್ಲಿ ಜಯ ಸಾಧಿಸಿದ ಜಪಾನ್ ಚೀನಾವನ್ನು ತನ್ನ ಕರಾರುಗಳಿಗೆ ಸಿಕ್ಕಿಸಿತು. ಚೀನಾದ ಲೀಹಂಗ್ ಚಾಂಗ್ ಯುದ್ಧದಲ್ಲಿ ಸೋಲಿಗೆ ಕಾರಣವೆಂದ ಪೀಕಿಂಗ್ ಸರ್ಕಾರ ಕೂಡ ಆಪಾದಿಸಿತು. ಲೀ ಸಂಧಾನ ನಡೆಸಿ, ಕೊನೆಗೆ ಜಪಾನಿನ ಎಲ್ಲ ಷರತ್ತುಗಳಿಗೆ ಒಪ್ಪಿ ಲೀ ಮತ್ತು ಜಪಾನಿನ ಇಟೋ ಷಿಮನೋಸೆಕಿ ಒಪ್ಪಂದಕ್ಕೆ ಸಹಿ ಹಾಕಿದರು. ಪರಿಣಾಮವಾಗಿ ಕೊರಿಯಾದ ಪೂರ್ಣ ಸ್ವಾತಂತ್ರ ಅಪಾರ ಯುದ್ಧ ನಷ್ಟ ಪರಿಹಾರ, ಚೀನಾ ಜಪಾನಿನೊಂದಿಗೆ ಹೊಸ ವ್ಯಾಪಾರ ಒಪ್ಪಂದ ಮತ್ತು ನಾಲ್ಕು ಹೊಸ ಬಂದರುಗಳನ್ನು ಚೀನಾ ಜಪಾನಿನ ಪ್ರವೇಶಕ್ಕೆ ನೀಡಿತು. ಆದರೆ ಬಹಳ ಮುಖ್ಯವಾದ ಕರಾರು, ಫಾರ್ಮೋಸಾ, ಪಸ್ಕೆಡೊರೆಸ್ ಮತ್ತು ಲಿಯೋಟುಂಗ್ ಪರ್ಯಾಯ ದ್ವೀಪಗಳನ್ನು ಜಪಾನ್ ಪಡೆಯಬೇಕಾಗಿದ್ದು, ತ್ರಿರಾಷ್ಟ್ರಗಳ ಮಧ್ಯಸ್ಥಿಕೆಯಿಂದಾಗಿ ಕೈ ತಪ್ಪಿತು.

ಯುದ್ಧದ ಪರಿಣಾಮವಾಗಿ ಜಪಾನ್ ಐರೋಪ್ಯ ಅಗ್ರ ರಾಷ್ಟ್ರಗಳ ಸಾಲಿಗೆ ಸೇರಿತು. ಐರೋಪ್ಯರಿಗೆ ಒಂದು ರೀತಿಯಾದ 'ಹಳದಿ ಗುಳಿಗೆ'ಯಾಗಿ ಪರಿಣಮಿಸಿತ್ತು, ಅಘಾರ ಯುದ್ಧ ನಷ್ಟ ಪರಿಹಾರ ಪಡೆದ ಜಪಾನ್ ಆರ್ಥಿಕವಾಗಿ ಹೆಚ್ಚಿನ ಸಾಧನೆ ಮಾಡಿ ಐರೋಪ್ಯರಂತೆ ತಾನೂ ಕೂಡ ಷಾಹಿ ನೀತಿಯನ್ನು ಪ್ರಾರಂಭಿಸಿತು. ಎಲ್ಲಕ್ಕಿಂತ ಹೆಚ್ಚಿನದಾಗಿ ಗ್ರೇಟ್ ಬ್ರಿಟನ್‌ಗೆ ನಂಬಿಕಸ್ಥ ಪೌರಾತ್ಯ ಸ್ನೇಹಿತ ರಾಷ್ಟ್ರವಾಗಿ ದೊರೆತಿದ್ದು 1902ರಲ್ಲಿ ಆಂಗ್ಲೋ ಜಪಾನೀ ವೃತ್ತಿ ಒಪ್ಪಂದಕ್ಕೆ ದಾರಿ ಮಾಡಿತು. ಇದಕ್ಕೆ ಪ್ರತಿಯಾಗಿ ಚೀನಾ ದುರ್ಬಲ ರಾಷ್ಟ್ರವಾಗಿ ಪರಿಣಮಿಸಿ, ಮಂಚೂ ಪ್ರಭುತ್ವ ದುರ್ಬಲಗೊಂಡು ಪ್ರಜಾ ಬೆಂಬಲ ಕಳೆದುಕೊಂಡಿತು. ಶತಮಾನದ ಕೊನೆಯ ವೇಳೆಗೆ ಬಾಕ್ಸರ್ ದಂಗೆ, ನಂತರ 1910ರ ಕ್ರಾಂತಿ ನೇರವಾಗಿ ಮಂಚೂ ಪ್ರಭುತ್ವವನ್ನು ಪತನಗೊಳಿಸಲು ದಾರಿ ಮಾಡಿಕೊಟ್ಟವು.

## 132.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

*I ಕೆಳಗಿನ ಪ್ರಶ್ನೆಗಳಿಗೆ ಆರು ಸಾಲುಗಳಲ್ಲಿ ಉತ್ತರಿಸಿ.*

a) ಕೊರಿಯಾದ ಸಂಪನ್ಮೂಲಗಳು

b) ಲೀ ಹಂಗ್ ಚಾಂಗ್

c) ಕೊರಿಯಾದಲ್ಲಿನ ಆಂತರಿಕ ಸಮಸ್ಯೆಗಳು

d) ಸನ್ಯಾಸಿ ರಾಜ್ಯ

*II ಕೆಳಗಿನವುಗಳಿಗೆ 20 ಸಾಲುಗಳಲ್ಲಿ ಉತ್ತರಿಸಿ.*

1) ಟಾಂಗ್ ಹಾಕ್ ದಂಗೆ

2) ಷಿಮನೋಸೆಕಿ ಒಪ್ಪಂದ

3) ತ್ರಿ ರಾಷ್ಟ್ರಗಳ ಮಧ್ಯಸ್ಥಿಕೆ

*III ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.*

1. 1894-95 ಚೀನಾ-ಜಪಾನ್ ಯುದ್ಧದ ಕಾರಣಗಳನ್ನು ವಿವರಿಸಿ.
2. 1894-95 ಚೀನಾ-ಜಪಾನ್ ಯುದ್ಧಕ್ಕೆ ಮುನ್ನ ಕೊರಿಯಾದ ಇತಿಹಾಸವನ್ನು ವಿವರಿಸಿ.
3. ಚೀನಾ-ಜಪಾನ್ ಯುದ್ಧದ ಪರಿಣಾಮಗಳನ್ನು ಕುರಿತು ಬರೆಯಿರಿ.

## 132.9 ಹೆಚ್ಚಿನ ಅಧ್ಯಯನಕ್ಕೆ ಆಕರಗಳು.


1. R.S. Gupt : History of Modern China
2. Clyde and Beers : The Far East.
3. K.S. Latourette : A Short History of Far East.

# ಘಟಕ - 133

## ನೂರು ದಿವಸಗಳ ಸುಧಾರಣೆ


133.0 ಧ್ಯೇಯೋದ್ದೇಶಗಳು

133.1 ಪೀಠಿಕೆ

133.2 ಸುಧಾರಣೆಗೆ ಕಾರಣಗಳು ಮತ್ತು ಹಿನ್ನೆಲೆ

133.3 ಚೀನಾದ ಆರ್ಥಿಕ ಸ್ಥಿತಿಯ ಮೇಲೆ ಚೀನಾ-ಜಪಾನ್ ಯುದ್ಧದ ಪರಿಣಾಮ

133.4 ಚೀನಾದ ರಾಜ್ಯ ದರ್ಬಾರ್‌ದಲ್ಲಿನ ರಾಜಕೀಯ ಕಲಹ ಮತ್ತು ಕಾಂಗ್ ಯು ವೈ ನ ಪಾತ್ರ

133.5 ಸುಧಾರಣೆಗೆ ಪ್ರೇರಣೆ ಮತ್ತು ಅವುಗಳ ಅವಶ್ಯಕತೆ

133.6 ಪ್ರಮುಖ ಸುಧಾರಣಾ ಚಳುವಳಿ ಸಲಹೆಗಳು

133.7 ಸುಧಾರಣಾ ಚಳುವಳಿಯ ಗತಿ ಮತ್ತು ಅದರ ವಿಫಲತೆ

133.8 ಒಟ್ಟಾರೆ ಸಾರಾಂಶ ನೀಡುವ ಬನ್ನಿ

133.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

133.10 ಹೆಚ್ಚಿನ ಅಧ್ಯಯನಕ್ಕೆ ಆಕರಗಳು

## 133.0 ಧ್ಯೇಯೋದ್ದೇಶಗಳು

ಈ ಯೂನಿಟ್‌ನಲ್ಲಿ ನೀವು ಅಧ್ಯಯನ ಮಾಡುವ ಮತ್ತು ಚರ್ಚಿಸುವ ವಿಷಯಗಳೆಂದರೆ ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಚೀನಾ ಮಾಡಿಕೊಂಡ ಅಸಮ ಒಪ್ಪಂದಗಳಿಂದಾಗಿ ಮಂಚು ಪ್ರಭುತ್ವ ದುರ್ಬಲವಾಗಿದ್ದು, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಅವರ ಹಿಡಿತದಲ್ಲಿತ್ತು. ಏಷ್ಯಾದಲ್ಲಿ ದೊಡ್ಡ ರಾಷ್ಟ್ರವಾದ ಚೀನಾ ಸಣ್ಣ ರಾಷ್ಟ್ರವಾದ ಜಪಾನಿಗೆ ಸೋತು ಅವಮಾನಕರ ಸ್ಥಿತಿಯಲ್ಲಿತ್ತು. ಆದಾಗ್ಯ ಚೀನೀ ಸಮಾಜದಲ್ಲಿನ ಪ್ರಗತಿ ಪರ ಚಿಂತಕರು ಮತ್ತು ಆಳುವ ಪ್ರಭುತ್ವ ಚೀನಾವನ್ನು ಸುರಕ್ಷಿತವಾಗಿ ಸುಭದ್ರತೆಯ ಅಸ್ತಿತ್ವಕ್ಕಾಗಿ ಸಾಧಿಸುವ ಪ್ರಯತ್ನದಲ್ಲಿತ್ತು. ನೀವು ಈ ಪಾಠವನ್ನು ಅಧ್ಯಯನ ಮಾಡಿದ ನಂತರ ತಿಳಿಯಬಹುದಾದ ವಿವರಗಳೆಂದರೆ

* ಸುಧಾರಣಾವಾದಿಗಳು ಮತ್ತು ಕ್ರಾಂತಿವಾದಿಗಳ ಕೂಟ
* ಪ್ರಗತಿಪರ ಚಿಂತರರ ವೈಚಾರಿಕತೆ ಮತ್ತು ಧೋರಣೆಗಳು
* ಮಂಚೂ ಪ್ರಭುತ್ವ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ನಡೆಸಿದ ಹವಣಿಕೆ
* ಚೀನಿ ರಾಜ್ಯ ದರ್ಬಾರದಲ್ಲಿ ರಾಜಕೀಯ ಸಂಘರ್ಷ
* ಸುಧಾರಣೆಗೆ ಪ್ರೇರಿತವಾದ ಅಂಶಗಳು
* ಚೀನೀ ಸಾಮ್ರಾಟನ ಚುನಾವಣಾ ಘೋಷಣೆ
* ಕಾಂಗ್ - ಯು - ವೈ ಮತ್ತು ಸನ್‌ಯಾತ್‌ಸೇನ್ ನಡುವಿನ ವಿಚಾರ ಭಿನ್ನತೆ
* ಪ್ರಮುಖ ಸುಧಾರಣಾ ಅಂಶಗಳು
* ಕಾಂಗ್ ಯು ವೈ ನ ಹನ್ನೆರಡು ವಿಭಾಗಗಳ ಆಡಳಿತಾತ್ಮಕ ಸುಧಾರಣೆ ಯತ್ನ
* ಸುಧಾರಣಾ ಕಾಲದಲ್ಲಿ ಸಂಪ್ರದಾಯ ವಾದಿಗಳ ಪಾತ್ರ
* ಚಕ್ರವರ್ತಿನಿ ದವಾಜರ್‌ತ್ಸುಷಿಯ ಪಾತ್ರ
* ಸುಧಾರಣಾವಾದಿಗಳು ಮತ್ತು ಸಂಪ್ರದಾಯವಾದಿಗಳ ನಡುವಿನ ಸಂಘರ್ಷ
* ಸುಧಾರಣಾ ಚಲುವಳಿಯ ವಿಫಲತೆ

## 133.1 ಪೀಠಿಕೆ

1898 ರ ಜೂನ್ 11 ರಿಂದ ಸೆಪ್ಟೆಂಬರ್ 16 ರವರೆಗಿನ ಕಾಲವು ಚೀನಾದ ಇತಿಹಾಸದಲ್ಲಿ ನೂರು ದಿವಸಗಳ ಸುಧಾರಣೆ ಕಾಲವೆಂದು ಕರೆಯಲಾಗಿದೆ. ಜಪಾನೀಯರ ಕೈಯಿಂದ ಚೀನಾ ಹೊಂದಿದ ಸೋಲು, ಆನಂತರದಲ್ಲಿ ವಿದೇಶೀಯರು ಚೀನಾದಲ್ಲಿ ಹಿತಾಸಕ್ತಿ ವಲಯಗಳನ್ನು ಹೊಂದಲು ನಡೆಸಿದ ಪೈಪೋಟಿ ಮೊದಲಾದವುಗಳು ಚೀನಿ ಬೌದ್ಧಿಕ ವರ್ಗವನ್ನು ಎಚ್ಚರಿಸಿದ್ದು ದೇಶದ ದುಃಸ್ಥಿತಿಗೆ ಕಾರಣಗಳನ್ನು ಹುಡುಕುವಂತೆ ಮಾಡಿತು. ಚೀನಿಯರ ಸಾಂಪ್ರದಾಯಿಕ ಸಂಸ್ಥೆಗಳಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಪಾಶ್ಚಾತ್ಯರ ಅಭಿಪ್ರಾಯಗಳನ್ನು ಮತ್ತು ಬೆಳವಣಿಗೆಗಳನ್ನು ಹೊಂದಿಸಿಕೊಳ್ಳದಿದ್ದರೆ ಚೀನಾಕ್ಕೆ ಉಳಿಗಾಲವಿಲ್ಲವೆಂದು ಈ ವಿಚಾರವಂತರು ಮನಗಂಡರು.

ಚೀನಾದಲ್ಲಿ ಇಂತಹ ಬದಲಾವಣೆಗಳನ್ನು ಬಯಸಿದ ವಿಚಾರವಂತರನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಅವರೆಂದರೆ ಸುಧಾರಣಾವಾದಿಗಳು ಮತ್ತು ಕ್ರಾಂತಿವಾದಿಗಳು ಮೊದಲಿಗೆ ಸುಧಾರಣಾವಾದಿಗಳು ಚೀನಾವನ್ನು ಪಾಶ್ಚಿಮಾತ್ಯ ಮಾದರಿಯಲ್ಲಿ ಬದಲಾಯಿಸಲು ಪ್ರಯತ್ನಿಸಿದರು. ಆದರೆ ಆ ಪ್ರಯತ್ನ ಸಫಲಪೂಂಗಲಿಲ್ಲ. ಅದಕ್ಕೆ ಕಾರಣ ಚೀನಾ ಆ ವೇಳೆಗಾಗಲೆ ಪಾಶ್ಚಿಮಾತ್ಯ ಹಿತಾಸಕ್ತಿಗೆ ಒಳಗಾಗಿದ್ದು, ಚೀನಾದ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅವು ಮುಂದಾಗಿದ್ದವು. 1895 ರಿಂದ 1898 ರವರೆಗೆ ನಡೆಸಿದ ಎಲ್ಲ ಪ್ರಯತ್ನಗಳಲ್ಲಿ ಚೀನಾ ಬಹುತೇಕ ಜಪಾನ್ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳ ಹಿಡಿತಕ್ಕೊಳಗಾಗಿ ಚೀನಿ ಪ್ರಭುತ್ವ ಅವರ ಕೈಗೊಂಬೆಯಾಗಿತ್ತು. ಕಾಂಗ್ -ಯು - ವೈ ಮತ್ತು ಡಾ. ಸನ್‌ಯಾತ್ ಸೇನ್‌ರವರು ಸುಧಾರಣಾವಾದಿ ಮತ್ತು ಕ್ರಾಂತಿವಾದಿ ಧೋರಣೆಗಳ ನಾಯಕರಾಗಿದ್ದು ಚೀನಾದಲ್ಲಿನ ಪರಿಸ್ಥಿತಿ ಸುಧಾರಣಾವಾದಿಗಳ ಪರವಾಗಿದ್ದು, ಕ್ರಾಂತಿಗಿಂತ ಸುಧಾರಣೆಯೇ ಲೇಸೆಂಬ

ಸ್ಥಿತಿಯಲ್ಲಿತ್ತು. ಕಾಂಗ್ ಯು ವೈ ನೇತೃತ್ವದಲ್ಲಿ ಸುಧಾರಣಾವಾದಿಗಳು ಬೆಂಬಲ ಪಡೆದು ಸಾಮ್ರಾಜ್ಯದ ಆಡಳಿತ ಚೌಕಟ್ಟಿನೊಳಗೆ ಚೀನಾವನ್ನು ಆಧುನೀಕರಣಗೊಳಿಸುವ ಯೋಜನೆಯೊಂದನ್ನು ಸೂಚಿಸಿದ್ದರು. ಈ ವಿಚಾರವಾದಿಗಳ ಗುಂಪು ಜಪಾನ್‌ನ್ನು ನಿರ್ದೇಶನವಾಗಿಟ್ಟುಕೊಂಡು ಚೀನಿಯರ ಮತ್ತು ಪಾಶ್ಚಾತ್ಯರ ಅಭಿಪ್ರಾಯಗಳ ಸಮ್ಮೇಳನಗಳಿಂದ ಕೂಡಿದ ಒಂದು ಆಧುನಿಕ ಸಮಾಜದ ನಿರ್ಮಾಣದ ಬಗ್ಗೆ ಆಳವಾದ ಆಲೋಚನೆ ಮಾಡತೊಡಗಿದ್ದರು. ಈ ಆಲೋಚನೆಗಳಿಗೆ ಕ್ರಾಂತಿವಾದಿಗಳು ವಿರೋಧವನ್ನು ವ್ಯಕ್ತಪಡಿಸಿದ್ದವು. ಕ್ರಾಂತಿವಾದಿಗಳು ಚೀನಾದ ಈ ದುಃಸ್ಥಿತಿಗೆ ಮಂಚೂ ಪ್ರಭುತ್ವವೇ ಕಾರಣವೆಂದು ವಾದಿಸಿದ್ದು ಬದಲಾವಣೆ ಕ್ರಾಂತಿಯಿಂದ ಮಾತ್ರವೆ ಸಾಧ್ಯವೆಂದು ನಂಬಿದ್ದರು. ಕ್ರಾಂತಿಕಾರರು ಮಂಚೂ ವಿರೋಧಿಗಳು ಮಾತ್ರವಲ್ಲದೆ ಸಂಪ್ರದಾಯ ವಿರೋಧಿಗಳು ಆಗಿದ್ದರು. ರಾಜಕೀಯವಾಗಿ ಇವರು ರಾಷ್ಟ್ರೀಯ ವಾದಿಗಳಾಗಿದ್ದು ಆದಷ್ಟು ಮಟ್ಟಿಗೆ ಚೀನೀ ಜನತೆಯ ಇಚ್ಛೆಗೆ ಅನುಗುಣವಾಗಿ ಸರ್ಕಾರದ ವ್ಯವಸ್ಥೆಯನ್ನು ಬದಲಾಯಿಸುವ ಹುನ್ನಾರದಲ್ಲಿದ್ದರು. ಹಾಗಾಗಿ 1895 ರಿಂದ 1898 ರ ನಡುವಿನ ಕಾಲವು ಸುಧಾರಣಾವಾದಿಗಳು ಮತ್ತು ಕ್ರಾಂತಿಕಾರರ ನಡುವಿನ ಘರ್ಷಣೆಯ ಕಾಲವಾಗಿದ್ದು, ಸಂಪ್ರದಾಯವಾದಿಗಳು ಚೀನಿ ಪ್ರಭುತ್ವವನ್ನು ಬೆಂಬಲಿಸಿ, ಸುಧಾರಣೆಗಳ ಮೂಲಕ ಚೀನಾವನ್ನು ಆಧುನೀಕರಣಗೊಳಿಸುವತ್ತ ಮುನ್ನಡೆದು ಸೋತರು.

## 133.2 ಸುಧಾರಣೆಯ ಕಾರಣಗಳು ಮತ್ತು ಹಿನ್ನಲೆ

1862 ರಿಂದ 1894-95 ರವರೆಗಿನ ಕಾಲದಲ್ಲಿ ಚೀನಾ ಪಾಶ್ಚಿಮಾತ್ಯರೊಡನೆ ವ್ಯಾಪಾರಿ ಒಪ್ಪಂದಗಳು ಹಿತಾಸಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಲೆ ಸ್ವಯಂ ಪ್ರಬಲತೆಗಾಗಿ ಪ್ರಯತ್ನಿಸಿತ್ತು. ಪಾಶ್ಚಿಮಾತ್ಯರ ಸಂಪರ್ಕದಿಂದಾಗಿ ಐರೋಪ್ಯ ರಾಷ್ಟ್ರಗಳಲ್ಲಿ ಸೈನಿಕ ತಾಂತ್ರಿಕತೆ ಕೈಗಾರಿಕಾ ಬೆಳವಣಿಗೆ ಮತ್ತು ರಾಜಕೀಯ ಉದಾರವಾದಗಳ ಪರಿಚಯವಾಗಿದ್ದು, ಚೀನಾ ಕೂಡ ಆ ನಿಟ್ಟಿನಲ್ಲಿ ಆಲೋಚಿಸಬೇಕಾದ ಅವಶ್ಯಕತೆಯಿದ್ದಿತು. ಚೀನಿ ಆಡಳಿತದಲ್ಲಿ ವಳಗಿದ್ದ ಹಲವು ಪ್ರಗತಿಪರ ಚಿಂತಕರು ಮತ್ತು ಆಡಳಿತಗಾರರು ಚೀನಿ ಪ್ರಭುತ್ವದ ಸಫಲತೆಗಾಗಿ ವಾದಿಸಿದ್ದರು. ಅದರಲ್ಲೂ ಮುಖ್ಯವಾಗಿ ಫೆಂಗ್ ತ್ಸೋ ಫೆನ್ ನಂತಹ ಪ್ರಗತಿಪರ ಚಿಂತಕರು ಚೀನಾ ತನ್ನ ಏಕಾಂತತೆಯನ್ನು ಕೊನೆಗೊಳಿಸಿ ಐರೋಪ್ಯರಂತೆ ಆಧುನೀಕರಣಗೊಳ್ಳುವುದು ಒಳಿತೆಂದು ವಾದಿಸಿದ್ದರು. ಪಾಶ್ಚಿಮಾತ್ಯರ ಮಾದರಿಯಲ್ಲಿ ಸರ್ಕಾರ ವ್ಯವಸ್ಥೆಯನ್ನು ಮತ್ತು ವಿದ್ಯಾಭ್ಯಾಸ ಪದ್ಧತಿಯನ್ನು ಬೆಳೆಸಬೇಕೆಂದು ಮಂಚೂ ಪ್ರಭುತ್ವವನ್ನು ಒತ್ತಾಯಿಸಿದ್ದರು. 1885 ರ ಚೀನಾ ಮತ್ತು ಫ್ರಾನ್ಸ್ ನಡುವಿನ ಯುದ್ಧದಲ್ಲಿ ಚೀನಾ ಸೋತಿದ್ದು, ಚೀನಾದ ವಿದ್ವಾಂಸ ಹಾಗೂ ವಿಚಾರವಂತ ಆಡಳಿತಗಾರರು, ಸ್ವಯಂ ಪ್ರಭುತ್ವದ ಸಫಲತೆಗಾಗಿ ಹೋರಾಟವನ್ನು ಪ್ರಾರಂಭಿಸಿದ್ದರು. ಅಲ್ಲದೆ ಪ್ರಭುತ್ವ ಸಫಲತೆಯನ್ನು ಕಾಪಾಡಿಕೊಳ್ಳದಿದ್ದರೆ ಚೀನಾ ವಿದೇಶಿಯರ ಪಾಲಾಗುತ್ತದೆಂದು ಅವರು ನಂಬಿದ್ದರು. ವೆಂಗ್ ತುಂಗ್ ಉಪಧ್ಯಾಯನಾಗಿದ್ದು, ಹೊ ಒಬ್ಬ ಪ್ರಭುತ್ವ ಷಾಹಿ ಪ್ರಭುತ್ವದ ಏಳಿಗೆಗೆ ಮಂಚೂಗಳು ವಿದೇಶಿಯರ ವಿರುದ್ಧ ಹೋರಾಟ ನಡೆಸಬೇಕೆಂದು ಒತ್ತಾಯಿಸಿದ್ದನು ಮತ್ತು 1894 ರಲ್ಲಿ ಜಪಾನಿನೊಡನೆ ಯುದ್ಧಕ್ಕೆ ಸಲಹೆ ಮಾಡಿದ್ದನು. ಆದರೆ ಚೀನೀ ಜಪಾನ್ ಯುದ್ಧದಲ್ಲಿ ಚೀನಾ ಸೋತಾಗ ತನ್ನ ಆಲೋಚನೆಗಳನ್ನು ಬದಲಾಯಿಸಿಕೊಂಡನು ಮತ್ತು ಸುಧಾರಣೆ ಹಾಗೂ ಬದಲಾವಣೆಗಳು ಪ್ರಭುತ್ವ ಸಲಗೆಗಿಂತ ಮುಖ್ಯವೆಂದು ತೀರ್ಮಾನಿಸಿದರು.

ಪಾಶ್ಚಿಮಾತ್ಯರು ಮತ್ತು ಅಮೆರಿಕಾದ ಕ್ರೈಸ್ತ ಧರ್ಮ ಪಂಥೀಯರು ಧರ್ಮ ಪ್ರಸರಣಾ ಕಾರ್ಯಗಳ ಜೊತೆಯಲ್ಲಿಯೇ ಚೀನಿಯರಿಗೆ ಪಾಶ್ಚಾತ್ಯರ ಜ್ಞಾನ ಮತ್ತು ವಿಚಾರವಾದಗಳನ್ನು ಮತ್ತು ಸಂಸ್ಕೃತಿಯ ಅರಿವನ್ನು ಬೆಳೆಯಿಸಿದ್ದು ಪಾಶ್ಚಿಮಾತ್ಯ ಮಾದರಿಯಲ್ಲಿ ಶಾಲಾ ಕಾಲೇಜುಗಳನ್ನು, ಗ್ರಂಥಾಲಯಗಳನ್ನು, ವೃತ್ತಪತ್ರಿಕೆಗಳು ಮತ್ತು ದಿನಪತ್ರಿಕೆಗಳನ್ನು ಚೀನಾದಲ್ಲಿ ಮುದ್ರಿಸಿ ಜನತೆಗೆ ಒದಗಿಸಿದ್ದರು. ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಭಾಷಣಗಳನ್ನು ಮಾಡಿ ಚೀನಿ ಯುವ ಜನರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಅರಿವು ಮತ್ತು ಅವರ ವಿಚಾರವಾದಗಳನ್ನು ಬೆಳೆಯಿಸಿದ್ದರು. ಚೀನಾದಲ್ಲಿ 16,000 ಕ್ಕೆ ಹೆಚ್ಚು ದೇಶೀಯ ವಿದ್ಯಾರ್ಥಿಗಳು ಪಾಶ್ಚಾತ್ಯ ಜ್ಞಾನ ಮತ್ತು ವಿಚಾರಗಳನ್ನು ಗಳಿಸಿದ್ದು ಚೀನಿಯ ಸುಧಾರಣಾವಾದಿಗಳು ಪಾಶ್ಚಾತ್ಯ ಶಿಕ್ಷಣದ ನೆಲೆಯಲ್ಲಿಯೆ ತಮ್ಮ ವಿಚಾರವಾದಗಳನ್ನು ಬೆಳೆಯಿಸಿಕೊಂಡು, ಪ್ರಭುತ್ವದಡಿಯಲ್ಲಿ ಸುಧಾರಣೆಗಳನ್ನು ತರಲು ಅವರು ಮುಂದಾಗಿದ್ದರು. ಕ್ರೈಸ್ತ ಧರ್ಮ ಪಂಥೀಯರು ಮತ್ತು ಪಾದ್ರಿಗಳು ಚೀನಿ ಯುವ ವಿದ್ಯಾರ್ಥಿಗಳೊಡನೆ ಚರ್ಚಿಸಿ ವಿದ್ಯಾಭ್ಯಾಸ ಬೆಳವಣಿಗೆ ಮತ್ತು ಸುಧಾರಣಾ ಯತ್ನಗಳು ಚೀನಾದ ಬೆಳವಣಿಗೆಗೆ ಸಹಾಯಕವೆಂದು ನಂಬುವಂತೆ ಮಾಡಿದ್ದರು. ವಿದೇಶಿ ಮತ್ತು ಕ್ರೈಸ್ತ ಪಾದ್ರಿಗಳ ಪ್ರಭಾವ ಹೊಂದಿದ ಬಹುತೇಕ ಚೀನಿ ಅಕ್ಷರವಂತರು ಮತ್ತು ಬುದ್ಧಿಜೀವಿಗಳು 1898 ರಲ್ಲಿ ಸುಧಾರಣೆಗಳು ಮಾತ್ರವೆ ಚೀನಾವನ್ನು ದುಃಸ್ಥಿತಿಯಿಂದ ಪಾರು ಮಾಡಲು ಸಾಧ್ಯವೆಂದು ನಂಬಿದ್ದರು ಮತ್ತು ವಾದಿಸಿದ್ದರು.

ಒಪ್ಪಂದ ಬಂದರುಗಳು ಮತ್ತು ನಗರಗಳಲ್ಲಿ ವಾಸವಾಗಿದ್ದ ಚೀನಿ ಜನತೆ ಪಾಶ್ಚಾತ್ಯರ ಸಂಪರ್ಕದಿಂದಾಗಿ ಸಾಮಾಜಿಕ ಮತ್ತು ರಾಜಕೀಯ ವಿಚಾರವಾದಗಳಿಂದ ಪ್ರಭಾವಿತರಾಗಿದ್ದು, ಹೆಚ್ಚು ಮಟ್ಟಕ್ಕೆ ಬುದ್ಧಿಜೀವಿಗಳು ನೇರವಾಗಿ ಪಾಶ್ಚಾತ್ಯರ ರಾಜಕೀಯ ವಿಚಾರ ಮತ್ತು ಸಂಸ್ಥೆಗಳನ್ನು ಅರ್ಥಮಾಡಿಕೊಂಡಿದ್ದರು. ಹಾಗಾಗಿ ಚೀನಾದಾದ್ಯಂತ ಸಾಂಸ್ಕೃತಿಕ ಸುಧಾರಣೆಗಳ ಮೂಲಕ ಆಧುನಿಕತೆ ಸಾಧ್ಯವೆಂದು ಅವರು ವಾದಿಸತೊಡಗಿದರು. ಹಾಗಾಗಿ ಸಾರಿಗೆ ಸಂವಹನ ವಿಧಾನಗಳು ಅವರನ್ನು ಹೆಚ್ಚಿನ ಮಟ್ಟಕ್ಕೆ ಪ್ರೇರೇಪಿಸಿದವು. ಅಲ್ಲದೆ ಹೊರಗೆ ಅನುಭವ ಪಡೆದು ಹಿಂದಿರುಗಿದ ಚೀನಿ ಶ್ರಮಿಕ ವರ್ಗ ಕೂಡ ಚೀನಾದಲ್ಲಿ ಸುಧಾರಣೆಗಳ ಮೂಲಕ ಸುಭದ್ರ ಚೀನಾ

ಪ್ರಭುತ್ವವನ್ನು ಕಾಣತೊಡಗಿದರು. ಒಪಿಯಂ ಕದನಗಳು ಮತ್ತು ಅಸಮ ಒಪ್ಪಂದಗಳಿಂದ ಅವಮಾನಿತರಾಗಿದ್ದ ಚೀನಿಯರು ರಾಷ್ಟ್ರೀಯ ಮಟ್ಟದಲ್ಲಿ ಐಕ್ಯತೆಯ ಅವಶ್ಯಕತೆಯನ್ನು ಪರಿಗಣಿಸಿ ಉಳಿಸಿಕೊಳ್ಳುವ ಉದ್ದೇಶದಿಂದ ಯಾವುದೇ ರೀತಿಯಾದ ಪರ್ಯಾಯ ಪ್ರಯತ್ನಕ್ಕೂ ಸಿದ್ಧರಾಗಿದ್ದರು. ಹಾಗಾಗಿ ಈ ಯುವ ಬುದ್ಧಿ ಜೀವಿಗಳ ವರ್ಗ ಪ್ರಗತಿ ಪರ ಚಿಂತನೆಗಳಲ್ಲಿ ತೊಡಗಿದ್ದು, ರಾಜಕೀಯ ಶಕ್ತಿಯಾಗಿಯೂ ಕೂಡ ಹೊರ ಹೊಮ್ಮಿತು.

## 133.3 ಚೀನಾ-ಜಪಾನ್ ಯುದ್ಧದ ಪರಿಣಾಮಗಳು

ಸಂಪ್ರದಾಯಕ ವಿಚಾರವಾದಿಗಳು ಮತ್ತು ಪ್ರಗತಿಪರ ಚಿಂತಕರು ಆಗಿದ್ದು ಸುಧಾರಣಾವಾದಿಗಳು ಚೀನಾದ ಐಕ್ಯತೆಯನ್ನು ಗಂಭೀರವಾಗಿ ಪರಿಗಣಿಸಿ ಚೀನಿ ಪ್ರಭುತ್ವ ಮತ್ತು ಐಕ್ಯತೆಗಾಗಿ ಯುದ್ಧವನ್ನು ಕೂಡ ಬೆಂಬಲಿಸಿದ್ದವು. ಕೊರಿಯಾದ ದೇಶೀಯದ ದಂಗೆ ಚೀನಿ ಸೈನ್ಯದ ಸಹಾಯ ಮತ್ತು ಜಪಾನಿಯರ ಹಿತಾಸಕ್ತಿ ಚೀನಾವನ್ನು ಯುದ್ಧಕ್ಕೆ ನೂಕಿದ್ದು, ಯುದ್ಧದ ಮೂಲಕ ಚೀನಾದ ಪ್ರಭುತ್ವ ಪ್ರಬಲವಾಗುವಂತೆ ತಿಳಿದಿದ್ದರು. ಆದರೆ ಯುದ್ಧದಲ್ಲಿ ಚೀನಾ ಸೋತ ನಂತರ ಚೀನಿ ಬುದ್ಧಿ ಜೀವಿಗಳು ಮತ್ತು ಆಡಳಿತಗಾರರು ಮೂಲಭೂತವಾದ ಸುಧಾರಣೆಗಳು ಅವಶ್ಯಕವೆಂಬ ತೀರ್ಮಾನಕ್ಕೆ ಬಂದರು ಯುದ್ಧ ಮತ್ತು ಷಿಮನೋಸೆಕಿ ಒಪ್ಪಂದದ ಕರಾರುಗಳು ಚೀನಿ ಯುವಜನತೆಯಲ್ಲಿ ಸಾರ್ವಜನಿಕವಾಗಿ ಸಿಟ್ಟನ್ನು ಮತ್ತು ರಾಷ್ಟ್ರೀಯ ನಿಲುವನ್ನು ಹುಟ್ಟುಹಾಕಿದ್ದು ಸುಮಾರು 600 ಕ್ಕೂ ಹೆಚ್ಚು ಚೀನೀಯರು 10,000 ಪದಗಳ ಸ್ಮರಣ ಪತ್ರಗಳನ್ನು ಸಹಿ ಮಾಡಿ ಹಂಚಿದರು. ಅವರು ಷಿಮನೋಸೆಕಿ ಒಪ್ಪಂದವನ್ನು ಪ್ರತಿಭಟಿಸಿ ಚೀನಾ ಸರ್ಕಾರ ಅದನ್ನು ಒಪ್ಪಕೂಡದೆಂದು ಒತ್ತಾಯಿಸಿದರು ಮತ್ತು ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಯಲ್ಲಿ ತರುವಂತೆ ಆಗ್ರಹಿಸಿದ್ದರು. ಕಾಂಗ್ ಯು ವೈ ಮತ್ತಿತರ ಯುವ ನಾಯಕರುಗಳು ಅಧಿಕಾರಿ ವರ್ಗದ ಮತ್ತು ಸಾಂಪ್ರದಾಯದ ಪ್ರಭುತ್ವದ ತಡೆಯಿದ್ದರೂ ಕೂಡ, ಅದನ್ನು ಕಡೆಗಣಿಸಿ ರಾಜಕೀಯ ಸಂಘಟನೆಯನ್ನು ಸ್ಥಾಪಿಸಲು ಮುಂದಾದರು. ಯುವ ಚೀನೀ ವಿದ್ವಾಂಸರುಗಳು ಷೋ-ಹೊಮಿ ಅಥವಾ ಅಧ್ಯಯನ ಸಂಘವನ್ನು ಸ್ಥಾಪಿಸಿ ಸಂಘದ ಸ್ಥಾಪನೆ ಚೀನೀ ರಾಷ್ಟ್ರವನ್ನು ಪಾಶ್ಚಿಮಾತ್ಯರಿಂದ ಪಾರುಮಾಡುವುದೆ ಅದರ ಉದ್ದೇಶವೆಂದು ಸಾರಿದ್ದರು. 1895 ರ ನಂತರದಲ್ಲಿ ಈ ವಿಚಾರವಾದಿಗಳು ದೇಶಾಭಿಮಾನವನ್ನು ಮತ್ತು ರಾಷ್ಟ್ರಾಭಿಮಾನವನ್ನು ಜನರಲ್ಲಿ ಮೂಡಿಸಿ, ಜನ ಜಾಗೃತಿಗೆ ಕಾರಣವಾದರು. ಅವರು ಸ್ಥಾಪಿಸಿದ ಅಧ್ಯಯನ ಸಂಘ ಪ್ರಾಂತ್ಯಗಳ ಮಟ್ಟದಲ್ಲಿ ಶಾಖೆಗಳನ್ನು ಪ್ರಾರಂಭಿಸಿ ಪ್ರಜೆಗಳಲ್ಲಿ ಜಾಗೃತಿ ಮೂಡಿಸಲು ನೆರವಾದುವು. ಈ ಸಂಘಗಳು ಪ್ರಮುಖವಾಗಿ ನಾಲ್ಕು ಉದ್ದೇಶಗಳನ್ನು ಹೊಂದಿದ್ದವು. ಅವುಗಳೆಂದರೆ:

1) ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸಂಘ ಸಂಸ್ಥೆಗಳನ್ನು ಸುಧಾರಣೆ ಮಾಡಬೇಕೆಂದು ಚೀನಾ ಸರ್ಕಾರವನ್ನು ಒತ್ತಾಯಿಸಿದವು.

2) ಪ್ರಾಂತಗಳಲ್ಲಿ ಸುಧಾರಣೆಗಳನ್ನು ಜಾರಿಯಲ್ಲಿ ತರುವುದು.

3) ಪಾಶ್ಚಾತ್ಯ ಮತ್ತು ಜಪಾನೀಯರ ಬರವಣಿಗೆಗಳನ್ನು ಚೀನೀ ಭಾಷೆಗೆ ಭಾಷಾಂತರಿಸಿ ಜನಪ್ರಿಯಗೊಳಿಸುವುದು ಮತ್ತು ದಿನಪತ್ರಿಕೆಗಳನ್ನು ಪ್ರಕಟಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು ಮತ್ತು

4) ವಿದೇಶಿ ಧರ್ಮವಾದ ಕ್ರೈಸ್ತ ಧರ್ಮದ ವಿರುದ್ಧ ಹೋರಾಟ ನಡೆಸಿ ಕನ್ಫೂಶಿಯಾನಿಸಂನ್ನು ರಾಷ್ಟ್ರ ಧರ್ಮವನ್ನಾಗಿ ಬೆಳೆಸುವುದು.

ಮೇಲಿನ ಪ್ರಮುಖ ಉದ್ದೇಶಗಳು ಚೀನಿ ಸಮಾಜವನ್ನು ಸುಧಾರಿಸುವುದರ ಮೂಲಕ ಸಾಮಾಜಿಕ ಪ್ರಗತಿಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದ್ದವು. ಆ ಮೂಲಕ ಕ್ರೈಸ್ತ ಧರ್ಮದ ಸಮಾಜ ಕಲ್ಯಾಣ ಕ್ರಮಗಳ ಜೊತೆಯಲ್ಲಿ ಸ್ಪರ್ಧಿಸಿ, ದೇಶೀಯ ಮಟ್ಟದ ಸುಧಾರಣೆಗಳ ಮೂಲಕ ಪ್ರಗತಿ ಪರ ಸಮಾಜವನ್ನು ಸಾಧಿಸುವ ಉದ್ದೇಶವನ್ನು ಹೊಂದಿದ್ದರು. ಬಹಳಷ್ಟು ಸಂಘಗಳು ಅಧಿಕಾರಿ ವರ್ಗದ ಬೆಂಬಲ ಪಡೆದು ಸುಧಾರಣಾ ಚಳುವಳಿಯನ್ನು ಪ್ರಾರಂಭಿಸಲು ಸಿದ್ಧವಾಗಿದ್ದವು. ಹಾಗಾಗಿ ಚೀನಿ ಜಪಾನೀಯ ಯುದ್ಧದಲ್ಲಿನ ಸೋಲು ಚೀನಿ ಯುವ ಜನತೆಯಲ್ಲಿ ರಾಷ್ಟ್ರೀಯ ಭಾವನೆಯನ್ನು ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಬೆಳೆಯಿಸಿಕೊಳ್ಳಲು ಪ್ರೇರೇಪಿಸಿದ್ದವು.

## 133.4 ಚೀನಾದ ರಾಜ್ಯ ದರ್ಬಾರದಲ್ಲಿನ ರಾಜಕೀಯ ಕಲಹ ಮತ್ತು ಕಾಂಗ್ ಯು ವೈ ನ ಪಾತ್ರ

ಯುದ್ಧದ ಪರಿಣಾಮವಾಗಿ ಜಪಾನೀಯರು ಕೊರಿಯಾದಲ್ಲಿ ಹಿತಾಸಕ್ತಿ ಬೆಳೆಯಿಸಿಕೊಂಡಿದ್ದು ಕೊರಿಯಾದ ಸ್ವತಂತ್ರ ಅಸ್ತಿತ್ವವನ್ನು ಒಪ್ಪಿಕೊಂಡ ಚೀನಾ ತನ್ನದೆ ಆದ ಪ್ರಾದೇಶಿಕ ಪ್ರಭುತ್ವವಾದ ಕೊರಿಯಾವನ್ನು ತತ್ಕ್ಷಣ ಕಳೆದುಕೊಂಡಿತು. ಅಲ್ಲಿಗೆ ಜಪಾನ್ ಲಿಯೋತುಂಗ್ ಪರ್ಯಾಯ ದ್ವೀಪದ ಮೇಲೆ ಅಧಿಕಾರ ನಡೆಸಲು ಹವಣಿಸಿದ್ದು, ರಷ್ಯಾವನ್ನು ಒಳಗೊಂಡು ತ್ರಿರಾಷ್ಟ್ರಗಳ ಮಧ್ಯ ಪ್ರವೇಶದಿಂದಾಗಿ ತಪ್ಪಿಸಿಕೊಂಡಿತ್ತು ಮತ್ತು ಜರ್ಮನಿ ಕಿಯಾಚೌನಲ್ಲಿ ತನ್ನ ಹಿಡಿತ ಸಾಧಿಸಿದ್ದು. ಸ್ವಾಭಾವಿಕವಾಗಿ ಈ ಘಟನೆಗಳು ಚೀನಿ ಪ್ರಭುತ್ವವನ್ನು ಧೃತಿಗೆಡಿಸಿದ್ದವು ಮತ್ತು ಚೀನೀ ಯುವ ಜನತೆ ಸರ್ಕಾರವನ್ನು ಉಗ್ರವಾಗಿ ಟೀಕಿಸಲು ಪ್ರಾರಂಭಿಸಿತು. ಈ ಮಧ್ಯ

ಅರಮನೆಯ ವಾತಾವರಣದಲ್ಲಿ ರಾಜಕೀಯ ಕಲಹವು ಕೂಡ ಪ್ರಾರಂಭವಾಗಿತ್ತು. ಅಂದರೆ ರಾಜಕುಮಾರನಾದ ಕ್ವಾಂಗ್ ಸು ಮತ್ತು ಅವಳ ಚಿಕ್ಕಮ್ಮ ಹಾಗೂ ರೀಜೆಂಟ್ ಆಗಿದ್ದು ಚಕ್ರವರ್ತಿನಿ ದವಾಜರ್ ತುಷ್ಷಿಯರ ನಡುವೆ ಅಧಿಕಾರ ಮತ್ತು ಆಡಳಿತ ನೀತಿಯ ಹಿನ್ನೆಲೆಯಲ್ಲಿ ಘರ್ಷಣೆಗಳು ಪ್ರಾರಂಭವಾಗಿದ್ದವು. ಮೊದಲಿಗೆ ಉತ್ತರದ ಸಂಪ್ರದಾಯವಾದಿಗಳು ಗುಂಪು ಸಾಮ್ರಾಟನನ್ನು ಬೆಂಬಲಿಸಿದ್ದು, ನಿಜವಾದ ಅಧಿಕಾರವನ್ನು ತನ್ನ ಮುಷ್ಠಿಯಲ್ಲಿ ಬಿಗಿ ಹಿಡಿದಿದ್ದು ಚಕ್ರವರ್ತಿನಿ ತುಷ್ಷಿಯು ಸಂಪ್ರದಾಯವಾದಿಗಳನ್ನು ಶಿಕ್ಷಿಸಲು ಮುಂದಾದಳು. ಆದಾಗ್ಯೂ ಎರಡು ಬಣಗಳು ಕೂಡ ಪರಿಸ್ಥಿತಿಯ ಒತ್ತಡದಲ್ಲಿ ಸುಧಾರಣೆಗಳನ್ನು ತರಲು ಬಯಸಿದ್ದರೂ ಕೂಡು ಬಣಗಳ ನಾಯಕರು ಮತ್ತು ಅವರ ವಿಚಾರವಾದಗಳು ಸ್ವಲ್ಪ ಮಟ್ಟಿಗೆ ಭಿನ್ನವಾಗಿದ್ದು ಉತ್ತರದ ನಾಯಕರಾದ ಸೋ ತುಂಗ್ ಮತ್ತು ಚಾಂಗ್ ಚೀ ತುಂಗ್ ಸಾಮ್ರಾಟನನ್ನು ಬೆಂಬಲಿಸಿ ಪೀಕಿಂಗ್‌ನಲ್ಲಿ ಚಳುವಳಿಯನ್ನು ಪ್ರಾರಂಭಿಸಿದ್ದರು. ಅದೇ ಸಮಯದಲ್ಲಿ ದಕ್ಷಿಣದ ಬಣ ಹಲವಾರು ಸುಧಾರಣಾವಾದಿಗಳನ್ನು ಹೊಂದಿದ್ದು, ಯುವ ಚಿಂತಕರಾದ ಕಾಂಗ್ ಯು ವೈ ಮತ್ತು ಅವನ ಸಂಗಡಿಗರು ಕ್ಷಿಪ್ರವಾಗಿ ಹಿಡಿತ ಸಾಧಿಸುವಲ್ಲಿ ಸಫಲವಾದರು. ಮೊದಲಿಗೆ ಉತ್ತರದ ಗುಂಪಿನ ವಿರುದ್ಧವಾಗಿ ದಕ್ಷಿಣದವರು ಚಳುವಳಿ ಪ್ರಾರಂಭಿಸಿದರು ನಂತರದಲ್ಲಿ ದಕ್ಷಿಣದ ಬಣ ಸಾಮ್ರಾಟ ಕ್ವಾಂಗ್ ಸುಗೆ ಹತ್ತಿರವಾದರು.

ಕಾಂಗ್ ವೈ ಕ್ವಾಂಗ್ ಟುಂಗ್ ಪ್ರಾಂತ್ಯದ ನಾನ್ ಹೈ ಜಿಲ್ಲೆಯ ಕುಟುಂಬವೊಂದರಲ್ಲಿ 1858 ರಲ್ಲಿ ಜನಿಸಿದ್ದು, ಕನ್‌ಫ್ಯೂಷಿಯಸ್ ಸಿದ್ಧಾಂತವನ್ನು ಆಳವಾಗಿ ಅಧ್ಯಯನ ಮಾಡಿ ನಂತರ 1894 ರಲ್ಲಿ ಪ್ರಾಂತೀಯ ಮಟ್ಟದಲ್ಲಿ ನಡೆಸುತ್ತಿದ್ದ ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಹೆಚ್ಚಿನ ಮಟ್ಟದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಪೀಕಿಂಗ್‌ಗೆ ಅವನು ಪ್ರಯಾಣ ಬೆಳೆಸಿದನು ಮತ್ತು ಈ ಮಧ್ಯೆ ಪಾಶ್ಚಾತ್ಯರ ಬಗ್ಗೆ ಅರಿವು ಬೆಳೆಸಿಕೊಂಡ ಕಾಂಗ್ ಚೀನಿ ಭಾಷೆಗೆ ಭಾಷಾಂತರಗೊಂಡ ಪಾಶ್ಚಾತ್ಯ ಗ್ರಂಥಗಳನ್ನು ಅಧ್ಯಯನ ಮಾಡಿದನು. ಪೀಕಿಂಗ್‌ನಲ್ಲಿ ತನ್ನ ಪರೀಕ್ಷೆ ಬರೆಯಲು ಬಂದಿದ್ದ ಸಂದರ್ಭದಲ್ಲಿ ಷಿಮನೋಸಕಿ ಒಪ್ಪಂದವಾಗಿದ್ದು, ಒಪ್ಪಂದದ ಷರತ್ತುಗಳ ಬಗ್ಗೆ ತೀಕ್ಷ್ಣವಾಗಿ ಟೀಕಿಸಿದ್ದ ಕಾಂಗ್ ಸುಧಾರಣಾ ಪಕ್ಷಗಳಿಗೆ ಹತ್ತಿರವಾದನು. ಒಪ್ಪಂದವನ್ನು ಸೂಚಿಸುವುದಕ್ಕೆ ಸುಧಾರಣಾವಾದಿಗಳು ಕಾಂಗ್‌ನನ್ನು ನಾಯಕನನ್ನಾಗಿ ಮಾಡಿಕೊಂಡರು. ಕಾಂಗ್ ಯು ವೈ ಸುಮಾರು 1,000 ಕ್ಕಿಂತಲೂ ಹೆಚ್ಚಿನ ಕಿರಿಯ ವಿದ್ವಾಂಸರುಗಳು ಸಹಿ ಮಾಡಿದ್ದ ಭಿನ್ನವತ್ತಳೆ ಪತ್ರವನ್ನು ಸಾಮ್ರಾಟ್ ಕುವಾಂಗ್ ಸು ಗೆ 1895 ರ ಡಿಸೆಂಬರ್‌ನಲ್ಲಿ ಒಪ್ಪಿಸಿ ಚೀನಾವನ್ನು ಆಧುನೀಕರಣಗೊಳಿಸಲು ಸಾಮ್ರಾಟನು ಮುಂದಾಳತ್ವವನ್ನು ವಹಿಸಬೇಕೆಂದು ಒತ್ತಾಯಿಸಿದನು. ಭಿನ್ನವತ್ತಳೆಯಲ್ಲಿ ಜನತೆಯಿಂದ ಆರಿಸಲ್ಪಟ್ಟ ಸಲಹಾ ಮಂಡಲಿಯನ್ನು ಸ್ಥಾಪಿಸಬೇಕೆಂದು ಮತ್ತು ಪಾಶ್ಚಾತ್ಯ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರಬೇಕೆಂದು ವಾದಿಸಿದನು. ಚಕ್ರವರ್ತಿಯ ಆಸ್ಥಾನದಲ್ಲಿದ್ದ ಹಿರಿಯ ಅಧಿಕಾರಿಗಳು ಭಿನ್ನವತ್ತಳೆಯನ್ನು ತಳ್ಳಿ ಹಾಕಿದರು. ಆದಾಗ್ಯೂ ಕಾಂಗ್ ನಿರಾಸೆಗೊಳ್ಳದೆ ಬೆಂಬಲ ಪಡೆಯಲು ಸಂಘಗಳನ್ನು ಸ್ಥಾಪಿಸಿ ಸುಧಾರಣೆಗಳ ಬಗ್ಗೆ ಲೇಖನಗಳನ್ನು ಬರೆಸಿ ನಿಯತ ಕಾಲಿಕೆಗಳನ್ನು ಹೊರಡಿಸಿದನು. ಪತ್ರಿಕಾ ವರದಿಗಳನ್ನು ಮತ್ತು ನಿಯತಕಾಲಿಕೆಯ ಬರವಣಿಗೆಗಳನ್ನು ಸಂಪ್ರದಾಯವಾದಿಗಳು ತೀವ್ರವಾಗಿ ವಿರೋಧಿಸತೊಡಗಿದರು. ಸಂಪ್ರದಾಯವಾದಿಗಳು ಸುಧಾರಣಾ ಕ್ಲಬ್‌ಗಳನ್ನು ಮತ್ತು ನಿಯತಕಾಲಿಕೆಗಳನ್ನು ರದ್ದುಗೊಳಿಸಬೇಕೆಂದು ಸಾಮ್ರಾಟನನ್ನು ಒತ್ತಾಯಿಸಿದರು. ಆದರೆ ಹುನಾನ್ ಪ್ರಾಂತದ ವೈಸರಾಯ್ ಆಗಿದ್ದ ಚಾಂಗ್-ಚಿ-ತುಂಗ್ ಮತ್ತು ಗೌರ್ನರ್ ಚೇನ್ ಸುಧಾರಣೆಗಳ ಬಗ್ಗೆ ಆಸಕ್ತಿ ಹೊಂದಿದ್ದು, ಎಲ್ಲರ ಜೊತೆಗೂಡಿ "ಅಕಾಡೆಮಿ ಆಫ್ ಕರೆಂಟ್ ಅಫೇರ್ಸ್" ನ್ನು ಸ್ಥಾಪಿಸಿದರು. ನಂತರ ಕಾಂಗ್ ಪೀಕಿಂಗ್‌ನಲ್ಲಿ "ರಾಷ್ಟ್ರೀಯ ರಕ್ಷಣಾ ಸಂಘ" ವನ್ನು ಸ್ಥಾಪಿಸಿ ಅದರ ಶಾಖೆಗಳನ್ನು ಪ್ರಾಂತಗಳಲ್ಲಿ ಕೂಡ ಸ್ಥಾಪಿಸಲಾಯಿತು. ಈ ಸಂಘಗಳು ಚೀನಾ ದೇಶವನ್ನು ವಿದೇಶಿಯರಿಂದ ರಕ್ಷಿಸುವ ವಿಷಯದಲ್ಲಿ ಚರ್ಚಿಸಿ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಉದ್ದೇಶವನ್ನು ಹೊಂದಿದ್ದವು. ಕಾಂಗ್‌ನ ಪ್ರಯತ್ನ ರಾಜಕೀಯವಾಗಿ ಆಡಳಿತದ ಕೇಂದ್ರೀಕರಣವನ್ನು ಸಾಮ್ರಾಟನ ಅಸ್ತಿತ್ವವನ್ನು ಭದ್ರಗೊಳಿಸುವ ಉದ್ದೇಶ ಹೊಂದಿದ್ದು ದವಾಜರ್ ತುಷ್ಷೀಯ ಅಧಿಕಾರವನ್ನು ಮೊಟಕುಗೊಳಿಸುವ ಉದ್ದೇಶವನ್ನು ಹೊಂದಿದ್ದವು. ಅಲ್ಲದೆ ದಕ್ಷಿಣದ ಆಡಳಿತಾಧಿಕಾರಿಗಳು ಯುವ ಚೀನಿಯರ ಪ್ರಗತಿ ಪರ ಧೋರಣೆಗಳನ್ನು ಬೆಂಬಲಿಸಿದ್ದರು.

## 133.5 ಸುಧಾರಣೆಗೆ ಪ್ರೇರಣೆ ಮತ್ತು ಅವುಗಳ ಅವಶ್ಯಕತೆ

ಕಾಂಗ್ ಯು ವೈ 1898 ರ ಜನವರಿ 29 ರಂದು ಸುಧಾರಣೆಯ ವ್ಯಾಪಕ ಯೋಜನೆಯನ್ನು ಸರ್ಕಾರಕ್ಕೆ ಒಪ್ಪಿಸಿದ್ದು, ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ತೀವ್ರವಾದ ಬದಲಾವಣೆಗಳಿಗೆ ಆಗ್ರಹಿಸಿದ್ದನು.

(a) ಚೀನಾದ ರಾಜಕೀಯ ಮತ್ತು ಆರ್ಥಿಕ ಸ್ಥಿತಿ ಸುಭದ್ರಗೊಳ್ಳಲು ಸುಧಾರಣೆಗಳನ್ನು ಜಾರಿಗೆ ತರುವುದರ ಬಗ್ಗೆ ತನ್ನ ನಿರ್ಧಾರವನ್ನು ಘೋಷಿಸಬೇಕು. ಹಾಗೂ ಸರ್ಕಾರದ ಉನ್ನತ ಅಧಿಕಾರಿಗಳೆಲ್ಲರೂ ಸುಧಾರಣೆಗಳನ್ನು ನಿಷ್ಠೆಯಿಂದ ಜಾರಿಗೆ ತರುವುದಾಗಿ ಸಾಮ್ರಾಟನ ಮುಂದೆ ಪ್ರಮಾಣ ಮಾಡಬೇಕು ಇಲ್ಲವೆ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಬೇಕೆಂದು ತಿಳಿಸಲಾಗಿತ್ತು.

(b) ಸಾಮ್ರಾಟನು ಪ್ರಜೆಗಳಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಪ್ರೋತ್ಸಾಹಿಸಬೇಕೆಂದು ಹಾಗೂ ಸರ್ಕಾರವು ಆಡಳಿತ ಸಂಸ್ಥೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು 12 ಜನ ಪ್ರಸಿದ್ಧ ವಿದ್ವಾಂಸರಿಂದ ಕೂಡಿದ ಸಮಿತಿಯೊಂದನ್ನು ರಚಿಸಬೇಕೆಂದು ಮತ್ತು ಆ ಸಮಿತಿಗೆ ಸುಧಾರಣೆಯ ಯೋಜನೆಗಳನ್ನು ರೂಪಿಸಲು ಅಧಿಕಾರ ಕೊಡಬೇಕೆಂದು ತಿಳಿಸಲಾಗಿದೆ.

(c) ಹಾಲಿ ಅಸ್ತಿತ್ವದಲ್ಲಿರುವ ಸಮಿತಿಗಳು ಮತ್ತು ಸಚಿವಾಲಯಗಳು ಬದಲಾವಣೆಯನ್ನು ವಿರೋಧಿಸುವುದಾದರೆ ಅವುಗಳನ್ನು ರದ್ದುಗೊಳಿಸಿ ಅವುಗಳ ಸ್ಥಾನದಲ್ಲಿ 12 ಇಲಾಖೆಗಳನ್ನು ಸ್ಥಾಪಿಸಿ ಸುಧಾರಣೆಗಳನ್ನು ಜಾರಿಗೆ ತರುವ ಜವಾಬ್ದಾರಿಯನ್ನು ಅವುಗಳಿಗೆ ವಹಿಸಬೇಕೆಂದು ತಿಳಿಸಿದ್ದನು.

d) ಚೀನಾವನ್ನು ಆಧುನೀಕರಣಗೊಳಿಸಲು ಜಪಾನಿನ ಮಾದರಿಯನ್ನು ಅನುಸರಿಸುವ ಸಂವಿಧಾನಾತ್ಮಕ ಬದಲಾವಣೆಗಳೊಂದಿಗೆ ಪಾರ್ಲಿಮೆಂಟಿನ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂದು ತನ್ನ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದನು.

ಆ ವೇಳೆಗಾಗಲೇ ವಿದೇಶಿಯರು ಚೀನಾದಲ್ಲಿ ಹಿತಾಸಕ್ತಿ ವಲಯಗಳನ್ನು ಏರ್ಪಡಿಸಿಕೊಂಡಿದ್ದವು. ಸಾಮ್ರಾಟನ ಆಸ್ಥಾನದಲ್ಲಿ ಸುಧಾರಣಾ ಪರ ಹಾಗೂ ವಿರೋಧಿ ಪಕ್ಷಗಳ ನಡುವೆ ಸುಧಾರಣೆಗಳ ಬಗ್ಗೆ ವಾದ ವಿವಾದಗಳು ಆರಂಭವಾಗಿದ್ದವು. ಕೆಲವು ವರ್ಷಗಳ ಕಾಲ ಉತ್ತರ ಚೀನಾ ಮತ್ತು ದಕ್ಷಿಣ ಚೀನಾ ಪಕ್ಷದವರು ಚಕ್ರವರ್ತಿನಿ ತುಷ್ಟಿಯ ಕೃಪೆಯನ್ನು ಪಡೆದುಕೊಳ್ಳಲು ಸ್ಪರ್ಧೆ ನಡೆಸಿದ್ದರು. ಆದರೆ 1898 ರಲ್ಲಿ ಪರಿಸ್ಥಿತಿಯು ಬೇರೆಯಾಗಿ ಚಕ್ರವರ್ತಿ ಕುವಾಂಗ್ ಸೂಪ್ರಾಪ್ತ ವಯಸ್ಸಿಗೆ ಬಂದಿದ್ದು ಆಡಳಿತ ಸೂತ್ರಗಳನ್ನು ತಾನೆ ವಹಿಸಿಕೊಂಡಿದ್ದನು. ಆದರೂ ದವಾಜರ್ ರಾಣಿಯು ಕೇಂದ್ರ ಸರ್ಕಾರದಲ್ಲಿ ಇನ್ನೂ ಪ್ರಬಲ ವ್ಯಕ್ತಿಯಾಗಿದ್ದಳು. ದಕ್ಷಿಣದ ಚೀನಿಯರ ಪಕ್ಷದ ನಾಯಕನೂ ಮತ್ತು ತನ್ನ ರಾಜಗುರುವೂ ಆಗಿದ್ದ ವೆಂಗ್ ತುಂಗ್ ಹೊ...ರ ಪ್ರಭಾವಕ್ಕೊಳಗಾಗಿದ್ದ ಸಾಮ್ರಾಟ ಕುವಾಂಗ್ ಸೂ ಚೀನಾದಲ್ಲಿ ಅಗತ್ಯವಾಗಿ ಸುಧಾರಣೆಗಳನ್ನು ಜಾರಿಯಲ್ಲಿ ತರಲು ತೀರ್ಮಾನಿಸಿದ್ದನು. ಚೀನಾದ ಪುನರ್ ನಿರ್ಮಾಣಕ್ಕೆ ಪಾಶ್ಚಾತ್ಯ ವಿದ್ಯಾಭ್ಯಾಸ ಮತ್ತು ವೈಜ್ಞಾನಿಕತೆ ಮತ್ತು ತಾಂತ್ರಿಕತೆಯ ಅವಶ್ಯಕತೆಯನ್ನು ಮನಗಂಡಿದ್ದ ಸಾಮ್ರಾಟನು ಯುದ್ಧದಲ್ಲಿ ಚೀನಾ ಸೋತ ನಂತರ ಸಾರ್ವತ್ರಿಕ ಸುಧಾರಣೆಗಳನ್ನು ಕೈಗೊಳ್ಳುವುದರ ಬಗ್ಗೆ ಆಲೋಚಿಸತೊಡಗಿದನು.

ಇದೇ ಸಂದರ್ಭದಲ್ಲಿ ದವಾಜರ್ ರಾಣಿಯಿಂದ ದೂರ ಸರಿಯುತ್ತಿದ್ದ ದಕ್ಷಿಣ ಚೀನಾ ಪಕ್ಷದವರು ಸಾಮ್ರಾಟನಿಗೆ ಬೆಂಬಲ ನೀಡತೊಡಗಿದರು. ಆದರೆ ಅವರಲ್ಲಿ ಅನೇಕರು ಕಾಂಗ್ ಯು ವೈ ಬಯಸಿದಷ್ಟು ತೀವ್ರವಾದ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ಉತ್ಸುಕರಾಗಿರಲಿಲ್ಲ. ಅವರು ಅಲ್ಪ ಸ್ವಲ್ಪ ಸುಧಾರಣೆಗಳನ್ನು ಮಾತ್ರವೆ ಬಯಸಿದ್ದರು. 1898 ರ ಮಧ್ಯ ಭಾಗದಲ್ಲಿ ಈ ಸುಧಾರಣೆಗಳ ಬಗ್ಗೆ ಒಂದು ಸಣ್ಣ ಪುಸ್ತಕದ ಮೂಲಕ ಚಾಂಗೇ ಜಿ ತುಂಗ್‌ನು ಪ್ರಚಾರ ಮಾಡಿಸಿದನು. ಪಾಶ್ಚಾತ್ಯ ಸಂಸ್ಥೆಗಳ ಅಧ್ಯಯನದ ಅಗತ್ಯತೆಯನ್ನು ಆ ಪುಸ್ತಕದಲ್ಲಿ ಹೆಚ್ಚಾಗಿ ಪ್ರತಿಪಾದಿಸಿದ್ದನು. ಆದರೆ ಇವನ ಸಲಹೆಗಳು ಕಾಂಗ್ ಯು ವೈ ನ ಸಲಹೆಗಳಷ್ಟು ತೀಕ್ಷ್ಣವಾಗಿರಲಿಲ್ಲ. ಇದೇ ಸಂದರ್ಭದಲ್ಲಿ ಸುಚೆ-ಚಿಂಗಾನ ಶಿಫಾರಸ್ಸಿನ ಮೇರೆಗೆ ಸಾಮ್ರಾಟನು ಸಮಾಲೋಚನೆಗಾಗಿ ತನ್ನನ್ನು ಭೇಟಿ ಮಾಡಲು ಕಾಂಗ್ ಯು ವೈಗೆ ಅನುಮತಿ ನೀಡಿದನು. ಇವರಿಬ್ಬರ ಭೇಟಿಯ ಕಾಲದಲ್ಲಿ ನಡೆದ ಮಾತುಕತೆಗಳಿಂದ ಸಾಮ್ರಾಟ ಕುವಾಂಗ್ ಸೂ ಕಾಂಗ್‌ನ ಸಲಹೆಗಳನ್ನು ಬಹಳ ಮಟ್ಟಿಗೆ ಮೆಚ್ಚಿಕೊಂಡನು. ಅಲ್ಲದೆ ಕಾಂಗ್‌ನನ್ನು ತನ್ನ ಸುಧಾರಣಾ ಸಲಹಾ ಸಮಿತಿಯ ಸದಸ್ಯರಲ್ಲೊಬ್ಬನನ್ನಾಗಿ ನೇಮಿಸಿಕೊಂಡನು. ಸಾಮ್ರಾಟನು ಆಸ್ಥಾನದಲ್ಲಿದ್ದ ತನ್ನ ಬೆಂಬಲಿಗರ ಸಲಹೆಯ ಮೇರೆಗೆ ಜೂನ್ 1898 ರಲ್ಲಿ ಸುಧಾರಣೆಗಳನ್ನು ಕುರಿತ ಮೊದಲ ಶಾಸನವನ್ನು ಹೊರಡಿಸಿದನು. ಚೀನಾವನ್ನು ಬಲಗೊಳಿಸಲು ಪಾಶ್ಚಾತ್ಯರ ರೀತಿಯಲ್ಲಿ ಸುಧಾರಣೆಗಳಾಗಬೇಕೆಂದು ಈ ಶಾಸನದಲ್ಲಿ ತಿಳಿಸಿದನು.

## 13.3.6 ಪ್ರಮುಖ ಸುಧಾರಣಾ ಚಳುವಳಿಯ ಸಲಹೆಗಳು

1898 ರ ವರ್ಷ ಕಾಂಗ್ ಯು ವೈ ಮತ್ತು ಅವನ ಬೆಂಬಲಿಗರು ಸಾಮ್ರಾಟ ಹಾಗೂ ಸುಧಾರಣಾ ಚಳುವಳಿಯ ಮೇಲೆ ಅಧಿಕ ಪ್ರಭಾವ ಹೊಂದಿದ್ದರು. ಅವರು ಒಟ್ಟು 40 ಶಿಫಾರಸ್ಸುಗಳನ್ನು ಮಾಡಿದ್ದರು. ಕೇಂದ್ರ ಸರ್ಕಾರದಲ್ಲಿ ಅನಗತ್ಯವಾಗಿರುವ ಹುದ್ದೆಗಳನ್ನು ರದ್ದು ಪಡಿಸುವುದು. ಕ್ವಾಂಗ್ ಟುಂಗ್ ಮತ್ತು ಯುನಾನ್ ಪ್ರಾಂತ್ಯಗಳ ಗೌರ್ನರ್ ಹಾಗೂ ಹಳದಿ ನದಿಗೆ ಸಂಬಂಧಪಟ್ಟ ಡೈರಕ್ಟರ್ ಜನರಲ್‌ನ ಹುದ್ದೆಗಳನ್ನು ರದ್ದುಗೊಳಿಸುವುದು ಮತ್ತು ಪರೀಕ್ಷಾ ಪದ್ಧತಿಯನ್ನು ಆಧುನೀಕರಣಗೊಳಿಸುವುದು ಮುಖ್ಯ ಅಂಶಗಳಾಗಿದ್ದವು. ಅಲ್ಲದೆ ಧಾನ್ಯಗಳ ಸಾಗಾಣಿಕೆಯ ಮೇಲೆ ಮತ್ತು ಉಪ್ಪಿನ ಮೇಲಿನ ತೆರಿಗೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ತಿಳಿಸಿದ್ದರು ಮತ್ತು ಸಿವಿಲ್ ಮತ್ತು ಮಿಲಿಟರಿ ವಿಭಾಗಗಳಲ್ಲಿ ಯಾವ ಯಾವ ಹುದ್ದೆಗಳನ್ನು ರದ್ದುಗೊಳಿಸಬೇಕೆಂಬುದಕ್ಕೆ ಸರ್ಕಾರ ಎಚ್ಚರಿಕೆಯಿಂದ ತೀರ್ಮಾನಿಸಬೇಕೆಂದು ಸೂಚಿಸಿದ್ದನು. ಈ ಬದಲಾವಣೆಗಳೊಂದಿಗೆ ಕಾಂಗ್ ಯು ವೈ ಆಡಳಿತ ನಿರ್ವಹಿಸಲು ಸಚಿವ ಸಂಪುಟವೊಂದನ್ನು ಸ್ಥಾಪಿಸಬೇಕೆಂದು ತಿಳಿಸಿದ್ದನು. ಸಚಿವ ಸಂಪುಟವು ಸಭೆ ಸೇರಿ ಸಾರ್ವತ್ರಿಕವಾದ ನೀತಿಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದರ ಜೊತೆಗೆ ಕಾಂಗ್ ಸೂಚಿಸಿದ 12 ವಿಭಾಗಗಳ ಆಡಳಿತದ ಮೇಲ್ವಿಚಾರಣೆ ನೋಡಿಕೊಳ್ಳಬೇಕೆಂದು ತಿಳಿಸಿದ್ದನು. ವಿದೇಶಿಯರಿಂದ ಚೀನಿಯರನ್ನು ರಕ್ಷಿಸುವ ಉದ್ದೇಶದಿಂದ ಸುಧಾರಣೆಗಳನ್ನು ಪ್ರಾರಂಭಿಸಿದ ಸಾಮ್ರಾಟನು ಜೂನ್ 11, 1898 ರಂದು ಮೊದಲ ಸುಧಾರಣಾ ಶಾಸನ ಹೊರಡಿಸಿ ನೂರು ದಿವಸಗಳ ಸುಧಾರಣೆಗಳನ್ನು ಪ್ರಾರಂಭಿಸಿದನು.

*ಕಾಂಗ್ ಸೂಚಿಸಿದ್ದ ಹನ್ನೆರಡು ಇಲಾಖೆಗಳೆಂದರೆ:*

1) ಕಾನೂನು ಇಲಾಖೆ-ಚೀನಾದಲ್ಲಿ ವಿದೇಶಿಯರು ತಾವೆ ಮಾಡಿಕೊಂಡ ಕಾನೂನೂ ವ್ಯವಸ್ಥೆ ಚೀನಿ ಸರ್ಕಾರದ ಗೌರವಕ್ಕೆ ಕುಂದು ತರದಂತೆ ಪಾಶ್ಚಿಮಾತ್ಯರನ್ನು ಅನುಸರಿಸಿ ಚೀನಾದ ಕಾನೂನುಗಳನ್ನು ಮಾರ್ಪಡಿಸಿಕೊಳ್ಳಲು ತಿಳಿಸಲಾಗಿತ್ತು.

2) ಕಂದಾಯ ಇಲಾಖೆ, ಚೀನಿ ಸಾಮ್ರಾಜ್ಯ ವಿಸ್ತೀರ್ಣ, ಜನಸಂಖ್ಯೆ, ಆರ್ಥಿಕ ಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ತೆರಿಗೆಗಳನ್ನು ವಿಧಿಸುವಲ್ಲಿ ಮತ್ತು ವಸೂಲಿ ಮಾಡುವಲ್ಲಿ ಪಾಶ್ಚಾತ್ಯರ ಮಾದರಿ ಅನುಸರಿಸಬೇಕೆಂದು ಹಾಗೂ ಸರ್ಕಾರ ಆದಾಯ ಹೆಚ್ಚಿಸಿಕೊಳ್ಳಲು ವಿದೇಶಿ ವಸ್ತುಗಳ ಮೇಲೆ ಪ್ರವೇಶ ತೆರಿಗೆ, ಪೋಸ್ಟಲ್ ಸ್ಟ್ಯಾಂಪ್, ಬ್ಯಾಂಕ್‌ಗಳು, ತಂಬಾಕು ಮತ್ತು ಮದ್ಯ ಪಾನೀಯಗಳ ಮೇಲೆ ವಿಧಿಸಬೇಕೆಂದು ತಿಳಿಸಲಾಗಿತ್ತು.

3) ವಿದ್ಯಾಭ್ಯಾಸ ಇಲಾಖೆ: ರಾಜಧಾನಿ ಪೀಕಿಂಗ್‌ನಲ್ಲಿ ವಿಶ್ವವಿದ್ಯಾನಿಲಯ ಪ್ರಾಂತ್ಯದ ರಾಜಧಾನಿಯಲ್ಲಿ ಕಾಲೇಜು ಮತ್ತು ಪ್ರತಿಯೊಂದು ಪ್ರಿಪೇಕ್ಚರ್ ಮತ್ತು ಕೌಂಟಿಯಲ್ಲೂ ಶಾಲೆಗಳನ್ನು ಸ್ಥಾಪಿಸಬೇಕೆಂದು ತಿಳಿಸಲಾಗಿತ್ತು. ಅಲ್ಲದೆ ನೌಕಾಶಾಲೆ ಮತ್ತು ಮಿಲಿಟರಿ ಶಾಲೆಗಳನ್ನು ಸಂಬಂಧಪಟ್ಟ ಪುಸ್ತಕಗಳನ್ನು ಚೀನಿ ಭಾಷೆಗೆ ಬಾಷಾಂತರಿಸುವ ವ್ಯವಸ್ಥೆ ಮಾಡಬೇಕೆಂದು ತಿಳಿಸಲಾಗಿತ್ತು.

4) ವ್ಯವಸಾಯ ಇಲಾಖೆ: ಉಳಲು ಯೋಗ್ಯವಾದ ಭೂಮಿ, ಅರಣ್ಯಗಳು, ಮತ್ಸ್ಯೋದ್ಯಮ, ಹೈನುಗಾರಿಕೆ ಮೊದಲಾದ ಕಸುಬುಗಳಿಗೆ ಸರ್ಕಾರ ಅವಶ್ಯಕವಾದ ಭೂಮಿಯನ್ನು ಒದಗಿಸಬೇಕೆಂದು ತಿಳಿಸಲಾಗಿತ್ತು.

5) ಕಾಮಗಾರಿ ಇಲಾಖೆ- ಕುಶಲ ಕೈಗಾರಿಕಾ ವಸ್ತುಗಳ ಉತ್ಪಾದನೆ, ಹಡಗು ನಿರ್ಮಾಣ, ಸೇತುವೆಗಳ ನಿರ್ಮಾಣ ಮತ್ತು ರಸ್ತೆಗಳ ನಿರ್ಮಾಣ ಕಾರ್ಯವನ್ನು ಕಾಮಗಾರಿ ಇಲಾಖೆ ನೋಡಿಕೊಳ್ಳಬೇಕೆಂದು ಮತ್ತು ಸಂಶೋಧನೆ ಮತ್ತು ಅನ್ವೇಷಣೆಗಳಿಗೆ ಪ್ರೋತ್ಸಾಹ ನೀಡಬೇಕೆಂದು ತಿಳಿಸಲಾಗಿತ್ತು.

6) ವ್ಯಾಪಾರ ಮತ್ತು ವಾಣಿಜ್ಯ ಇಲಾಖೆ: ವ್ಯಾಪಾರಕ್ಕೆ ಸಂಬಂಧಪಟ್ಟ ಎಲ್ಲ ಚಟುವಟಿಕೆಗಳು ವಾಣಿಜ್ಯ, ಶಾಲೆಗಳು, ಚೇಂಬರ್ಸ್ ಆಫ್ ಕಾಮರ್ಸ್, ವಾಣಿಜ್ಯ, ತೆರಿಗೆ ಮತ್ತು ವ್ಯಾಪಾರ ವಾಣಿಜ್ಯಗಳಿಗೆ ಸಂಬಂಧಪಟ್ಟ ಕಾನೂನುಗಳ ನಿಯಂತ್ರಣವನ್ನು ನೋಡಿಕೊಳ್ಳಲು ತಿಳಿಸಲಾಗಿತ್ತು.

7) ರೈಲ್ವೆ ಇಲಾಖೆ- ರೈಲ್ವೆ ಮಾರ್ಗಗಳ ನಿರ್ಮಾಣ ಮತ್ತು ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ತಿಳಿಸಲಾಗಿತ್ತು.

8) ಅಂಚೆ ಮತ್ತು ತಂತಿ ಇಲಾಖೆ- ಸಾಮ್ರಾಜ್ಯದಾದ್ಯಂತ ಎಲ್ಲ ಹಂತದ ಅಂಚೆ ಕಛೇರಿಗಳು ಹಾಗೂ ಟೆಲಿಗ್ರಾಫ್ ವ್ಯವಸ್ಥೆಯನ್ನು ನೋಡಿಕೊಳ್ಳಲು ತಿಳಿಸಲಾಗಿತ್ತು.

9) ಗಣಿ ಉದ್ಯಮ ಇಲಾಖೆ- ಸಾಮ್ರಾಜ್ಯದಲ್ಲಿನ ಎಲ್ಲ ಗಣಿ ಉದ್ಯಮಗಳ ಮೇಲ್ವಿಚಾರಣೆ ಮತ್ತು ಇದಕ್ಕೆ ಸಂಬಂಧಿಸಿದ ತರಬೇತಿ ಶಾಲೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ತಿಳಿಸಲಾಗಿತ್ತು.

10) ಪ್ರವಾಸೋದ್ಯಮ ಇಲಾಖೆ- ರಾಜಕಾರಣಿಗಳು, ವಿದ್ವಾಂಸರುಗಳು ವಿದೇಶಿ ಪ್ರವಾಸ ಕೈಗೊಳ್ಳಲು ಮತ್ತು ಅಲ್ಲಿನ ವ್ಯವಸ್ಥೆಗಳನ್ನು ತಿಳಿದುಕೊಳ್ಳಲು ಅವಕಾಶ ಕಲ್ಪಿಸುವುದು ಮತ್ತು ಅವರು ಪಡೆದ ಜ್ಞಾನ, ಅನುಭವಗಳನ್ನು ಚೀನಾದಲ್ಲಿ ಜಾರಿಗೆ ತರಲು ವ್ಯವಸ್ಥೆ ಮಾಡುವುದಕ್ಕೆ ತಿಳಿಸಲಾಯಿತು.

11) ಸೈನ್ಯ ಇಲಾಖೆ- ಸಾಮ್ರಾಜ್ಯದಾದ್ಯಂತ ಸೈನಿಕ ಸಂಘಟನೆಯನ್ನು ಕೈಗೊಂಡು ಆಧುನಿಕ ರೀತಿಯಲ್ಲಿ ತರಬೇತಿ ನೀಡಲು ತಿಳಿಸಲಾಯಿತು.

12) ನೌಕಾ ಇಲಾಖೆ- ನೌಕಾ ನಿರ್ಮಾಣ ಮತ್ತು ನೌಕಾದಳದ ತರಬೇತಿಯ ಮೇಲ್ವಿಚಾರಣೆಯನ್ನು ತಿಳಿಸಲಾಗಿತ್ತು ಮತ್ತು ಕಾಂಗ್ ಯು ವೈ ರಾಜಕೀಯ ಆಡಳಿತದಲ್ಲೂ ಹಲವು ಸುಧಾರಣೆ ಸಲಹೆಗಳನ್ನು ನೀಡಿದ್ದನು.

## 133.7 ಸುಧಾರಣಾ ಚಳುವಳಿಯ ಗತಿ ಮತ್ತು ಅದರ ವಿಫಲತೆ

ಸುಧಾರಣೆಗಳ ಪ್ರಮುಖ ಉದ್ದೇಶ ಅನಾವಶ್ಯಕವಾದ ಆಡಳಿತಾಧಿಕಾರಗಳನ್ನು ರದ್ದು ಪಡಿಸುವುದರ ಮೂಲಕ ಸಾರ್ವಜನಿಕ ವ್ಯಚ್ಚವನ್ನು ತಗ್ಗಿಸುವುದು ಪ್ರಗತಿಪರ ಚಿಂತಕರನ್ನು ಬಳಸಿಕೊಂಡು ಸೈನಿಕ, ಆಡಳಿತ ಮತ್ತು ಆರ್ಥಿಕ ಸುಧಾರಣೆಗಳ ಮೂಲಕ ಚೀನಿ ಆಧುನಿಕರಣದ ಸಾಧನೆ ಮಾಡುವುದೇ ಆಗಿತ್ತು. ದಕ್ಷಿಣದ ಪಕ್ಷಗಳ ಸಲಹೆಯಂತೆ ಸ್ಥಾಮ್ರಾಟನು ಶಾಸನಗಳನ್ನು ಹೊರಡಿಸಿದ ಸಮಯದಲ್ಲಿ

ಆಸ್ಥಾನದಲ್ಲಿ ಸುಧಾರಣೆಗಳ ವಿರೋಧಿಗಳಾಗಿದ್ದ ಸಂಪ್ರದಾಯವಾದಿಗಳು ದವಾಜರ್ ರಾಣಿಯನ್ನು ಬೆಂಬಲಿಸಿದ್ದರು. ಸಾಮ್ರಾಜ್ಯದ ವ್ಯವಹಾರಗಳಲ್ಲಿ ಪ್ರಬಲವಾಗಿದ್ದ ತುಜ್ಹಿ ಪ್ರಮುಖ ಹುದ್ದೆಗಳಿಗೆ ಕುತಂತ್ರದ ಮೂಲಕ ತನಗೆ ಬೇಕಾದವರನ್ನು ನೇಮಿಸಿ ಸಾಮ್ರಾಟನ ಯೋಜನೆಗಳಿಗೆ ತೊಡಕಾದಳು. ಚಕ್ರವರ್ತಿಯ ಆಸ್ಥಾನದಲ್ಲಿ ಸುಧಾರಣೆಕಾರರ ಚಟುವಟಿಕೆಗಳನ್ನು ಗುಪ್ತವಾಗಿ ತಿಳಿದುಕೊಳ್ಳಲು ನಂಬಿಕಸ್ತ ಯಾಲುವನ್ನು ನೇಮಿಸಿಕೊಂಡಳು.

ಸುಧಾರಣೆ ಮತ್ತು ವಿದೇಶಾಂಗ ನೀತಿಯು ಪರಸ್ಪರ ನಿಕಟ ಸಂಬಂಧಗಳನ್ನು ಹೊಂದಿದ್ದು, ರಾಣಿ ತುಜ್ಹಿ ಮತ್ತು ಉತ್ತರದ ಸಂಪ್ರದಾಯವಾದಿಗಳು ಹಾಗೂ ವಿದೇಶಾಂಗ ಮಂತ್ರಿ ಲಿಹಂಗ್-ಚಾಂಗ್ ರಷ್ಯದೊಡನೆ ನಿಕಟ ಸಂಬಂಧವನ್ನು ಹೊಂದಿದ್ದರು ಮತ್ತು ರಷ್ಯಾದ ಪರವಾಗಿ ನೀತಿ ರೂಪಿಸಲು ಪ್ರತಿಪಾದಿಸಿದ್ದರು. ಆದರೆ ಇದಕ್ಕೆ ವಿರುದ್ಧವಾಗಿ ಸುಧಾರಣಾವಾದಿಗಳು ಜಪಾನೀ ಪರವಾಗಿದ್ದು, ಜಪಾನೀ ಮಾದರಿಯಲ್ಲಿ ಚೀನಾವನ್ನು ಆಧುನೀಕರಣಗೊಳಿಸುವಲ್ಲಿ ಉತ್ಸುಕರಾಗಿದ್ದರು. ಸುಧಾರಣಾಕಾರರು 1898 ರಲ್ಲಿ ಸರ್ಕಾರದ ಉನ್ನತ ಸಭೆ (Grand Council) ಯಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿ ಆ ಸಭೆಗೆ ಯಾಂಗ್ ಜುಯೀ ಲಿಯು ಕುವಾಂಗ್ ಟಿ ಮತ್ತು ತಾನ್ ಸು ತುಂಗ್‌ರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಳ್ಳುವಂತೆ ಸಾಮ್ರಾಟನನ್ನು ಒಪ್ಪಿಸಿದ್ದರು. ಕಾಂಗ್ ಯು ವೈ ಈ ಉನ್ನತ ಸಭೆಯನ್ನು ಮಂತ್ರಿ ಮಂಡಲವನ್ನಾಗಿ ಮಾರ್ಪಾಡಿಸಿಬೇಕೆಂಬ ಉದ್ದೇಶವನ್ನು ಹೊಂದಿದ್ದನು. ಆದರೆ ಸಾಮ್ರಾಟನು ಸಂಪ್ರದಾಯವಾದಿ ಸಹೋದ್ಯೋಗಿಗಳೊಂದಿಗೆ ಸಾಧ್ಯವಾದಷ್ಟು ಸ್ನೇಹಯುತವಾಗಿರಬೇಕೆಂದು ಸುಧಾರಣಾಕಾರರನ್ನು ಒಪ್ಪಿಸಲು ಪ್ರಯತ್ನಿಸಿದ್ದನು.

ಸುಧಾರಣಾವಾದಿಗಳು ಮತ್ತು ಸಂಪ್ರದಾಯವಾದಿಗಳ ನಡುವಿನ ಈ ಘರ್ಷಣೆ ಸೆಪ್ಟೆಂಬರ್‌ನಲ್ಲಿ ಗಂಭೀರವಾಗಿ ಪರಿಣಮಿಸಿತು. ಸಾಮ್ರಾಟ ಕುವಾಂಗ್ ಸೂ ಅಕ್ಟೋಬರ್‌ನಲ್ಲಿ ಟೀನ್‌ಟ್ಸಿನ್‌ನ ರಕ್ಷಕ ಸೈನ್ಯದ ತನಿಖೆಗೆ ಹೋಗಿದ್ದ ಸಮಯದಲ್ಲಿ ದವಾಜರ್ ರಾಣಿ ಮತ್ತು ಆವಳ ಕಡೆಯವರು ಸಾಮ್ರಾಟನನ್ನು ಪದಚ್ಯುತಗೊಳಿಸಲು ಒಳಸಂಚು ನಡೆಸಿದರು. ರಾಣಿಯ ವಿರುದ್ಧ ಕ್ರಮ ತೆಗೆದುಕೊಳ್ಳಲು ಸೈನ್ಯವನ್ನು ಕಳುಹಿಸುವಂತೆ ಸುಧಾರಣಾಕಾರರು ಕುವಾಂಗ್ ಸೂ ವನ್ನು ಒತ್ತಾಯಿಸಿದರು. ಆದರೆ ಸೈನಿಕ ತರಬೇತಿ ಕಾಲೇಜಿನ ನಿರ್ದೇಶಕನಾಗಿದ್ದ ಯು ಆನ್ ಷಿ ಕೈ ನ ಬೆಂಬಲವನ್ನು ಬಯಸಿದ್ದರು. ಅದಕ್ಕೆ ಒಪ್ಪಿದ ಯು ಆನ್ ಟೀನ್‌ಟ್ಸಿನ್‌ನಲ್ಲಿದ್ದ 7000 ಸೈನಿಕರ ನಾಯಕತ್ವವನ್ನು ವಹಿಸಿಕೊಂಡು ಜುಂಗ್ ಲು ನನ್ನು ಸೋಲಿಸಿ ಬೇಸಿಗೆ ಅರಮನೆಗೆ ಮುತ್ತಿಗೆ ಹಾಕಿ ರಾಣಿ ತುಜ್ಹಿಯನ್ನು ಸೆರೆಹಿಡಿಯುವುದಾಗಿ ತಿಳಿಸಿದ್ದನು. ಆದರೆ ಮಹತ್ವಾಕಾಂಕ್ಷಿಯಾಗಿದ್ದ ಯು ಆನ್ ರಾಣಿಯ ಸೈನ್ಯದ ನಾಯಕನಾಗಿದ್ದ ಜುಂಗ್ ಲುನ ಜೊತೆಗೂಡಿ ಸಾಮ್ರಾಟನ ರಾಜಧಾನಿ ಪೀಕಿಂಗ್ ಮೇಲೆ ದಂಡೆತ್ತಿ ಹೋದರು. ಸಾಮ್ರಾಟನ ಶಾಯಿಲೆಯ ನೆಪವೊಡ್ಡಿ ರಾಣಿಯ ಆಸ್ಥಾನದ ವ್ಯವಹಾರಗಳನ್ನು ಮತ್ತು ಕೇಂದ್ರದ ಆಡಳಿತವನ್ನು ತನ್ನ ಹಿಡಿತಕ್ಕೊಳಪಡಿಸಿಕೊಂಡಳು. ಹೊಸ ಆಜ್ಞೆ ಹೂಡಿ ಸುಧಾರಣೆಯ ಹಲವಾರು ಯೋಜನೆಗಳನ್ನು ರದ್ದುಗೊಳಿಸಿದಳು. ನಂತರ ಮುಂದಿನ ತಿಂಗಳುಗಳಲ್ಲಿ ಎಲ್ಲ ಸುಧಾರಣೆಗಳನ್ನು ರದ್ದುಗೊಳಿಸಿದಳು. ಹಾಗೂ ಸಾಮ್ರಾಟನನ್ನು ಬಂಧಿಸಿ ತರುವಾಯ 1900 ರ ಜನವರಿಯಲ್ಲಿ ರಾಜಕುಟುಂಬಕ್ಕೆ ಸೇರಿದ ಪೋ-ಚುನ್ ಎಂಬ ಬಾಲಕನನ್ನು ಉತ್ತರಾಧಿಕಾರಿಯನ್ನಾಗಿ ಘೋಷಿಸಿದಳು. ಪರಿಣಾಮವಾಗಿ ಸುದಾರಣಾವಾದಿಗಳಲ್ಲಿ ಹಲವಾರು ಪೀಕಿಂಗ್‌ನ್ನು ತೊರೆದು ಓಡಿಹೋದರು. ಕೆಲವರು ಕೊಲ್ಲಲ್ಪಟ್ಟರು ಮತ್ತು ಕೆಲವರನ್ನು ಸೆರೆಮನೆಗೆ ತಳ್ಳಲಾಯಿತು. ಕಾಂಗ್ ಯು ವೈ ಮತ್ತು ಲಿಯಾಂಗ್ ಚ-ಚಿಯೊ ದೇಶವನ್ನು ಬಿಟ್ಟು ಹೋಗಿ ಜಪಾನಿನಲ್ಲಿ ಆಶ್ರಯ ಪಡೆದು ತರುವಾಯ ತಮ್ಮ ಹೋರಾಟವನ್ನು ಮುಂದುವರೆಸಿದರು. ಜುಂಗ್ ಲು ಮತ್ತು ಯು ಆನ್ ಷಿ ಕೈ ಮೊದಲಾದ ನಾಯಕರು ಉತ್ತಮ ಅಧಿಕಾರಗಳನ್ನು ಹಿಡಿದರು. ಸುಧಾರಣಾವಾದಿಗಳಿಗೆ ಬೆಂಬಲಿಸಿದ ಅಧಿಕಾರಿಗಳನ್ನು ತತ್‌ಕ್ಷಣವೇ ಹುದ್ದೆಗಳಿಂದ ಪಾರು ಮಾಡಿ ಸಂಪ್ರದಾಯವಾದಿಗಳನ್ನು ನೇಮಿಸಿಕೊಂಡಳು. ಇದರಿಂದಾಗಿ 103 ದಿನಗಳ ಸುಧಾರಣಾ ಶಾಸನಗಳನ್ನು ಸಾಮ್ರಾಟನು ಹೊರಡಿಸಿದ್ದರೂ ಸೈನಿಕ ಮತ್ತು ಆಡಳಿತಾತ್ಮಕ ಹಿಡಿತ ಚಕ್ರವರ್ತಿಗೆ ಇಲ್ಲದಿದ್ದ ಕಾರಣ ಸುಧಾರಣಾವಾದಿಗಳ ನಾಯಕರಲ್ಲಿದ್ದ ಕೊರತೆ. ಯು - ಆ ಆನ್ ಷಿಕೈನ ಮಿತ್ರದ್ರೋಹಗಳು ಇವೆ ಮೊದಲಾದ ಕಾರಣಗಳಿಂದಾಗಿ ಚೀನಾದಲ್ಲಿ ಆತುರವಾಗಿ ಜಾರಿಯಲ್ಲಿ ತಂದ ಸುಧಾರಣೆಗಳು ವಿಫಲವಾದವು.

## 133.8 ಒಟ್ಟಾರೆ ಸಾರಾಂಶ ನೀಡುವ ಬನ್ನಿ

1898 ರ ಜೂನ್ 11 ರಂದು ಸೆಪ್ಟೆಂಬರ್ 16 ರವರೆಗಿನ ಸುಧಾರಣಾವಾದಿಗಳ ಪ್ರಯತ್ನವನ್ನು 100 ದಿವಸಗಳ ಸುಧಾರಣೆಯೆಂದು ಕರೆಯಲಾಗಿದ್ದು, ಇದು ಚೀನಾವನ್ನು ವಿದೇಶಿಯರಿಂದ ರಕ್ಷಿಸಿ, ಜಪಾನಿಯರ ಮಾದರಿಯಲ್ಲಿ ಚೀನಾವನ್ನು ಆಧುನೀಕರಣಗೊಳಿಸುವ ಪ್ರಯತ್ನ ಇದಾಗಿತ್ತು. ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಚೀನಾ ಮಾಡಿಕೊಂಡು ಬಂದ ಒಪ್ಪಂದಗಳು ಅಸಮ ಒಪ್ಪಂದಗಳಾಗಿದ್ದು ಚೀನಾ ಜಪಾನ್ ಯುದ್ಧದಲ್ಲಿ ಚೀನಿಯರ ಸೋಲು ಚೀನಾದ ದುರ್ಬಲ ರಾಜಕೀಯ ಸ್ಥಿತಿ ಇವೆ ಮೊದಲಾದ ಅಂಶಗಳು ಚೀನಿಯುವ ಬುದ್ಧಿ ಜೀವಿಗಳಲ್ಲಿ ಜಾಗೃತಿಯನ್ನು ಮೂಡಿಸಿದ್ದವು. ಆ ವೇಳೆಗಾಗಲೇ ಜಪಾನ್ ಆಧುನೀಕರಣಗೊಂಡು ಐರೋಪ್ಯರ ಜೊತೆ ಪೈಪೋಟಿ ನಡೆಸಲು ಯತ್ನಿಸಿದ ರೀತಿಯನ್ನು ಮನಗಂಡ ಈ ಬುದ್ಧಿ ಜೀವಿ ಸುಧಾರಣಾವಾದಿಗಳು ಜಪಾನ್ ಮಾದರಿಯನ್ನು ಅನುಸರಿಸಲು ಮುಂದಾದರು. ಮೊದಲಿಗೆ ಚೀನಾದಲ್ಲಿ ಇಂತಹ ಬದಲಾವಣೆಗಳನ್ನು ಬಯಸಿದ ವಿಚಾರವಂತರಲ್ಲಿ ಎರಡು ಗುಂಪುಗಳಿದ್ದು, ಒಂದು

ಗುಂಪು ಪ್ರಗತಿಪರ ಸುಧಾರಣಾವಾದಿಗಳಾಗಿದ್ದರೆ ಮತ್ತೊಂದು ಗುಂಪು ಚೀನಾದ ರಾಜಕೀಯ ಪ್ರಭುತ್ವವನ್ನು ಸದೃಢಗೊಳಿಸಲು ಬಯಸಿದ ಕ್ರಾಂತಿವಾದಿಗಳಾಗಿದ್ದಿತು. ಮೊದಲ ಪ್ರಯತ್ನಗಳಲ್ಲಿ ಸುಧಾರಣಾವಾದಿಗಳಾಗಲು ಅಥವಾ ಕ್ರಾಂತಿವಾದಿಗಳಾಗಲಿ ಬದಲಾವಣೆ ತರುವಲ್ಲಿ ಸಫಲರಾಗಲಿಲ್ಲ. ಆಳುವ ಪ್ರಭುತ್ವ ಈ ಪ್ರಯತ್ನಗಳನ್ನು ತುಳಿದು ಹಾಕಿತ್ತು. 1862 ರಿಂದ 1894 ರವರೆಗಿನ ಕಾಲದಲ್ಲಿ ಚೀನಾ ಪ್ರಭುತ್ವ ಸ್ವಯಂ ಪ್ರಭಲತೆಯನ್ನು ಸಾಧಿಸುವ ಯತ್ನ ನಡೆಸಿದ್ದು, ಪಾಶ್ಚಿಮಾತ್ಯರ ಸಂಪರ್ಕವನ್ನು ಬಳಸಿಕೊಂಡು ಕೈಗಾರಿಕೆಗಳ ಬೆಳವಣಿಗೆ, ಸೈನಿಕ ತಾಂತ್ರಿಕತೆ ಮತ್ತು ಸುಧಾರಿತ ರಾಜಕೀಯ ಅಧಿಪತ್ಯವನ್ನು ಸಾಧಿಸಿಕೊಳ್ಳಲು ಮುಂದಾಗಿತ್ತು. ಹಾಗಾಗಿ ಸುಧಾರಣೆಗಳ ಪ್ರಯತ್ನಗಳಿಗೆ ಬೆಂಬಲ ನೀಡಲು ಅವರು ಮುಂದೆ ಬಂದಿದ್ದರು. ಪಾಶ್ಚಿಮಾತ್ಯ ಮತ್ತು ಜಪಾನಿಯರ ವಿರುದ್ಧದ ಚೀನೀಯರ ಸೋಲಿಗೆ ಕಾರಣ ಹುಡುಕಲು ಮತ್ತು ಚೀನಾದ ಸ್ವಯಂ ಪ್ರಭಲತೆಯನ್ನು ಸಾಧಿಸಲು ಚೀನಾದ ಕಿರಿಯ ವಿದ್ವಾಂಸರು ಹಾಗೂ ವಿಚಾರವಂತ ಆಡಳಿತಗಾರರು ಭಿನ್ನ ನೆಲೆಯಲ್ಲಿ ಚಳುವಳಿ ಆರಂಭಿಸಿದರು.

ವೆಂಗ್ ತುಂಗ್ ಹೂ ಒಬ್ಬ ಪ್ರಭುತ್ವ ಪಾಹಿ ಉಪಾಧ್ಯಾಯನಾಗಿದ್ದು, ಪ್ರಭುತ್ವದ ಏಳಿಗೆಗೆ ಚೀನಿ ಸರ್ಕಾರ ವಿದೇಶಿಯರ ವಿರುದ್ಧ ಹೋರಾಟ ನಡೆಸಬೇಕೆಂದು ಒತ್ತಾಯಿಸಿದ್ದನು. ಹಾಗೂ 1894 ರ ಜಪಾನಿನ ವಿರುದ್ಧವು ಯುದ್ಧ ನಡೆಯುವಂತೆ ಆಗ್ರಹಿಸಿದನು. ಆದರೆ ಯುದ್ಧದಲ್ಲಿನ ಸೋಲು ತನ್ನ ಆಲೋಚನೆಗಳನ್ನು ಬದಲಾಯಿಸುವಂತೆ ಮಾಡಿತು. ಅಮೇರಿಕನ್ನರೊಳಗೊಂಡಂತೆ ಪಾಶ್ಚಾತ್ಯ ಧರ್ಮಪಂಥೀಯರು ಕ್ರೈಸ್ತ ಧರ್ಮದ ಪ್ರಸಾರ ಮಾಡುತ್ತಲೇ ಚೀನಿಯರಿಗೆ ಪಾಶ್ಚಿಮಾತ್ಯರ ಜ್ಞಾನ ಮತ್ತು ವಿಚಾರವಾದಗಳು ಮತ್ತು ಸಂಸ್ಕೃತಿಯ ಬಗ್ಗೆ ಅರಿವು ಮೂಡುವಂತೆ ಮಾಡಿದ್ದರು. ಶಾಲಾ ಕಾಲೇಜುಗಳ ಸ್ಥಾಪನೆ ಗ್ರಂಥಾಲಯಗಳ ಸ್ಥಾಪನೆ, ಸಾಹಿತ್ಯ ಮತ್ತು ವಿಜ್ಞಾನಗಳಿಗೆ ಸಂಬಂಧಪಟ್ಟಂತಹ ಪುಸ್ತಕಗಳನ್ನು ಭಾಷಾಂತರಿಸಿ ಚೀನಿ ದೇಶೀಯರಿಗೆ ಒದಗಿಸುವ ಮೂಲಕ ಕಿರಿಯ ವಿದ್ವಾಂಸ ಮತ್ತು ಸುಧಾರಣಾವಾದಿಗಳಿಗೆ ಚೀನಾಕ್ಕೆ ಆಧುನೀಕರಣಗೊಳಿಸಲು ಯೋಜನೆಗಳನ್ನು ರೂಪಿಸುವ ಅವಕಾಶ ಕಲ್ಪಿಸಿಕೊಟ್ಟರು. ಚೀನಾ ಜಪಾನ್ ಯುದ್ಧದಲ್ಲಿ ಚೀನಾ ಸೋತು ಷಿಮನೋಸಕಿ ಒಪ್ಪಂದ ಮಾಡಿಕೊಂಡಾಗ ಷರತ್ತುಗಳನ್ನು ಕಿರಿಯ ವಿದ್ವಾಂಸರು ಪ್ರತಿಭಟಿಸಿ ಷರತ್ತುಗಳನ್ನು ಚೀನಿ ಸರ್ಕಾರ ಒಪ್ಪಿಕೊಳ್ಳಕೂಡದೆಂದು ಆಗ್ರಹಿಸಿದರು. ಕಾಂಗ್ ಯು ವೈ ನಂತಹ ಯುವ ನಾಯಕರುಗಳು ಸಾಂಪ್ರದಾಯಿಕವಾದಿಗಳು ಮತ್ತು ಅಧಿಕಾರವರ್ಗದವರು ಸುಧಾರಣವಾದಿಗಳಿಗೆ ಬೆಂಬಲ ನೀಡಿದ್ದರು. ಸುಧಾರಣಾವಾದಿಗಳು, ಚೀನಾದ ರಾಜಕೀಯ ಸಂಘಟನೆಯನು ಸಾಧಿಸಲು ಪ್ರೋತ್ಸಾಹಿಸಿದರು. ಅಧ್ಯಯನ ಸಂಘಗಳು, ಸುಧಾರಣಾ ಕ್ಲಬ್‌ಗಳನ್ನು ಸ್ಥಾಪಿಸಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸಂಘ ಸಂಸ್ಥೆಗಳಲ್ಲಿ ಬದಲಾವಣೆ ತರಬೇಕೆಂದು ಒತ್ತಾಯಿಸಿದರು. ವಿದ್ಯಾಭ್ಯಾಸ ಪದ್ಧತಿ ಮತ್ತು ಪರೀಕ್ಷಾ ಪದ್ಧತಿಯನ್ನು ಐರೋಪ್ಯರ ಮಾದರಿಯಲ್ಲಿ ಬದಲಾಯಿಸಲು ಆಗ್ರಹಿಸಿದರು. ಸೈನಿಕ ಮತ್ತು ನೌಕಾ ಬಲಗಳನ್ನು ಆಧುನೀಕರಣಗೊಳಿಸಿ ಐರೋಪ್ಯರನ್ನು ಹೊರದೂಡುವಂತೆ ಒತ್ತಾಯಿಸಿದರು. 19 ನೇ ಶತಮಾನ ಕೊನೆಯ ಭಾಗದಲ್ಲಿ ರಾಜಕೀಯ ಹಿಡಿತ ಕಳೆದುಕೊಂಡು ಮಂಚೂ ಚೀನಿ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸುಧಾರಣೆಗೆ ಒಪ್ಪಿಕೊಂಡಿತು. ಆದರೆ ಅರಮನೆಯ ವಾತಾವರಣದಲ್ಲಿ ರಾಜಕೀಯ ಕಲಹ ಪ್ರಾರಂಭವಾಗಿದ್ದು, ಸಾಮ್ರಾಟ ಕುವಾಂಗ್ ಸೂ ಮತ್ತು ಚಕ್ರವರ್ತಿನಿ ದವಾಜರ್ ತುಪ್ಸಿಯವರನ್ನು ಹಿಂಬಾಲಿಸಿದ ಎರಡು ಗುಂಪುಗಳಾದವು. ಮೊದಲಿಗೆ ಉತ್ತರದ ಬಣದವರು ಸಂಪ್ರದಾಯವಾದಿಗಳಾಗಿದ್ದು ಸಾಮ್ರಾಟನೊಡನಿದ್ದರೂ ಅಧಿಕಾರದಲ್ಲಿ ರಾಣಿ ಬಿಗಿ ಹಿಡಿತ ಹೊಂದಿದ್ದರಿಂದ ಅವಳ ಪರವಾಗಿ ನಿಂತರು. ದಕ್ಷಿಣದವರು ಸುಧಾರಣಾವಾದಿಗಳಾಗಿದ್ದು, ಬಿಕ್ಕಟ್ಟಿನಲ್ಲಿದ್ದ ಚೀನಾವನ್ನು ರಕ್ಷಿಸಲು ಮತ್ತು ಆಧುನಿಕರಣಗೊಳಿಸಲು ಸುಧಾರಣೆಗಳನ್ನು ಜಾರಿಯಲ್ಲಿ ತರುವಂತೆ ಸಾಮ್ರಾಟನನ್ನು ಒತ್ತಾಯಿಸಿದರು. ಕಾಂಗ್ ಯು ವೈ ಯುವ ಸುಧಾರಣವಾದಿಯಾಗಿದ್ದು, ಷಿಮನೋಸಕಿ ಒಪ್ಪಂದ ಷರತ್ತುಗಳನ್ನು ತೀಕ್ಷ್ಣವಾಗಿ ಟೀಕಿಸಿದ್ದನಲ್ಲದೆ, 1000 ಕ್ಕೂ ಹೆಚ್ಚಿನ ಕಿರಿಯ ವಿದ್ವಾಂಸರುಗಳು ಸಹಿ ಮಾಡಿದ್ದ ಭಿನ್ನವತ್ತಳೆಯನ್ನು ಸಾಮ್ರಾಟನಿಗೆ ಅರ್ಪಿಸಿ, ಜನತೆಯಿಂದ ಆರಿಸಲ್ಪಟ್ಟ ಸಲಹಾ ಮಂಡಲಿಯನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದನು. ನಂತರ ಅವನ ಬೆಂಬಲಿಗರು ಮೊದಲು ಸುಧಾರಣಾ ಕ್ಲಬ್‌ಗಳನ್ನು ಸ್ಥಾಪಿಸಿ, ಹಾಗೂ ಪೀಕಿಂಗ್‌ನ ರಾಷ್ಟ್ರೀಯ ರಕ್ಷಣಾ ಸಂಘ ಸ್ಥಾಪಿಸಿ ದೇಶವನ್ನು ವಿದೇಶಿಯರಿಂದ ರಕ್ಷಿಸಿಕೊಳ್ಳುವುದರ ಬಗ್ಗೆ ಕುರಿತು ಚರ್ಚಿಸಿ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲು ಪ್ರಯತ್ನ ನಡೆಸಿದ್ದರು.

ಕಾಂಗ್ ಯು ವೈ ಮತ್ತು ಅವನ ಬೆಂಬಲಿಗರು ಒಟ್ಟು ನಲವತ್ತು ಶಿಫಾರಸ್ಸುಗಳನ್ನು ಮಾಡಿದ್ದು, ಸರ್ಕಾರದಲ್ಲಿ ಅನಗತ್ಯವಾಗಿರುವ ಹುದ್ದೆಗಳನ್ನು ರದ್ದು ಮಾಡುವುದು, ಪರೀಕ್ಷಾ ಪದ್ಧತಿಯನ್ನು ಪಾಶ್ಚಾತ್ಯ ಮಾದರಿಯಲ್ಲಿ ಆಧುನೀಕರಣಗೊಳಿಸುವುದು ಮತ್ತು ಸೈನಿಕ ರಂಗದಲ್ಲಿ ಸುಧಾರಣೆ ತರುವುದಕ್ಕೆ ಒತ್ತಾಯಿಸಿದ್ದರು. ಸುಧಾರಣೆಗಳ ಜೊತೆಗೆ ಸಚಿವ ಸಂಪುಟವನ್ನು ಸ್ಥಾಪಿಸಲು ಸೂಚಿಸಿದ ಕಾಂಗ್ ಯು ವೈ ಬಣದವರು ಸರ್ಕಾರ 12 ವಿಭಾಗಗಳ ಆಡಳಿತವನ್ನು ಹೊಂದಲು ತಿಳಿಸಿದ್ದನು. 12 ವಿಭಾಗಗಳಾದ ಕಾನೂನು ಇಲಾಖೆ, ಕಂದಾಯ ಇಲಾಖೆ, ವಿದ್ಯಾಭ್ಯಾಸ ಇಲಾಖೆ, ವ್ಯವಸಾಯ ಇಲಾಖೆ, ಕಾಮಗಾರಿ ಇಲಾಖೆ, ವ್ಯಾಪಾರ ವಾಣಿಜ್ಯ ಇಲಾಖೆ, ರೈಲ್ವೆ ಇಲಾಖೆ, ಅಂಚೆ ಇಲಾಖೆ, ಗಣಿ ಉದ್ಯಮ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಸೈನ್ಯ ಇಲಾಖೆ, ಮತ್ತು ನೌಕಾ ಇಲಾಖೆಗಳನ್ನು ಐರೋಪ್ಯರ ಮತ್ತು ಜಪಾನೀಯರ ಮಾದರಿಯಲ್ಲಿ ಆಧುನೀಕರಣಗೊಳಿಸಲು ಒತ್ತಾಯಿಸಿದ್ದರು.

ಚೀನಿ ಪ್ರಭುತ್ವದ ಅರಮನೆಯ ವಾತಾವರಣದಲ್ಲಿ ಸುಧಾರಣೆಗಳ ವಿರೋಧಿಗಳಾಗಿದ್ದ ಸಂಪ್ರದಾಯವಾದಿಗಳು ರಾಣಿ ದವಾಜರ್ ತುಷ್ಟಿಯನ್ನು ಬೆಂಬಲಿಸಿಕೊಂಡು ಆಡಳಿತದಲ್ಲಿ ತಲೆ ಹಾಕಿ ಸಾಮ್ರಾಟ ಯೋಜನೆಗಳಿಗೆ ತೊಡಕಾದರು. ರಾಣಿ ಮತ್ತು ಉತ್ತರದ ಸಂಪ್ರದಾಯವಾದಿಗಳು ರಷ್ಯಾದ ಪರವಾದ ನಿಲುವನ್ನು ಸುಧಾರಣಾವಾದಿಗಳು ಜಪಾನಿನ ಆಧುನೀಕರಣದಿಂದ ಪ್ರಭಾವಿತರಾಗಿದ್ದು ಜಪಾನೀ ಪರವಾದ ನಿಲುವನ್ನು ಹೊಂದಿದ್ದರು. ಸುಧಾರಣಾವಾದಿಗಳು 1898 ರಲ್ಲಿ ಸರ್ಕಾರದ ಉನ್ನತ ಸಭೆಯಲ್ಲಿ ಪ್ರಾಬಲ್ಯ ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದ್ದರೂ, ಮತ್ತು ಈ ಸಭೆಯಲ್ಲಿನ ಹಿರಿಯ ಸಂಪ್ರದಾಯವಾದಿಗಳನ್ನು ಪದಚ್ಯುತರನ್ನಾಗಿ ಮಾಡಲು ಪ್ರಯತ್ನಿಸಿ ಸೋತರು. ಸುಧಾರಣೆವಾದಿಗಳ ಮತ್ತು ಸಂಪ್ರದಾಯವಾದಿಗಳ ನಡುವಿನ ಘರ್ಷಣೆ ಉಲ್ಬಣವಾಗಿ ಸಮಯವನ್ನು ದುರುಪಯೋಗ ಪಡಿಸಿಕೊಂಡ ರಾಣಿ ಪದಚ್ಯುತಗೊಳಿಸಲು ಒಳಸಂಚು ನಡೆಸಿದ್ದಳು. ಪ್ರತಿಯಾಗಿ ಸುಧಾರಣಾವಾದಿಗಳು ಸಾಮ್ರಾಟ್ ಕುವಾಂಗ್ ಸೋ ವನ್ನು ರಾಣಿಗಳನ್ನು ಶಿಕ್ಷಿಸುವಂತೆ ಸಾಮ್ರಾಟನನ್ನು ಒತ್ತಾಯಿಸಿ, ರಾಣಿ ಮತ್ತು ಅವಳ ಪರವಾಗಿದ್ದ ಜುಂಗ್ ಲೂವನ್ನು ಬಂಧಿಸಲು ಯೂ ಆನ್ ಷಿಕೈನನ್ನು ನಂಬಿದ್ದರು. ಆದರೆ ಮಹಾತ್ವಾಕಾಂಕ್ಷಿಯಾಗಿದ್ದ ಯಾ ಆನ್ ಸಾಮ್ರಾಟನನ್ನು ತೊರೆದ ರಾಣಿ ಪಂಗಡದವರೊಂದಿಗೆ ಸೇರಿ ಪೀಕಿಂಗ್ ಮೇಲೆ ದಂಡೆತ್ತಿ ಹೋದನು. ರಾಣಿ ತುಷ್ಟಿ ಕುವಾಂಗ್ ಸೋ ನ ಅನಾರೋಗ್ಯವ... ಮುಂದಿಟ್ಟುಕೊಂಡು ಆಸ್ಥಾನದ ವ್ಯವಹಾರಗಳನ್ನು ಮತ್ತು ಕೇಂದ್ರದ ಆಡಳಿತವನ್ನು ತನ್ನ ಹಿಡಿತಕ್ಕೊಳಪಡಿಸಿಕೊಂಡಳು. ಸಾಮ್ರಾಟನೂ ಜಾರಿಗೊಳಿಸಿದ ಸುಧಾರಣಾ ಶಾಸನಗಳನ್ನು ರದ್ದುಗೊಳಿಸಿ ಆಜ್ಞೆಯನ್ನು ಹೊರಡಿಸಿದಳು. ಕುವಾಂಗ್ ಸೋ ವನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಳು. ಸುಧಾರಣಾವಾದಿಗಳ ನಾಯಕರಾಗಿದ್ದ ಕಾಂಗ್ ಯು ವೈ ಮತ್ತು ಲಿಯಾಂಗ್ ಚಿ ಚಿಯೋ ದೇಶ ಬಿಟ್ಟು ಹೋಗಿ ಜಪಾನಿನಲ್ಲಿ ಆಶ್ರಯ ಪಡೆದು ಸುಧಾರಣಾ ಹೋರಾಟವನ್ನು ಮುಂದುವರೆಸಿದ್ದರು. ರಾಣಿ ಸಂಪ್ರದಾಯವಾದಿಗಳನ್ನು ಬೆಂಬಲಿಸಿದ ಪ್ರಮುಖ ಉನ್ನತಾಧಿಕಾರಿಗಳನ್ನು ನೀಡಿದಳು. ಸುಧಾರಣಾವಾದಿಗಳನ್ನು ಬೆಂಬಲಿಸಿದ ಅಧಿಕಾರಿಗಳನ್ನು ಹುದ್ದೆಗಳಿಂದ ವಜಾ ಮಾಡಿದಳು. ಹಾಗಾಗಿ ಆತುರವಾಗಿ ಜಾರಿಯಲ್ಲಿ ತಳಲು ಪ್ರಯತ್ನಿಸಿದ ಸುಧಾರಣಾವಾದಿಗಳ ಬೆಂಬಲಿತ ಸಾಮ್ರಾಟನ ಪ್ರಯತ್ನ ಅಧಿಕಾರದ ಹಿಡಿತದಲ್ಲಿನ ಸ ಕೊರತೆ, ರಾಣಿಯ ಕುತಂತ್ರ ಮತ್ತೆ ಯುವಾನ್ ಷಿಕೈನ ದ್ರೋಹದಿಂದಾಗಿ 100 ದಿವಸಗಳ ಸುಧಾರಣೆಗಳು ಚೀನಾದಲ್ಲಿ ವಿಫಲವಾದವು.

## 133.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

*I ಕೆಳಗಿನ ಪ್ರಶ್ನೆಗಳಿಗೆ 6 ಸಾಲುಗಳಲ್ಲಿ ಉತ್ತರಿಸಿ*

a) ಕುವಾಂಗ್ ಸೋ

b) ಸಂಪ್ರದಾಯವಾದಿಗಳು

c) 1000 ಸಹಿ ಪಡೆದ ಭಿನ್ನವತ್ತಳೆ

d) ಸುಧಾರಣಾ ಕ್ಲಬ್‌ಗಳು

*II ಕೆಳಗಿನ ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ*

a) ನೂರು ದಿವಸಗಳ ಸುಧಾರಣಾ ಚಳುವಳಿಯಲ್ಲಿರುವ ಕಾಂಗ್ ಯು ವೈ ಪಾತ್ರವನ್ನು ವಿವರಿಸಿ.

b) 100 ದಿವಸಗಳ ಸುಧಾರಣೆಯ ವಿರುದ್ಧದ ದವಾಜರ್ ತುಷ್ಟಿಯ ಕ್ರಮಗಳನ್ನು ಟೀಕಿಸಿ.

c) ಚೀನಾದ ಇತಿಹಾಸದಲ್ಲಿ ಸುಧಾರಣಾವಾದಿಗಳ ವಿಚಾರವಾದಗಳು ಮತ್ತು ಸಾಧನೆಯನ್ನು ವಿವರಿಸಿ.

*III ಕೆಳಗಿನವುಗಳಿಗೆ ಉತ್ತರ ಬರೆಯಿರಿ*

a) ನೂರು ದಿವಸಗಳ ಸುಧಾರಣೆಗೆ ಕಾರಣವಾದ ಅಂಶಗಳನ್ನು ಚರ್ಚಿಸಿರಿ.

b) ಚೀನಾದ ಇತಿಹಾಸದಲ್ಲಿ 1898 ರ 100 ದಿವಸದ ಸುಧಾರಣೆಗಳ ಪ್ರಾಮುಖ್ಯತೆಯನ್ನು ವಿವರಿಸಿ.

c) 100 ದಿವಸಗಳ ಸುಧಾರಣೆಗಳ ವಿಫಲತೆ ಕಾರಣಗಳನ್ನು ನೀಡಿ

## 133.10 ಹೆಚ್ಚಿನ ಅಧ್ಯಯನಕ್ಕೆ ಆಕರಗಳು


1. Bland E Backhouse : China under the European Dawager
2. R.S. Gupte : History of Modern China
3. Clyde & Beers The Far East


ಪ್ರೊ. ಷಡಕ್ಷರಯ್ಯ

# ಟಿಪ್ಪಣಿಗಳು

# ಘಟಕ - 134

## ಪಾಶ್ಚಾತ್ಯೀಕರಣ ಮತ್ತು ಪ್ರತಿಕ್ರಿಯೆ - ಬಾಕ್ಸರ್ ದಂಗೆ


134.0 ಧ್ಯೇಯೋದ್ದೇಶಗಳು

134.1 ಪೀಠಿಕೆ

134.2 ಪಾಶ್ಚಾತ್ಯೀಕರಣ ಮತ್ತು ಚೀನಾ

134.3 ಚೀನಿಯರ ಪ್ರತಿಕ್ರಿಯೆ

134.4 ಬಾಕ್ಸರ್ ದಂಗೆಯ ಕಾರಣಗಳು

134.5 ದಂಗೆಯ ಪ್ರಾರಂಭ ಮತ್ತು ಅದರ ಮುನ್ನಡೆ

134.6 ಬಾಕ್ಸರ್ ಒಪ್ಪಂದ ಅಥವಾ ಇತ್ಯರ್ಥ

134.7 ದಂಗೆಯ ವಿಫಲತೆಗೆ ಕಾರಣಗಳು ಮತ್ತು ಪರಿಣಾಮಗಳು

134.8 ಒಟ್ಟಾರೆ ಸಾರಾಂಶ ನೀಡುವ ಬನ್ನಿ

134.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

134.10 ಹೆಚ್ಚಿನ ಅಧ್ಯಯನಕ್ಕೆ ಆಕರಗಳು

## 134.0 ಧ್ಯೇಯೋದ್ದೇಶಗಳು

ಈ ಘಟಕದಲ್ಲಿ ನಾವು ಅಧ್ಯಯನ ಮಾಡುವ ಮತ್ತು ತಿಳಿಯಲಿರುವ ವಿಚಾರಗಳೆಂದರೆ ವ್ಯಾಪಾರೋದ್ದೇಶದಿಂದ ಚೀನಾದೊಳಗೆ ಪ್ರವೇಶಿಸಿದ ಪಾಶ್ಚಾತ್ಯರು ತಮ್ಮ ವ್ಯಾಪಾರಿ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವುದರ ಜೊತೆಗೆ ಧರ್ಮ ಪ್ರಸರಣಾ ನೀತಿ, ಪಾಶ್ಚಾತ್ಯ ಸಂಸ್ಕೃತಿ, ಭಾಷೆ ಮತ್ತು ಉದಾರ ನಿಲುವುಗಳ ಅರಿವನ್ನು ಚೀನಿಯರಲ್ಲಿ ಉಂಟು ಮಾಡಿದ್ದುದನ್ನು ನೀವು ಅಭ್ಯಾಸ ಮಾಡಲಿರುವಿರಿ. ಚೀನಾ ಪಾಶ್ಚಾತ್ಯರ ಜೊತೆ ಅಸಮ ಒಪ್ಪಂದಗಳನ್ನು ಮಾಡಿಕೊಂಡಿದ್ದು, ಆನಂತರದಲ್ಲಿ ಚೀನಾ ಜಪಾನ್ ಯುದ್ಧದಲ್ಲಿ ಚೀನಾ ಸೋತಿದ್ದು, ಪಾಶ್ಚಾತ್ಯರ ಭಾಷೆ, ನೀತಿ, ಅರಿವುಗಳನ್ನು ಚೀನಿ ಯುವ ಜನತೆ, ಚೀನಾದ ದುಃಸ್ಥಿತಿಗೆ ಮಂಚೂ ಪ್ರಭುತ್ವವೇ ಕಾರಣ ಎಂದೂ ಕೂಡ ಮನದಟ್ಟಾಗಿದ್ದು, ಶತಮಾನದ ಕೊನೆಯ ಅಂಚಿನ ವೇಳೆಗೆ ಬಾಕ್ಸರ್ ದಂಗೆ ನಡೆಯಿತು. ಈ ದಂಗೆ ಮೂಲತಹ ಮಂಚೂ ಪ್ರಭುತ್ವದ ವಿರುದ್ಧದ ಘರ್ಷಣೆಯಾಗಿದ್ದು, ನಂತರದಲ್ಲಿ ಪಾಶ್ಚಿಮಾತ್ಯರ ವಿರುದ್ಧ ಮತ್ತು ಪಾಶ್ಚಾತ್ಯ ಧರ್ಮದ ವಿರುದ್ಧದ ಹೋರಾಟವಾಗಿ ಪರಿಣಮಿಸಿತು. ಹಾಗಾಗಿ ಪಾಶ್ಚಾತ್ಯ ಅಧಿಕಾರಿಗಳು ಮಂಚೂ ದಂಗೆಯನ್ನು ಅಡಗಿಸಿದವು. ಈ ಎಲ್ಲ ವಿವರಗಳನ್ನು ನೀವು ಈ ಘಟಕದಲ್ಲಿ ಅಧ್ಯಯನ ಮಾಡುವಿರಿ. ನೀವು ಈ ಪಾಠವನ್ನು ಅಭ್ಯಾಸ ಮಾಡಿದ ನಂತರ ತಿಳಿಯಬಹುದಾದ ವಿವರಗಳೆಂದರೆ :

* ಪಾಶ್ಚಿಮಾತ್ಯರ ವ್ಯಾಪಾರಿ ಅವಶ್ಯಕತೆ ಮತ್ತು ವ್ಯವಹಾರಿಕ ನೀತಿ
* ಪಾಶ್ಚಿಮಾತ್ಯ ವಿದ್ಯಾಭ್ಯಾಸದ ಪ್ರಭಾವ
* ಧರ್ಮ ಪ್ರಸಾರಣ ನೀತಿ ಮತ್ತು ಚೀನಿಯರ ಮೇಲೆ ಅದರ ಪ್ರಭಾವ
* ಪಾಶ್ಚಾತ್ಯರ ಉದಾರ ನೀತಿ ಮತ್ತು ಚೀನಿಯರ ಪ್ರತಿಕ್ರಿಯೆ
* ಚೀನೀ ಶ್ರಮಿಕ ವರ್ಗದ ಪಾಶ್ಚಾತ್ಯ ಅನುಭವ
* ಚೀನಾ ಪುನರುಜ್ಜೀವನ ಸಂಘದ ಪಾತ್ರ
* ಬಾಕ್ಸರ್ ಅಥವಾ ಐಕ್ಯತೆಯುಳ್ಳ ಮುಷ್ಠಿ ಸಂಸ್ಥೆಯ ಸ್ಥಾಪನೆ ಮತ್ತು ಕಾರ್ಯ ಚಟುವಟಿಕೆಗಳು
* ಚಿಂಗ್‌ನ್ನು ರಕ್ಷಿಸಿ ಮತ್ತು ವಿದೇಶಿಯರನ್ನು ನಿರ್ನಾಮ ಮಾಡಿ ಘೋಷಣೆ
* ಪಾಶ್ಚಿಮಾತ್ಯ ಧರ್ಮ ನೀತಿ ಮತ್ತು ದಂಗೆಕೋರರ ಅತೃಪ್ತಿ
* ವಿದೇಶಿ ಸೈನ್ಯಗಳ ಪ್ರವೇಶ
* ಸಾಮ್ರಾಜ್ಯಷಾಹಿ ಪ್ರಭುತ್ವಗಳ ನಡುವಿನ ಸ್ಪರ್ಧೆ
* ಬಾಕ್ಸರ್ ದಂಗೆಯ ವಿಫಲತೆ ಮತ್ತು ಅದರ ಪರಿಣಾಮಗಳು

## 134.1 ಪೀಠಿಕೆ

19 ನೇ ಶತಮಾನದ ಕೊನೆಯಂಚಿನಲ್ಲಿ ನಡೆದ ಬಾಕ್ಸರ್ ದಂಗೆ ಒಂದು ಕ್ರಾಂತಿಕಾರಕ ಮತ್ತು ಜನಪರವಾದ ದಂಗೆಯಾಗಿತ್ತು. ದಂಗೆಯು ಚೀನಾದ ಪಾಶ್ಚಾತ್ಯೀಕರಣದ ಬೆಳವಣಿಗೆಗೆ ವಿರುದ್ಧವಾದ ಪ್ರತಿಕ್ರಿಯೆಯಾಗಿತ್ತು. ಈ ದಂಗೆ ಚೀನಾದಲ್ಲಿ ಮಂಚೂ ಪ್ರಭುತ್ವವನ್ನು ಕೊನೆಗಾಣಿಸಿ, ಜನತಂತ್ರ ವ್ಯವಸ್ಥೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿತ್ತು. ಹಾಗೂ ಚೀನಾವನ್ನು ಪಾಶ್ಚಿಮಾತ್ಯರ ಹಿಡಿತದಿಂದ ಬಿಡಿಸಿ, ಚೀನಾದ ಐಕ್ಯತೆಯನ್ನು ಉಳಿಸಲು ಹೋರಾಟ ನಡೆಸಿತು. ಬಾಕ್ಸರ್ ದಂಗೆಯ ಹುಟ್ಟಿನ ಬಗ್ಗೆ ನಿಖರವಾದ ಅಂಶಗಳು ಸ್ಪಷ್ಟವಿಲ್ಲದಿದ್ದರೂ, ಒಪಿಯಂ ಕದನಗಳ ನಂತರ ಚೀನಾ ಪಾಶ್ಚಿಮಾತ್ಯರಿಗೆ ತಲೆಬಾಗಿ, ಎಲ್ಲಾ ಐರೋಪ್ಯ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಚೀನಿ ರಾಜಕೀಯ ಅಸ್ತಿತ್ವ ಕುಸಿಯುತ್ತಾ ಹೋಗಿತು. ಈ ವೇಳೆಗಾಗಲೇ ಅಸ್ತಿತ್ವದಲ್ಲಿದ್ದ ಪಾಶ್ಚಿಮಾತ್ಯ ಅಧಿಕಾರಗಳು ಮತ್ತು ಅವುಗಳ ಜೊತೆಯಲ್ಲಿಯೆ ಕಾರ್ಯ ನಿರತವಾಗಿದ್ದ ಕ್ರೈಸ್ತ ಧರ್ಮ ಪಂಥಗಳು, ಪಾಶ್ಚಿಮಾತ್ಯ ಭಾಷೆ, ಸಂಸ್ಕೃತಿ ಮತ್ತು ಉದಾರವಾದಗಳನ್ನು ಚೀನಿ ಜನರಲ್ಲಿ ಬಿತ್ತಿದ್ದು, ಶತಮಾನಗಳಿಂದಲೂ ಏಕಾಂತತೆಯನ್ನು ಕಾಪಾಡಿಕೊಂಡು ಬಂದಿದ್ದ ಚೀನಿ ಪ್ರಭುತ್ವ ಮತ್ತು ವಿಚಾರವಂತಿಕೆ ಬದಲಾಗುವ ಹಾದಿ ಹಿಡಿದಿತ್ತು. ಅಫೀಮನ್ನು ಚೀನಿಯರಲ್ಲಿನ ದುರ್ಬಳಕೆಗೆ ಒತ್ತಾಸೆ ನೀಡಿದ ಪಾಶ್ಚಿಮಾತ್ಯರ ಬಗ್ಗೆ ಹಾಗೂ ಕ್ರೈಸ್ತ ಧರ್ಮ ಮತಾವಲಂಬನೆಯನ್ನು ಪ್ರಚೋದಿಸಿದ ಐರೋಪ್ಯರ ಬಗ್ಗೆ ಬೇಸರ ಹಾಗೂ ದ್ವೇಷದ

ಭಾವನೆಗಳು ಸಹ ಮಾಡಿದ್ದವು. ಆದರೆ ಜೊತೆ ಜೊತೆಯಲ್ಲಿಯೇ ಕ್ರೈಸ್ತ ಮಿಷನರಿಗಳು ಪ್ರಯತ್ನ ಚೀನಿ ಯುವ ಜನತೆಯ ಕಣ್ಣು ತೆರೆಯಿಸಿತ್ತು, ಯುವಕರು ಚೀನಾದ ದುರ್ಬಲ ಅಸ್ತಿತ್ವಕ್ಕೆ ಕಾರಣಗಳನ್ನು ಮನಗಂಡಿದ್ದರು. ಅಲ್ಲದೆ, ಮಂಚೂ ಪ್ರಭುತ್ವಕ್ಕೆ ಪಾಶ್ಚಿಮಾತ್ಯರ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಧೋರಣೆಗಳನ್ನು ತಡೆಯುವ ಶಕ್ತಿ ಇಲ್ಲವೆಂದರಿತ ಚೀನಿ ಜನತೆ, ಮಂಚೂ ಪ್ರಭುತ್ವವನ್ನು ನಿರ್ನಾಮಗೊಳಿಸುವ ಮತ್ತು ಚೀನಾದ ದುಃಸ್ಥಿತಿಗೆ ಕಾರಣವಾದ ವಿದೇಶಿಯರನ್ನು ಹೊರದೂಡುವ ಆಲೋಚನೆಯಲ್ಲಿ ತೊಡಗಿದ್ದರು. ಆ ಸಂದರ್ಭದಲ್ಲಿ 18 ನೇ ಶತಮಾನದಿಂದಲೂ ಮಂಚೂ ದ್ವೇಶವಾಗಿ ಬೆಳೆದು ಬಂದಿದ್ದು, ಮಂಚೂಗಳ ವಿರೋಧಿಗುಪ್ತ ಸಂಸ್ಥೆಯಾದ ಐಕ್ಯತೆಯುಳ್ಳ ಮುಷ್ಟಿ ಸಂಸ್ಥೆ, ಯುವ ಚೀನಿಯರ ಕಾರ್ಯ ಪ್ರಾಂಗಣವಾಗಿ ಪರಿಣಮಿಸಿತು. ಅಲ್ಲದೆ 19 ನೇ ಶತಮಾನದ ಮಧ್ಯ ಭಾಗದಲ್ಲಿ ವಿದೇಶಗಳಲ್ಲಿ ಸೇವೆ ಸಲ್ಲಿಸಿ ಶೋಷಣೆಗೆ ಗುರಿಯಾಗಿದ್ದ ಶ್ರಮಿಕ ವರ್ಗ ತಾಯ್ನಾಡಿಗೆ ಹಿಂತಿರುಗಿದ ನಂತರ ತಮ್ಮ ಅನುಭವಗಳ ಜೊತೆಗೆ ಅಲ್ಲಿನ ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಬೆಳವಣಿಗೆಗಳನ್ನು ಮತ್ತು ವಿಚಾರವಾದಗಳನ್ನು ಚೀನಿಯರಿಗೆ ತಿಳಿಸಿದರಲ್ಲದೆ ಅವರಲ್ಲಿ ಜಾಗೃತಿ ಮಾಡಿಸಿದರು. ಹಾಗಾಗಿ ಬಾಕ್ಸರ್ ದಂಗೆ ದೇಶಿಯ ಅಧಿಕಾರದ ವಿರುದ್ಧ, ಪಾಶ್ಚಿಮಾತ್ಯರ ವಿರುದ್ಧ ಮತ್ತು ಕ್ರೈಸ್ತ ಧರ್ಮದ ವಿರುದ್ಧದ ಬಂಡಾಯವಾಗಿ ಪರಿಣಮಿಸಿತು.

## 134.2 ಪಾಶ್ಚಾತ್ಯೀಕರಣ ಮತ್ತು ಚೀನಾ

19 ನೇ ಶತಮಾನದುದ್ದಕ್ಕೂ ವ್ಯಾಪಾರಿ ಲಾಭದ ಅಭಿಲಾಷಿಯಾದ ವಿದೇಶಿಯರು ಚೀನಾದಲ್ಲಿ ವ್ಯಾಪಾರದ ಹಿತಾಸಕ್ತಿಯ ಜೊತೆ ಪ್ರಾದೇಶಿಕ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುತ್ತಲೆ, ಹಲವಾರು ಭೂ ಭಾಗಗಳಲ್ಲಿ ತಮ್ಮ ಅಸ್ತಿತ್ವ ಮತ್ತು ಹಿಡಿತ ಸಾಧಿಸಿಕೊಂಡಿದ್ದರು. ಈ ಬೆಳವಣಿಗೆಯನ್ನು ಎದುರಿಸಿ ತಡೆಯುವಲ್ಲಿ ನಿಷ್ಫಲವಾದ ಮಂಚೂಗಳು ಒಪ್ಪಂದಗಳನ್ನು ಮಾಡಿಕೊಂಡು ದುರ್ಬಲ ಸ್ಥಿತಿಯನ್ನು ತಲುಪಿದ್ದರು ಮತ್ತು ಚೀನಿ ಪ್ರಜೆಗಳ ವಿಶ್ವಾಸವನ್ನು ಕೂಡ ಕಳೆದು ಕೊಂಡಿದ್ದರು. ಆಗಿಂದಾಗ್ಗೆ ನಡೆದ ಯುದ್ಧಗಳಲ್ಲಿ ಆಧುನಿಕ ತಂತ್ರ ಕೌಶಲ್ಯವನ್ನು ಹೊಂದಿದ್ದ ವಿದೇಶಿ ಸೈನ್ಯಗಳು ದುರ್ಬಲ ಹಾಗೂ ಸಾಂಪ್ರದಾಯಿಕ ಸೈನ್ಯವನ್ನು ಸೋಲಿಸಿ, ಹೆಚ್ಚು ಹೆಚ್ಚು ವ್ಯಾಪಾರಿ ಮತ್ತು ಪ್ರಾದೇಶಿಕ ಸವಲತ್ತುಗಳನ್ನು ಪಡೆದುಕೊಂಡಿದ್ದರು ಮತ್ತು ಮಂಚೂಗಳು ಹಾಗೂ ದೇಶೀಯರನ್ನು ಹೀನಾಯವಾಗಿ ನಡೆಸಿಕೊಂಡಿದ್ದರು. ಅಫೀಮು ಯುದ್ಧಗಳಲ್ಲಿ ಸೋತು ತೈಪಿಂಗ್ ದಂಗೆಯನ್ನು ಅಡಗಿಸುವಲ್ಲಿ ಅಶಕ್ತರಾದ ಮಂಚೂಗಳು ವಿದೇಶಿಯರು ದಂಗೆ ಹಡಗಿಸಲು ಅವಕಾಶ ಕಲ್ಪಿಸಿದ್ದರಲ್ಲದೆ, ಆನಂತರದಲ್ಲಿ ಎಲ್ಲ ವಿಚಾರದಲ್ಲೂ ತಲೆನೋವಾಗಿದ್ದ ವಿದೇಶಿಯರನ್ನು ಚೀನಾದಿಂದ ಹೊರ ಹಾಕಲು ಯಾವುದೇ ರೀತಿಯಾದ ಪ್ರಯತ್ನಕ್ಕೂ ಮಂಚೂ ಪ್ರಭುತ್ವ ಸಿದ್ಧವಾಗಿತ್ತು.

ಪಾಶ್ಚಾತ್ಯ ರಾಷ್ಟ್ರಗಳಾದ ಆಸ್ಟ್ರಿಯ, ಫ್ರಾನ್ಸ್, ಜರ್ಮನಿ, ಗ್ರೇಟ್ ಬ್ರಿಟನ್, ಇಟಲಿ, ರಷ್ಯ ಮತ್ತು ನೆರೆ ರಾಷ್ಟ್ರವಾದ ಜಪಾನ್ ಕೂಡ ಸೇರಿದಂತೆ ಎಲ್ಲ ರಾಷ್ಟ್ರಗಳು ಚೀನಾದಲ್ಲಿ ಹಿತಾಸಕ್ತಿಗಳನ್ನು ಬೆಳೆಸಿಕೊಂಡಿದ್ದರು. ಅಲ್ಲದೆ ಚೀನಾದಲ್ಲಿ ಪ್ರಭಾವಿ ವಲಯಗಳನ್ನು ಬೆಳೆಸಿಕೊಂಡು ಚೀನೀ ಪ್ರದೇಶಗಳನ್ನು ಕಬಳಿಸಿಕೊಳ್ಳುವ ಹವಣಿಕೆಯಲ್ಲಿದ್ದರು. ಫಿಲಿಫೈನ್ಸ್‌ನ್ನು ವಶಪಡಿಸಿಕೊಂಡಿದ್ದ ಅಮೆರಿಕಾ ಕೂಡ ಚೀನಾದಲ್ಲಿ ಆಸಕ್ತಿ ತಳೆದು ತೆರೆದ ಬಾಗಿಲ ನೀತಿಯನ್ನು ಜಾರಿಯಲ್ಲಿ ತರುವ ಮೂಲಕ ಪಾಶ್ಚಾತ್ಯರು ಚೀನಾವನ್ನು ಹರಿದು ಹಂಚಿಕೊಳ್ಳುವ ಪ್ರಯತ್ನಕ್ಕೆ ತಡೆಹಾಕಿದ್ದರು.

ಚೀನಾದಲ್ಲಿ ಹಿತಾಸಕ್ತಿಗಳನ್ನೊಂದಿದ್ದ ಅಧಿಕಾರಿಗಳನ್ನು ವಿದೇಶಿಯರು ಸ್ಥಾಪಿಸಿಕೊಂಡಿದ್ದು, ಆ ವೇಳೆಗಾಗಲೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ರಾಜಕೀಯ ಬೆಳವಣಿಗೆಗಳು ಮತ್ತು ವಿಚಾರವಾದಗಳು ಚೀನಿಯರ ಮೇಲೂ ಪ್ರಭಾವ ಬೀರಿದ್ದವು. ಚೀನಿ ಅಧಿಕಾರ ವಲಯದಲ್ಲಿ ಮತ್ತು ಬೌದ್ಧಿಕ ವರ್ಗದಲ್ಲಿ ಪಾಶ್ಚಾತ್ಯರ ಅನುಕರಣೆಯ ಬಗ್ಗೆ ಭಿನ್ನ ಅಭಿಪ್ರಾಯಗಳಿದ್ದು, ಅವರಲ್ಲಿ ಎರಡು ಗುಂಪುಗಳಿದ್ದವು. ಒಂದು ಗುಂಪು ಕ್ರಾಂತಿಕಾರಕ ಬದಲಾವಣೆಗಳನ್ನು ಮತ್ತೊಂದು ಗುಂಪು ಸುಧಾರಣೆ ಮೂಲಕ ಬದಲಾವಣೆಗಳನ್ನು ಬಯಸಿದ್ದವು. ಅರಮನೆಯ ವಾತಾವರಣದಲ್ಲಿ ಕೂಡ ಒಡಕಿದ್ದು, ಚಕ್ರವರ್ತಿನಿ ರಾಣಿ ತ್ಸುಷೀಯ ಪರವಾದ ಸುಧಾರಣಾವಾದಿಗಳ ಗುಂಪು ಸಾಂಪ್ರದಾಯಿಕ ನಿಲುವನ್ನು ಹೊಂದಿದ್ದಿತು ಮತ್ತೊಂದು ಗುಂಪು ಸಾಮ್ರಾಟ ಕುವಾಂಗ್ ಸೋ ಜೊತೆಗೂಡಿದ ಸುಧಾರಣಾವಾದಿಗಳು ನೂರು ದಿವಸಗಳ ಸುಧಾರಣಾ ಪ್ರಯತ್ನವನ್ನು ಕೂಡ ನಡೆಸಿ ಸೋತಿದ್ದರು. ಹಾಗಾಗಿ ಚೀನಿ ಪಾಶ್ಚಾತ್ಯೀಕರಣ ಆಳುವ ಪ್ರಭುತ್ವಕ್ಕೆ ಸವಾಲಾಗಿದ್ದು, ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿತ್ತು. ಆದರೆ, ಪಾಶ್ಚಾತ್ಯರ ಪ್ರಭಾವ, ಯುವ ಚೀನಿಯರಲ್ಲಿ ಅಸಮಾಧಾನ ಮೂಡಿಸಿದ್ದು, ಹೊರಗಿನ ರಾಜಕೀಯ ಬೆಳವಣಿಗೆಯನ್ನು ಗಮನಿಸಿದ್ದ ಚೀನಿ ಜನತೆ ಕೂಡ ಕ್ರಾಂತಿಯ ಅಥವಾ ಬಂಡಾಯದ ದಾರಿ ಹಿಡಿದಿತ್ತು.

## 134.3 ಚೀನಿಯರ ಪ್ರತಿಕ್ರಿಯೆ

ಶತ ಶತಮಾನಗಳಿಂದಲೂ ಏಕಾಂತತೆಯನ್ನು ಕಾಪಾಡಿಕೊಂಡು ಬಂದಿದ್ದ ಚೀನಾ ಅಫೀಮು ಯುದ್ಧಗಳಿಂದಾಗಿ, ಟೈನ್‌ಟ್ಸೀನ್ ಮತ್ತು ಪೀಕಿಂಗ್ ಒಪ್ಪಂದಗಳನ್ನು ಮಾಡಿಕೊಂಡಿದ್ದು, ಪಾಶ್ಚಾತ್ಯರ ವಿಚಾರಗಳು ಮತ್ತು ವಸ್ತುಗಳು ತಮಗೆ ಇಚ್ಛೆಯಿಲ್ಲದಿದ್ದರೂ

ಒಪ್ಪಿಕೊಂಡಿತು. ಇದರಿಂದ ಚೀನಾದ ಪ್ರತ್ಯೇಕತೆ ಕೊನೆಗೊಂಡು ವಿದೇಶಗಳೊಂದಿಗೆ ಅದರ ಸಂಪರ್ಕ ಹೆಚ್ಚಾಯಿತು ಮತ್ತು ಚೀನಾದ ಲೂಟಿಯಲ್ಲಿ ವಿದೇಶಿಯರಲ್ಲಿ ಪೈಪೋಟಿಯು ಪ್ರಾರಂಭವಾಯಿತು. ಪರಿಣಾಮವಾಗಿ, ಚೀನಿ ಜನಸಾಮಾನ್ಯರಲ್ಲಿ ಸಂಗ್ರಹಿತವಾಗಿದ್ದ ಅತೃಪ್ತಿ ಮತ್ತು ಅಸಮಾಧಾನಗಳು ಹೆಚ್ಚಾಗಿದ್ದವು. ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳಲ್ಲೂ ದುರ್ಬಲವಾಗುತ್ತಾ ಬಂದ ಮಂಚೂ ಪ್ರಭುತ್ವ ಚೀನಿಯರಲ್ಲು ಹೆಚ್ಚಿನ ಅಸಮಾಧಾನಕ್ಕೆ ದಾರಿ ಮಾಡಿಕೊಟ್ಟಿತು. ಹಂಗ್-ಸ್ಯೊ-ಚುವಾನ್ ಸ್ಥಾಪಿಸಿದ ದೇವರ ಆರಾಧಕರ ಸಂಘ 1850 ರ ವೇಳೆಗೆ 30,000 ಅನುಯಾಯಿಗಳನ್ನು ಹೊಂದಿದ್ದು, ಸರ್ಕಾರದ ವಿರುದ್ಧ ದಂಗೆಯೆದ್ದಿತು. ಹಂಗ್ ನಾಯಕತ್ವವನ್ನು ವಹಿಸಿ ಸ್ವರ್ಗೀಯ ರಾಜ್ಯದ ಸ್ಥಾಪನೆ (Heavenly Kingdom of Great Peace) ಮಾಡಿ ಮಂಚೂಗಳ ವಿರುದ್ಧ ಯುದ್ಧ ಸಾರಿದನು. ಕ್ರೈಸ್ತ ಮಿಷನರಿಗಳನ್ನು ಕೋರರು ತೊಂದರೆ ಮಾಡಿದ ಕಾರಣವನ್ನು ಬಳಸಿಕೊಂಡ ಐರೋಪ್ಯರು ಮಂಚೂ ಸಂತತಿಯವರ ರಕ್ಷಣೆಗಾಗಿ ದಂಗೆ ಕೋರರ ವಿರುದ್ಧ ಯುದ್ಧ ಸಾರಿ ಮಂಚೂ ಸೈನ್ಯದೊಡನೆ ಸೇರಿ ದಂಗೆಯನ್ನು ಅಡಗಿಸಿತು. ಹಾಗಾಗಿ ತೈಪಿಂಗ್ ದಂಗೆಯೂ ಮಂಚೂ ಸಂತತಿಯ ಅವನತಿಯ ಸೂಚಕವು ಆಗಿದ್ದಿತು ಮತ್ತು ಈ ದಂಗೆಯು ಮಂಚೂಗಳ ಅವನತಿಯನ್ನು ತ್ವರಿತಗೊಳಿಸಿತು.

## 134.4 ಬಾಕ್ಸರ್ ದಂಗೆಯ ಕಾರಣಗಳು

ರಾಜಕೀಯವಾಗಿ ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಪಾಶ್ಚಾತ್ಯರ ಹಿಡಿತಕ್ಕೆ ಒಳಗಾದ ಚೀನಿ ಪ್ರಭುತ್ವ ಕ್ಷೀಣಿಸುತ್ತಾ ಬಂದಿದು. 19 ನೇ ಶತಮಾನದ ಕೊನೆಯ ವೇಳೆಗೆ ಚೀನಿಯರಲ್ಲಿ ಅತೃಪ್ತಿ ಮತ್ತು ಅಸಮಾಧಾನಗಳು ಹೆಚ್ಚಿದ್ದವು. ಬಾಕ್ಸರ್ ದಂಗೆಗೆ ಹಲವು ಕಾರಣಗಳಿದ್ದವು. ಮೊದಲಿಗೆ ಚೀನಾವನ್ನು ಐರೋಪ್ಯರು ಕ್ರಮಬದ್ಧವಾಗಿ ಶೋಷಿಸುತ್ತಿದ್ದು ಚೀನಾ ಭಾಗಶಃ ವಸಾಹತು ಸ್ಥಿತಿಯನ್ನು ತಲುಪಿತ್ತು. ಚೀನಾವನ್ನು ಹರಿದು ಹಂಚಿಕೊಳ್ಳುವ ಪ್ರಯತ್ನವು ನಡೆದಿತ್ತು. ಪ್ರಭಾವಿ ವಲಯಗಳನ್ನು ಸ್ಥಾಪಿಸಿಕೊಂಡ ಐರೋಪ್ಯ ರಾಷ್ಟ್ರಗಳು ರಷ್ಯ ಮತ್ತು ಜಪಾನ್ ಸೇರಿದಂತೆ ಚೀನಾದ ಭಾಗಗಳಲ್ಲಿ ಆಧಿಪತ್ಯ ಸಾಧಿಸಿಕೊಂಡಿದ್ದು, ಜನತೆಯಲ್ಲಿ ವಿದೇಶಿಯರ ವಿರುದ್ಧ ಹಗೆತನ ಬೆಳೆಯಲು ಕಾರಣವಾಯಿತು.

ಎರಡನೆಯದಾಗಿ, ಚೀನಾ-ಜಪಾನ್ ಯುದ್ಧದ ನಂತರ ಸುಧಾರಣೆವಾದಿಗಳು ಮತ್ತು ಸಂಪ್ರದಾಯವಾದಿಗಳು ಪರ ಮತ್ತು ವಿರೋಧ ಚಟುವಟಿಕೆಯಲ್ಲಿ ತೊಡಗಿದ ಕಾರಣ ಸುಧಾರಣೆ ವಿಫಲವಾಗಿದ್ದವು. ಮಂಚೂ ಪ್ರಭುತ್ವ ವಿದೇಶಿಯಾಗಿದ್ದು, ಚೀನಿ ಜನತೆ ಅವರ ವಿರುದ್ಧದ ಭಾವನೆಗಳನ್ನು ಹೊಂದಿತ್ತು.

ಮೂರನೆಯದಾಗಿ ದುರ್ಬಲಗೊಂಡಿದ್ದ ಮಂಚೂ ಪ್ರಭುತ್ವ ಚೀನಿಯರಲ್ಲಿ ನಂಬಿಕೆಯನ್ನು ಮತ್ತು ಜನಪ್ರಿಯತೆಯನ್ನು ಗಳಿಸುವ ಉದ್ದೇಶದಿಂದ ಸುಧಾರಣಾ ಪ್ರಯತ್ನವನ್ನು ಮಾಡಿತ್ತು. ಅಲ್ಲದೆ ಅಧಿಕಾರದಲ್ಲಿ ಹೆಚ್ಚಿನ ಪ್ರಭಾವವನ್ನು ಸಾಧಿಸಿದ್ದ ಚಕ್ರವರ್ತಿನಿ ರಾಣಿ ದವಾಜರ್ ತ್ಸು ಷಿ ಬಲವಂತವಾಗಿ ಅಧಿಕಾರದಲ್ಲಿ ಹಸ್ತಕ್ಷೇಪಮಾಡಿ ಪ್ರತಿಗಾಮಿಗಳು ಮತ್ತು ಸಾಂಪ್ರದಾಯವಾದಿಗಳ ಪರವಹಿಸಿ ಸುಧಾರಣಾವಾದಿಗಳನ್ನು ತುಳಿದು ಹಾಕಿದಳು. ಅಲ್ಲದೆ ಪಾಶ್ಚಾತ್ಯೀಕರಣ ಮತ್ತು ಸುಧಾರಣೆಗಳನ್ನು ವಿರೋಧಿಸಿದ ಸಂಪ್ರದಾಯವಾದಿಗಳಾದ ಜುಂಗ್-ಲೂ ಮತ್ತು ಯು ಆನ್ ಷಿ ಕೈ ನಂತರವನ್ನು ಬೆಂಬಲಿಸಿ, ವಿದೇಶಿಯರ ವಿರುದ್ಧ ಯುವ ಚೀನಿಯರನ್ನು ಉತ್ತೇಜಿಸಿದಳು. ದುರ್ಬಲ ಮಂಚೂ ಪ್ರಭುತ್ವದ ವಿರುದ್ಧದ ಚೀನಿಯರನ್ನು ವಿದೇಶಿಯರ ವಿರುದ್ಧದೆಡೆಗೆ ನೂಕುವುದೇ ಅವಳ ಉದ್ದೇಶವಾಗಿತ್ತು. ಬಾಕ್ಸರ್ ದಂಗೆ ಪ್ರಾರಂಭಿಸಿದಾಗ ಪರಿಸ್ಥಿತಿಯನ್ನು ಬಳಸಿಕೊಂಡ ರಾಣಿ ದಂಗೆಕೋರರ ಜೊತೆ ಕೈ ಜೋಡಿಸಿದಳು.

ಕೊನೆಯದಾಗಿ ದೇಶಿಯ ಚೀನಿಯರು ವಿದೇಶಿ ಕ್ರೈಸ್ತ ಮಿಷನರಿಗಳ ವಿರುದ್ಧ ದ್ವೇಷ ಭಾವನೆಯನ್ನು ಬೆಳೆಯಿಸಿಕೊಂಡಿದ್ದು, ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯ ಕ್ರೈಸ್ತ ಮಿಷನರಿಗಳ ಧರ್ಮ ಪ್ರಸರಣಾ ಕಾರ್ಯವನ್ನು ವಿರೋಧಿಸಿದರು. ಮತಾಂತರಗೊಂಡ ಚೀನಿಯರು ಕೆಲವು ಸವಲತ್ತುಗಳನ್ನು ಹೊಂದಿದ್ದು, ಅವರು ಚೀನಿ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅನಾದಾರಣೆ ಹೊಂದಿದ್ದರು. ಯುವ ಚೀನಿಯರಲ್ಲಿ ಈ ಮತಾಂತರಿಗಳ ಬಗ್ಗೆ ಅಸೂಯೆ, ದ್ವೇಶ ಮತ್ತು ಅಸಮಾಧಾನಗಳು ಮೂಡಿ ಚೀನಿಯರು ವಿದೇಶಿಯರ ವಿರುದ್ಧ ತಿರುಗಿ ಬೀಳುವಂತೆ ಮಾಡಿದವು.

## 134.5 ದಂಗೆಯ ಪ್ರಾರಂಭ ಮತ್ತು ಮುನ್ನಡೆ

ಮಂಚೂ ಪ್ರಭುತ್ವದ ಬಗ್ಗೆ ಅತೃಪ್ತ ಮತ್ತು ಅಸಮಾಧಾನಗಳು, ವಿದೇಶಿಯರ ಬಗ್ಗೆ ದ್ವೇಶಾಸೂಯೆಗಳು ಮತ್ತು ಕ್ರೈಸ್ತ ಮಿಷನರಿಗಳ ನಡವಳಿಕೆಗಲು ಚೀನಿಯರು ದಂಗೆ ಹೇಳಲು ಪ್ರಚೋದಿಸಿದ್ದವು. ಬಾಕ್ಸರ್ ಅಥವಾ ಐಕ್ಯತೆಯುಳ್ಳ ಮುಷ್ಟಿ ಸಂಸ್ಥೆ ಮೂಲತಃ ಮಂಚೂಗಳ ವಿರೋಧಿ ಗುಪ್ತ ಸಂಸ್ಥೆಯಾಗಿದ್ದು, 1899 ರ ವೇಳೆಗೆ ಹೋರಾಟ ಅಥವಾ ದಂಗೆ ಪ್ರಾರಂಭಿಸಿದರು. 19 ನೇ ಶತಮಾನದ ಅಂತ್ಯದ ವರ್ಷಗಳಲ್ಲಿ ಚೀನಾದ ಶೋಷಣೆಯಲ್ಲಿ ತೊಡಗಿದ್ದ ವಿದೇಶಿಯರನ್ನು ದೇಶದಿಂದ ಹೊರಗಟ್ಟುವ ಸಲುವಾಗಿ ಷಾಂಟುಂಗ್ ಪ್ರಾಂತ್ಯದ ಹಳ್ಳಿಗಳನ್ನು ಕೇಂದ್ರವನ್ನಾಗಿ ಮಾಡಿಕೊಂಡು ಈ ಸಂಸ್ಥೆ ಚಟುವಟಿಕೆಗಳನ್ನು ಪ್ರಾರಂಭಿಸಿತು. ಹಂಗಾ ಟಿಂಗ್ ಎಂಬುವನು ಈ ಸಂಸ್ಥೆಯ ನಾಯಕನಾಗಿದ್ದು, 1897-99 ರ ಅವಧಿಯಲ್ಲಿ ಜರ್ಮನ್ನರು ಷಾಂಟುಂಗ್ ಪ್ರದೇಶದಲ್ಲಿ ಮಾಡಿದ

ರಾಜಕೀಯ ಮತ್ತು ಆರ್ಥಿಕ ಆಕ್ರಮಣಗಳ ವಿರುದ್ಧ ಸಿಡಿದೆದ್ದು "ಚಿಂಗ್‌ನ್ನು ರಕ್ಷಿಸಿ ಮತ್ತು ವಿದೇಶಿಯರನ್ನು ನಿರ್ನಾಮ ಮಾಡಿ" ಎಂಬ ಘೋಷಣೆಯನ್ನು ಹೊರಡಿಸಿ ಚೀನಿಯರನ್ನು ಎಚ್ಚರಿಸಿದನು. ಷಾಂಟುಂಗ್ ಪ್ರಾಂತ್ಯದ ಗೌವರ್ನರ್ ಆಗಿದ್ದ ಯುಸೀಯಾನ್ ಬಾಕ್ಸರ್‌ಗೆ ತನ್ನ ಬೆಂಬಲ ನೀಡಿದನು. ಅಲ್ಲದೆ ಸೀಯಾನ್‌ಗಿಂತ ಮೊದಲು ಲಿ ಪಿಂಗ್-ಹಂಗ್ ಗೌವರ್ನರ್ ಆಗಿದ್ದು, ಅವನ ಕಾಲದಲ್ಲಿ ಷಾಂಟುಂಗ್‌ನಲ್ಲಿ 1897 ರಲ್ಲಿ ಇಬ್ಬರು ಜರ್ಮನ್ ಮಿಷನರಿಗಳು ಕೊಲೆ ಮಾಡಲ್ಪಟ್ಟ ಕಾರಣಕ್ಕಾಗಿ ಜರ್ಮನ್ನರ ಒತ್ತಾಯದ ಮೇರೆಗೆ ಮಂಚೂ ಸರ್ಕಾರವು ಗೌವರ್ನರನ್ನು ಕೆಲಸದಿಂದ ವಜಾ ಮಾಡಿತ್ತು. ಹಾಗಾಗಿ ಪ್ರಾಂತ್ಯಾಧಿಕಾರಿಯ ಬೆಂಬಲ ಪಡೆದ ದಂಗೆಕೋರರು ಆಕ್ರಮಣ ಪ್ರಾರಂಭಿಸಿದರು. ನಂತರ ಈ ದಂಗೆ ಛ್ಲಿಲಿ, ಷನ್ಸಿ ಮತ್ತು ದಕ್ಷಿಣ ಮಂಚೂರಿಯಾಕ್ಕೂ ಹಬ್ಬಿತು. ಪೀಕಿಂಗ್‌ನಲ್ಲಿದ್ದ ಫ್ರೆಂಚ್ ರಾಯಭಾರಿಯ ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿ ಷಾಂಟುಂಗ್‌ನ ಗೌವರ್ನರ್ ಯು-ಸಿಯೇನ್ ಪದಚ್ಯುತನನ್ನಾಗಿ ಮಾಡಬೇಕೆಂದು ಮಂಚೂ ಪ್ರಭುತ್ವದ ಮೇಲೆ ಒತ್ತಾಯ ಹೇರಿತು. ಒತ್ತಾಯಕ್ಕೆ ಮಣಿದ ಮಂಚೂಗಳು ಯು-ಸಿಯೋನ್‌ನ್ನು ಪೀಕಿಂಗ್‌ಗೆ ಕರೆಯಿಸಿಕೊಂಡು ಅವನ ಸ್ಥಾನದಲ್ಲಿ ಯು-ಆನ್ ಷಿ ಕೈನನ್ನು ನೇಮಿಸಿತು. ಯು-ಆನ್ ಷಿಕೈ ಷಾಂಟುಂಗ್‌ನಲ್ಲಿ ಬಾಕ್ಸರ್ ದಂಗೆಕಾರರನ್ನು ಕಠಿಣ ಕ್ರಮಗಳಿಂದ ಹತ್ತಿಕ್ಕಿ. ` ಮತ್ತು ನಾಯಕನಾದ ಚು ಹಂಗ್-ಟಿಂಗ್ ನನ್ನು ಬಂಧಿಸಿ ಗಲ್ಲಿಗೇರಿಸಿದನು.

ಬಾಕ್ಸರ್ ದಂಗೆಯು ವಿದೇಶಿಯರಿಗಿಂತಲೂ ಹೆಚ್ಚಾಗಿ ಕ್ರೈಸ್ತ ಮತಕ್ಕೆ ಮತಾಂತರಗೊಂಡಿದ್ದ ದೇಶಿಯ ಚೀನಿಯರ ವಿರುದ್ಧ ನಡೆದ ದಂಗೆಯೂಗಿತ್ತು. ಮತಾಂತರಗೊಂಡಿದ್ದ ಚೀನಿಯರನ್ನು ದೇಶದ್ರೋಹಿಗಳೆಂದು ಪರಿಗಣಿಸಿ ಅವರನ್ನು ಸಾಮಾಜಿಕವಾಗಿ ಬಹಿಷ್ಕರಿಸಲಾಯಿತು. ಕ್ರೈಸ್ತ ಮಿಷನರಿಗಳ ಧರ್ಮ ಪ್ರಸರಣಾ ಚಟುವಟಿಕೆಗಳನ್ನು ವಿರೋಧಿಸಿ, ಚೀನಿ ಸಂಸ್ಕೃತಿಯನ್ನು ಹಳಿದು ಹೊಸ ಹೊಸ ಧಾರ್ಮಿಕ ಸಂಪ್ರದಾಯಗಳನ್ನು ಚೀನಿಯರಲ್ಲಿ ಬಿತ್ತುತ್ತಿದ್ದರೆಂದು ಆರೋಪಿಸಿದರು. ಮತಾಂತರಿಗಳ ನಡವಳಿಕೆ ಚೀನಿಯರನ್ನು ರೊಚ್ಚಿಗೆಬ್ಬಿಸಿದವು. ದಂಗೆಕಾರರ ಅತೃಪ್ತಿಯ ಕಿಡಿ 1900 ರ ಆರಂಭದಲ್ಲಿ ಪೀಕಿಂಗ್‌ನಲ್ಲೂ ಕಾಣಿಸಿಕೊಂಡಿತು. ಪೀಕಿಂಗ್‌ನಲ್ಲಿದ್ದ ವಿದೇಶಿ ರಾಯಭಾರಿಗಳು ದಂಗೆಕೋರರ ಚಟುವಟಿಕೆಗಳ ವಿರುದ್ಧ ಪ್ರತಿಭಟನೆ ಸಲ್ಲಿಸಿದಾಗ್ಯೂ ರಾಣಿ ತ್ಸುಷಿಯು ದಂಗೆಕೋರರಿಗೆ ಸಹಾನುಭೂತಿ ತೋರಿಸಿದ್ದಳು ಹಾಗೂ ವಿದೇಶಿ ಆಕ್ರಮಣಕಾರರ ವಿರುದ್ಧ ಹೋರಾಡುವ ದೇಶಿಯರಿಗೆ ಬೆಂಬಲ ನೀಡುವಂತೆ ಗೌವರ್ನರ್ ಮತ್ತು ವೈ..ಾಯ್‌ಗಳಿಗಂ ಆದೇಶ ನೀಡಿದ್ದಳು. ರಾಣಿಯ ಬೆಂಬಲ ಪಡೆದಿದ್ದ ದಂಗೆ ತ್ವರಿತವಾಗಿ ಹಬ್ಬಿದ್ದು, ದಂಗೆಕೋರರು ದೇಶಿಯ ಕ್ರಿಶ್ಚಿಯನ್ನರ ಜೊತೆ ಅನೇಕ ವಿದೇಶಿಯರನ್ನು ಕೊಲೆಗೈದರು. ಈ ಸಂದರ್ಭದಲ್ಲಿ ದಂಗೆಯ ಉದ್ದೇಶ ಮತ್ತು ಮಂಚೂಗಳ ನೀತಿಯೇನು ಎಂಬುದು ವಿದೇಶಿ ರಾಯಭಾರಿಗಳಿಗೆ ಸ್ಪಷ್ಟವಾಗಿರಲಿಲ್ಲ.

ವಿದೇಶಿ ವ್ಯವಹಾರಗಳ ಮುಖ್ಯಸ್ಥನೂ ಹಾಗೂ ತುಷ್ಕಿಯ ಬೆಂಬಲಿಗನು ಆಗಿದ್ದ ತು ಆನ್ ಸಿಂಹಾಸನಕ್ಕೆ ಕುವಾಂಗ್ ಸೋ ನ ಉತ್ತರಾಧಿಕಾರಿಯಾಗಿ ಆರಿಸಲಿದ್ದ ರಾಜಕುಮಾರನ ತಂದೆಯೂ ಆಗಿದ್ದನು. ಅಲ್ಲದೆ, ತು ಆನ್ ಬಾಕ್ಸರ್ ದಂಗೆಕೋರರ ಪ್ರಬಲ ಬೆಂಬಲಿಗನಾಗಿದ್ದನು. ಸಿಂಹಾಸನಕ್ಕೆ ಉತ್ತರಾಧಿಕಾರಿಯ ಹೆಸರನ್ನು 1900 ರ ಜನವರಿ ?4 ರಂದು ಪ್ರಕಟಿಸಲಾಯಿತು. ಈ ಸಂದರ್ಭದಲ್ಲಿ ವಿದೇಶಿ ರಾಯಭಾರಿಗಳಾರು ಅಭಿನಂದನೆ ಸಂದೇಶವನ್ನು ಕಳುಹಿಸದಿದ್ದಾಗ ಸಂಪ್ರದಾಯವಾದಿಗಳು ಚಕ್ರವರ್ತಿ ಕುವಾಂಗ್-ಸೋನನ್ನು ಪದಚ್ಯುತಗೊಳಿಸುವ ತಮ್ಮ ಯೋಜನೆಯನ್ನು ಮುಂದೂಡಿದರು. ತನ್ನ ಮಗನನ್ನು ಚಕ್ರವರ್ತಿಯನ್ನಾಗಿ ಮಾಡಬೇಕೆಂದು ತವಕಿಸುತ್ತಿದ್ದಿತು. ಆನ್ ನಿಗೆ ಇದು ಸಹಿಸಿಕೊಳ್ಳಲಾಗದ ವಿಷಯವಾಗಿತ್ತು. ಈ ನಡುವೆ ಬಾಕ್ಸರ್ ದಂಗೆಕೋರರ ಚಟುವಟಿಕೆಗಳು ಪೀಕಿಂಗ್‌ನಲ್ಲಿ ತೀವ್ರಗೊಂಡವು. ಅವರು ವಿದೇಶಿ ರಾಯಭಾರಿಗಳ ಕಛೇರಿಗಳ ಮೇಲೆ ಹಲ್ಲೆ ನಡೆಸಲು ತೊಡಗಿದಾಗ ಮಂಚೂ ಆಸ್ಥಾನದ ಅಧಿಕಾರಿಗಳು ಅಧಿಕೃತವಾಗಿ ದಂಗೆಕೋರರಿಗೆ ತಮ್ಮ ಬೆಂಬಲ ಸೂಚಿಸಿದರು.

ಬಾಕ್ಸರ್ ದಂಗೆಯು 1900 ರ ಏಪ್ರಿಲ್ ತಿಂಗಳಿನಲ್ಲಿ ದಂಗೆಕೋರರು ವಿದೇಶಿಯರ ಹತೋಟಿಯಲ್ಲಿದ್ದ ರೈಲು ಮಾರ್ಗಗಳ ಮೇಲೆ ಆಕ್ರಮಣ ಮಾಡಿದಾಗ ತೀಕ್ಷ್ಣತೆಯನ್ನು ಮುಟ್ಟಿತು. ಕೂಡಲೆ ವಿದೇಶಿ ರಾಯಬಾರಿ ಕಛೇರಿಗಳು ಹೆಚ್ಚಿನ ನೈತಿಕ ಬೆಂಬಲವನ್ನು ಹೊಂದಲು ಪ್ರಾರಂಭಿಸಿದವು. ದಂಗೆಕೋರರು ರೈಲ್ವೆ ಮತ್ತು ಟೆಲಿಗ್ರಾಫ್ ಸಂಪರ್ಕಗಳನ್ನು ಕಡಿದು ಘಟನೆಗಳು ನಡೆದ ಸ್ಥಳಗಳಿಗೆ ಸೈನ್ಯ ಬರುವುದನ್ನು ತಡೆದರು. 1900 ರ ಜೂನ್ 10 ರಂದು ದಂಗೆಕೋರರು ತಮ್ಮ ಸೈನ್ಯಗಳೊಂದಿಗೆ ರಾಜಧಾನಿಯನ್ನು ಪ್ರವೇಶಿಸಿದರು. ಅದೆ ದಿವಸ 1500 ಸೈನಿಕರಿಂದೆ ಕೂಡಿದ ವಿದೇಶಿ ಸೈನ್ಯ ಟೀನ್‌ಟ್ಸಿನ್‌ನಿಂದ ರೈಲಿನಲ್ಲಿ ಪ್ರಯಾಣ ಬೆಳೆಸಿ, ರಾಜಧಾನಿಗೆ ಬಂದಿದ್ದು, ದಂಗೆಕೋರರು ಸೈನ್ಯವನ್ನು ಅಪಾರ ನಷ್ಟಗೊಂದಿಗೆ ಸೋಲಿಸಿದರು. ರಾಯಭಾರಿ ಕಛೇರಿಗಳು ಮತ್ತು ವಸತಿ ಗೃಹಗಳ ಮೇಲೆ ದಾಳಿ ನಡೆಸಿದರು. ದಂಗೆಕೋರರು ಜಪಾನಿ ರಾಯಭಾರಿಯ ಕೊಲೆಗೈದರು ಮತ್ತು ಮತಾಂತರಗೊಂಡಿದ್ದ ನೂರಾರು ಚೀನಿ ಕ್ರಿಸ್ಟಿಯನ್‌ರನ್ನು ಕೊಲೆಗೈದರು. ಜೂನ್ 17 ರಂದು ಫ್ರೆಂಚ್, ಜಪಾನ್, ಬ್ರಿಟಿಷ್ ಮತ್ತು ಜರ್ಮನ್‌ರ ಯುದ್ಧ ನೌಕೆಗಳು ಪೈ-ಹೋಗೆ ಪ್ರವೇಶ ದೊರೆಯದಂತೆ ರಕ್ಷಿಸುತ್ತಿದ್ದ ಟೀಕು ಬಂದರನ್ನು ನಾಶ ಮಾಡಿದವು. ಬಾಕ್ಸರ್ ದಂಗೆಕೋರರು ಇದನ್ನು ಯುದ್ಧವೆಂದೆ ಪರಿಗಣಿಸಿ ಟೀನ್‌ಟ್ಸಿನ್ ರಿಯಾಯಿತಿಗಳನ್ನು ರದ್ದುಗೊಳಿಸುವುದರ ಮೂಲಕ ಪ್ರತಿಕಾರ ಕೈಗೊಂಡರು. ಸಂಧಾನಕ್ಕೆ ಪ್ರಯತ್ನಿಸಿದ ಜರ್ಮನ್ ರಾಯಭಾರಿ ಬೇರೋನ್‌ವಾನ್ ಕೈಟ್ಲರ್‌ನನ್ನು ಮಂಚೂ ಸಿಪಾಯಿಯೊಬ್ಬನು ಪೀಕಿಂಗ್ ನಗರದ ಬೀದಿಯಲ್ಲಿ ಕೊಲೆ ಮಾಡಿದನು. ಪರಿಣಾಮ ಮಂಚೂ ಸೈನ್ಯ ಬಾಕ್ಸರ್‌ನನ್ನು ಜೊತೆಗೂಡಿ ಯುದ್ಧ ಘೋಷಿಸಿ, ವಿದೇಶಿ ರಾಯಭಾರಿ ಕಛೇರಿಗಳ ಮೇಲೆ ಮುತ್ತಿಗೆ

ಹಾಕಿದವು. ಇಂಗ್ಲೀಷ್ ಅಧಿಕಾರಿಯೊಬ್ಬನನ್ನು ಅಮಾನುಷವಾಗಿ ಕತ್ತರಿಸಿ, ರುಂಡವನ್ನು ಪಂಜರದೊಳಗಿಟ್ಟ ಸಾರ್ವಜನಿಕ ಪ್ರದರ್ಶನಕ್ಕಿಟ್ಟರು. ಆದಾಗ್ಯೂ ಕೇವಲ ಸ್ವಲ್ಪ ಕಾಲ ಮಾತ್ರವೆ, ದಂಗೆಕೋರರ ಸೈನ್ಯ ವಿದೇಶಿಯರನ್ನು ಹಿಡಿದಿಡುವಲ್ಲಿ ಸಫಲವಾಗಿದ್ದು ಅನಂತರದಲ್ಲಿ ವಿದೇಶಿಯರ ಒಕ್ಕೂಟದ ಸೈನ್ಯಗಳೊಂದಿಗೆ ನಡೆದ ಕದನದಲ್ಲಿ ಸೋತು ಶರಣಾಯಿತು.

## 134.6 ಬಾಕ್ಸರ್ ಒಪ್ಪಂದ ಅಥವಾ ಇತ್ಯರ್ಥ

ಮಿತ್ರ ರಾಷ್ಟ್ರಗಳ ಸೈನ್ಯದ ಸಂಖ್ಯೆ 23,000 ಕ್ಕೂ ಮೀರಿದ್ದು, ಅನೇಕ ದಿವಸಗಳ ಭೀಕರ ಹೋರಾಟದ ನಂತರ ಜುಲೈ 14 ರಂದು ಟೀನ್‌ಟ್ಸಿನ್‌ನ್ನು ವಶಪಡಿಸಿಕೊಂಡಿತು. ಅನಂತರ ಆಗಸ್ಟ್ 4 ರಂದು ಪೀಕಿಂಗ್ ಕಡೆ ಮುಂದುವರೆದು ಆಗಸ್ಟ್ 12 ರಂದು ಮಿತ್ರ ರಾಷ್ಟ್ರಗಳ ಸೈನ್ಯವು ಪೀಕಿಂಗ್‌ನ ರಕ್ಷಣಾ ಸೈನ್ಯವನ್ನು ಅಪಾರ ನಷ್ಟದೊಂದಿಗೆ ಸೋಲಿಸಿತು. ಈ ಮಧ್ಯ ಮಂಚೂ ಸರ್ಕಾರವು ಶಾಂತಿ ಒಪ್ಪಂದ ಮಾಡಿಕೊಳ್ಳಲು ಮುಂದೆ ಬಂದಿತು. ಆಗಸ್ಟ್ 11 ರಂದು ಸರ್ಕಾರವು ವಿದೇಶಿಯರು ಪ್ರತಿನಿಧಿಗಳೊಂದಿಗೆ ಸಂಧಾನದ ಮಾತುಕತೆಗಳನ್ನಾಡಲು ದಕ್ಷಿಣದ ಕ್ಯಾಂಟನ್ನಿನಿಂದ ಚ್ಹಿಲಿ ಪ್ರಾಂತ್ಯಕ್ಕೆ ವೈಸರಾಯ್ ಆಗಿ ವಾಪಸ್ಸು ಕರೆಯಿಸಿಕೊಂಡಿದ್ದು 76 ವರ್ಷದ ಮುದುರ ಲಿಹಾಂಗ್ ಚಾಂಗ್‌ನನ್ನು ನೇಮಿಸಿತು. ಪೀಕಿಂಗ್ ರಕ್ಷಣಾ ಸೈನ್ಯವನ್ನು ಸೋಲಿಸಿದ ಮಿತ್ರ ರಾಷ್ಟ್ರಗಳ ಸೈನ್ಯ ಪೀಕಿಂಗ್‌ನ್ನು ವಶಪಡಿಸಿಕೊಂಡು ರಾಯಭಾರಿ ಕಛೇರಿಗಳನ್ನು ತೆರವು ಮಾಡಿತು ಮತ್ತು ನಗರದ ಲೂಟಿಯಲಿ ಜಪಾನೀಯರು ಖಜಾನೆ ವಶಪಡಿಸಿಕೊಂಡರೆ, ಜರ್ಮನ್ನರು ಕಲಾಕೃತಿಗಳನ್ನು ಇತರರು ಸರ್ಕಾರದ ಅಕ್ಕಿಯನ್ನು ಮತ್ತು ರೇಷ್ಮೆಯನ್ನು ವಶಪಡಿಸಿಕೊಂಡರು.

ಮಂಚೂ ಆಸ್ಥಾನವು ವಿದೇಶಿಯರು ಹೇರಬಹುದಾದ ಷರತ್ತುಗಳ ಬಗ್ಗೆ ಹೆದರಿ ಆಗಸ್ಟ್ 15 ರ ಬೆಳಿಗ್ಗೆ ತ್ಸು ಷಿ ಮತ್ತು ಅವಳ ಹಿಂಬಾಲಕರು ರೈತರ ವೇಷ ಧರಿಸಿ ಗಾಡಿಗಳಲ್ಲಿ ಕುಳಿತು ಪೀಕಿಂಗ್‌ನಿಂದ ತಪ್ಪಿಸಿಕೊಂಡು ಸಿಯಾನ್‌ಗೆ ಹೋಗಿ ಅಲ್ಲಿ ಹಂಗಾಮಿ ಆಸ್ಥಾನವನ್ನು ಸ್ಥಾಪಿಸಿಕೊಂಡಳು. ಅವಳ ಜೊತೆ ಹೋಗದೆ ಉಳಿದುಕೊಂಡವರಲ್ಲಿ ಲೀಹಂಗ್ ಚಿಂಗ್ ಸೇರಿದ್ದು, ಅವರು ವಿದೇಶಿಯರ ಪ್ರತಿನಿಧಿಗಳೊಡನೆ ನಡೆದ ಮಾತುಕತೆಗಳಲ್ಲಿ ಸಹಾಯ ಮಾಡಿದರು. ಆದರೆ ವಿದೇಶಿಯರ ನಡುವಿನ ಪ್ರತಿಸ್ಪರ್ಧೆ ಹಾಗೂ ಮಹಾದಾಸೆಗಳಿಂದಾಗಿ ಶಾಂತಿ ಒಪ್ಪಂದದ ಷರತ್ತಿನ ಮಾತುಕತೆಗಳು ಬಹಳ ದಿವಸಗಳವರೆಗೆ ಮುಂದುವರೆದವು. ದಂಗೆಯನ್ನು ಅಡಗಿಸಿದ ನಂತರ ಹಾಳುಗೆಡವಿದ ಚೀನಾದಲ್ಲಿನ ಅನುಕೂಲಗಳನ್ನು ಹಂಚಿಕೊಳ್ಳುವಲ್ಲಿ ವಿದೇಶಿಯರ ನಡುವೆ ಸ್ಪರ್ಧೆ ಏರ್ಪಟ್ಟಿತು. ರಷ್ಯಾದ ಮಂಚೂರಿಯಾದಲ್ಲಿನ ಹಿತಾಸಕ್ತಿಗೆ ಜಾಪನ್ ಅಡ್ಡಿಯುಂಟುಮಾಡಿತು. ಬ್ರಿಟನ್ ಜಪಾನ್ ಮತ್ತು ಅಮೆರಿಕಾದ ಪ್ರತಿನಿಧಿಗಳು ಚೀನಾಕ್ಕೆ ಸಂಬಂಧಿಸಿದಂತೆ, ಎಲ್ಲರಿಗೂ ಒಪ್ಪಿಗೆಯಾಗುವಂತಹ ಒಂದು ಸಾಮಾನ್ಯ ಒಪ್ಪಂದದ ರೂಪ ರೇಖೆಗಳನ್ನು ಸಿದ್ಧ ಪಡಿಸಿದರು. ಅಂತೆಯೇ 1901 ರ ಸೆಪ್ಟೆಂಬರ್ ತಿಂಗಳಲ್ಲಿ ಬಾಕ್ಸರ್ ಒಪ್ಪಂದಕ್ಕೆ ಚೀನಾ ಮತ್ತು ವಿದೇಶಿ ರಾಷ್ಟ್ರಗಳು ಸಹಿ ಹಾಕಿದವು.

*ಮುಖ್ಯ ಷರತ್ತುಗಳು*

a) ಚೀನಾ ಅಪಾರ ಯುದ್ಧ ನಷ್ಟ ಪರಿಹಾರವನ್ನು 4,50,000,000 ಟೀಲ್ಸ್ ಅಥವಾ 3,33,000,000 ಡಾಲರ್ ಹಣವನ್ನು ವಿದೇಶಿಯರಿಗೆ 39 ವಾರ್ಷಿಕ ಕಂತುಗಳಲ್ಲಿ 4% ಬಡ್ಡಿರಹಿತ ಕೊಡಬೇಕಾಯಿತು. ಚೀನಾ ಈ ಪರಿಹಾರ ಹಣದ ಮೊತ್ತದ ಗಾತ್ರವನ್ನು ಕಡಿಮೆ ಮಾಡಲು ಕೇಳಿಕೊಂಡಿತು. ಆದರೆ ಅಮೆರಿಕಾ ಕಡಿಮೆ ಮಾಡಲು ಅಪೇಕ್ಷಿಸಿದರೂ ಕೂಡ ಪ್ರಯೋಜನ ಆಗಲಿಲ್ಲ. ಕಡೆಗೆ 1925 ರ ವೇಳೆಗೆ ದ್ರವ್ಯದ ಭಾಗಾಂಶವನ್ನು ವಿದ್ಯಾಭ್ಯಾಸ ಮತ್ತಿತರ ಅನುಕೂಲಗಳಿಗೆ ಬಳಸಲಾಯಿತು.

b) ಬಾಕ್ಸರ್ ದಂಗೆಗೆ ಕಾರಣರಾದವರನ್ನು ಮರಣದಂಡನೆ ಶಿಕ್ಷೆ ಮೂಲಕ ಶಿಕ್ಷಿಸುವುದು. ದಂಗೆ ಸಂಭವಿಸಿದ್ದ ನಗರಗಳಲ್ಲಿ 5 ವರ್ಷಗಳ ಕಾಲ ಪರೀಕ್ಷೆಗಳನ್ನು ರದ್ದು ಪಡಿಸುವುದಕ್ಕೂ ಒಪ್ಪಿಕೊಳ್ಳಲಾಯಿತು. ತುಷ್ಷಿಯ 1902 ರ ಫೆಬ್ರವರಿಯಲ್ಲಿ ಆಜ್ಞೆ ಹೊರಡಿಸಿ ಆಜ್ಞೆಯ ಪ್ರಕಾರ ಕೆಲವರನ್ನು ಗಡಿಪಾರು ಮಾಡಲಾಯಿತು. ಮತ್ತೆ ಕೆಲವರನ್ನು ಗಲ್ಲಿಗೇರಿಸಲಾಯಿತು.

c) ರಾಜಧಾನಿ ಪೀಕಿಂಗ್ ನಗರದಲ್ಲಿ ರಾಯಭಾರಿ ಕಛೇರಿಗಳ ರಕ್ಷಣೆಗಾಗಿ ಖಾಯಂ ಸೈನ್ಯವನ್ನು ನೇಮಿಸುವುದಕ್ಕೂ ಮತ್ತು ರಾಜಧಾನಿಯಿಂದ ಸಮುದ್ರದ ತೀರದವರೆಗೂ ರಕ್ಷಣೆಯ ಜವಾಬ್ದಾರಿಗೆ ಒಪ್ಪಿತು.

d) ವ್ಯಾಪಾರಕ್ಕೆ ಸಂಬಂಧಪಟ್ಟ ವ್ಯವಹಾರಗಳನ್ನು ನೋಡಿಕೊಳ್ಳಲು ವಿದೇಶಿ ವ್ಯವಹಾರಗಳ ಕಛೇರಿ ಸ್ಥಾಪಿಸಲಾಯಿತು.

e) ವಿದೇಶಿಯರು ಚಕ್ರವರ್ತಿಯನ್ನು ನೋಡುವಾಗ ಅನುಸರಿಸಬೇಕಾಗಿದ್ದ ಸಂಪ್ರದಾಯ ಆಚರಣೆಗಳನ್ನು ರದ್ದುಗೊಳಿಸಲಾಯಿತು.

f) ಜರ್ಮನಿಯ ಮತ್ತು ಜಪಾನಿ ರಾಯಭಾರಿಗಳನ್ನು ಕೊಲೆ ಮಾಡಿದಕ್ಕೆ ಕ್ಷಮಾಪಣೆ ಪತ್ರ ಒಪ್ಪಿಸಲಾಯಿತು.

g) ವಿದೇಶಿ ವಸ್ತುಗಳ ಮೇಲೆ ವಿಧಿಸಲಾಗುತ್ತಿದ್ದ ಆಂತರಿಕ ಸಾಗಾಣಿಕೆಯ ಸುಂಕವನ್ನು ರದ್ದುಗೊಳಿಸಲಾಯಿತು.

h) ಆಮದು-ರಫ್ತುಗಳ ಮೇಲಿನ ಸುಂಕವನ್ನು ಶೇ5 ಹೆಚ್ಚಿಸಲಾಗಿದ್ದು ಯುದ್ಧ ನಷ್ಟ ಪರಿಹಾರ ತುಂಬಿಕೊಡಲು ಮಾಡಿದ ವ್ಯವಸ್ಥೆ ಇದಾಗಿತ್ತು.

i) ವಿದೇಶಿ ಬಂಡವಾಳವನ್ನು ಆಕರ್ಷಿಸಲು ಗಣಿ ಉದ್ಯಮ ನಿಯಮಗಳನ್ನು ಪರಿಷ್ಕರಿಸಲಾಯಿತು ಮತ್ತು ವಿದೇಶಿಯರ ನೆಲಸುವಿಕೆಗೆ ಮತ್ತು ವ್ಯಾಪಾರಕ್ಕೆ ಮುಕ್ಡೆನ್ ಮತ್ತು ಷಾಂಟುಂಗ್ ಪ್ರದೇಶಗಳನ್ನು ತೆರೆಯಲಾಯಿತು.

j) ಸ್ಥಳೀಯ ಸುಂಕದ ಕಛೇರಿಗಳನ್ನು ರದ್ದುಗೊಳಿಸಿ ಅವುಗಳಿಗೆ ಬದಲಾಗಿ ವಿದೇಶಿ ಇನ್ಸಸ್ಪೆಕ್ಟೋರೇಟ್ ಕಛೇರಿಯನ್ನು ಸ್ಥಾಪಿಸಲಾಯಿತು.

## 134.7 ದಂಗೆಯ ವಿಫಲತೆಗೆ ಕಾರಣಗಳು ಮತ್ತು ಪರಿಣಾಮಗಳು

ಬಾಕ್ಸರ್ ದಂಗೆಯ ಮುಖ್ಯ ಉದ್ದೇಶ ಮಂಚೂ ಪ್ರಭುತ್ವವನ್ನು ಕೊನೆಗಾಣಿಸಿ ನಂತರ ವಿದೇಶಿಯರನ್ನು ಮತ್ತೆ ಕ್ರೈಸ್ತ ಧರ್ಮವನ್ನು ಹೊರ ಹಾಕುವ ಹವಣಿಕೆಯಲ್ಲಿದ್ದಿತು. ಆದರೆ ದಂಗೆಕೋರರ ಭಾವನೆಗಳು ಮತ್ತು ವಿಚಾರಗಳನ್ನು ಬಳಸಿಕೊಂಡು ಮಂಚೂ ಪ್ರಭುತ್ವ ದಂಗೆಯನ್ನು ನೇರವಾಗಿ ಪಾಶ್ಚಿಮಾತ್ಯರ ವಿರುದ್ಧ ತಿರುಗಿಸಿತ್ತು. ಅಷ್ಟೇ ಅಲ್ಲದೆ ಮೊದಲ ಹಂತದಲ್ಲಿ ದಂಗೆ ಕೋರರರಿಗಾಗಲಿ ಅಥವಾ ಪಾಶ್ಚಿಮಾತ್ಯರಿಗಾಗಲಿ ಮಂಚೂಗಳು ನಿಲುವು ಅರ್ಥವಾಗಿರಲಿಲ್ಲ. ದಂಗೆ ಬಹುತೇಕ ಉತ್ತರದ ಭಾಗಕ್ಕೆ ಸೀಮಿತವಾಗಿದ್ದು, ದಕ್ಷಿಣದ ಪ್ರಾಂತ್ಯಾಧಿಕಾರಿಗಳು ದಂಗೆ ಮತ್ತು ಯುದ್ಧದಿಂದ ಹೊರಗುಳಿದಿದ್ದವು.

ಪ್ರಾಂತ್ಯಗಳ ಗೌವರ್ನರುಗಳಿಗೆ ಪೀಕಿಂಗ್ ಸರ್ಕಾರವು ವಿದೇಶಿಯರನ್ನು ಹೊರಗಟ್ಟುವಂತೆ ಆದೇಶ ನೀಡಿತ್ತಾದರೂ ಪ್ರಾಂತ್ಯಗಳ ಗೌವರ್ನರುಗಳು ಅಂತಹ ಪ್ರಯತ್ನವು ಹೆಚ್ಚು ಸಾಹಸದ ಕೆಲಸವಾದೀತೆಂದು ಭಾವಿಸಿದ್ದರು. ಕ್ಯಾಂಟನ್‌ನಲ್ಲಿ ಕಾರ್ಯಬಾರಿ ವೈಸರಾಯ್ ಆಗಿದ್ದು ಲಿ ಹಂಗ್ ಚಾಂಗ್ ಷಾಂಟುಂಗ್‌ನ ಗೌವರ್ನರ್ ಆಗಿದ್ದ ಯು ಆನ್ ಷಿಕೈ ಮತ್ತು ಹು ಫೇ ಹಾಗೂ ಹುನಾನ್ ವೈಸರಾಯ್ ಆಗಿದ್ದ ಚಾಂಗ್ ಜಟುಂಗ್ ಮೊದಲಾದ ಅಧಿಕಾರಿಗಳು ಪೀಕಿಂಗ್‌ಗೆ ಸೈನ್ಯವನ್ನು ಕಳುಹಿಸಿದರಾದರೂ ತಾವು ಭಾಗವಹಿಸದೆ ಹೊರಗುಳಿದರು. ಅಲ್ಲದೆ ಉತ್ತರ ಚೀನಾದಲ್ಲಿ ಅತ್ಯಂತ ಪ್ರಬಲ ಮಿಲಿಟರಿ ವ್ಯಕ್ತಿಯಾಗಿದ್ದ ಜುಂಗ್‌ಲೂ ದಂಗೆಕೋರರನ್ನು ನಿಗ್ರಹಿಸಲು ಪ್ರಯತ್ನಿಸಿದನು ಮತ್ತು ದಂಗೆಕೋರರು ವಿದೇಶಿಯರ ವಿರುದ್ಧ ಹೋರಾಡುವುದನ್ನು ಅವನು ಬಯಸಿರಲಿಲ್ಲ.

ದಂಗೆಕೋರರ ಮತ್ತು ಪೀಕಿಂಗ್ ರಕ್ಷಣಾ ಪಡೆಯ ಸೋಲಿಗೆ ಸೈನಿಕ ಕಾರಣವು ಇತ್ತು. ಮಿತ್ರ ರಾಷ್ಟ್ರಗಳ ಸೈನ್ಯ ಆಧುನಿಕ ಶಸ್ತ್ರಾಸ್ತ್ರಗಳನ್ನು ತಾಂತ್ರಿಕತೆಯನ್ನು ಮತ್ತು ಹೊಂದಾಣಿಕೆಯನ್ನು ಸಾಧಿಸಿದ್ದು ಮಿತ್ರ ರಾಷ್ಟ್ರಗಳ ಸೈನ್ಯ ಸುಲಭವಾಗಿ ಜಯಗಳಿಸಿತು. ಆದರೆ ಆ ವಿಚಾರಗಳಲ್ಲಿ ಹಿಂದುಳಿದಿದ್ದ ಚೀನಿ ಸೈನ್ಯ, ಮಿತ್ರ ರಾಷ್ಟ್ರಗಳ ಸೈನ್ಯಕ್ಕೆ ಯಾವ ರೀತಿಯಲ್ಲೂ ಸಮಯವಾಗಿರಲಿಲ್ಲ. ಅಲ್ಲದೆ ಚೀನಿ ಅಧಿಕಾರಿಗಳಾದ ಜುಂಗ್ ಲೂ ಮತ್ತು ಯು ಆನ್ ಷಿ ಕೈ ನಂತಹ ನಾಯಕರು ದಂಗೆಕೋರರಿಗೆ ಪೂರ್ಣ ಸಹಾಯ ನೀಡಲಿಲ್ಲ.

ಮಂಚೂ ಆಸ್ಥಾನದ ಅಧಿಕಾರಿಗಳಲ್ಲ. ಅನೇಕರು ಹೋರಾಟದ ಆರಂಭದಲ್ಲಿಯೇ ವಿದೇಶಿಯರು ಅಂತ್ಯದಲ್ಲಿ ಜಯಗಳಿಸುವುದು ನಿಶ್ಚಿತವೆಂದು ನಂಬಿದ್ದರು. ಹಾಗಾಗಿ ಬಂಡುಕೋರರಿಗೆ ಬೆಂಬಲಿಸಲು ಅವರು ಹಿಂಜರಿದರು ಹಾಗೂ ಮಂಚೂ ಅರಸರಿಗೆ ಮೊದಲಿನಿಂದಲೂ ಶಾಂತಿ ಸಂಧಾನಕ್ಕೆ ಒತ್ತಾಯಿಸಿದ್ದರು. ಸಬಲ ಮತ್ತು ಶಕ್ತ ನಾಯಕರ ಕೊರತೆ ಇದ್ದ ದಂಗೆಕೋರರು ಮಂಚೂಗಳಿಂದಲೂ ಸರಿಯಾದ ಬೆಂಬಲ ಸಿಗದ ಕಾರಣ ಯುದ್ಧದಲ್ಲಿ ಸೋತರು.

ದಂಗೆಯ ಶಮನ ಮತ್ತು ಬಾಕ್ಸರ್ ಒಪ್ಪಂದ ಚೀನಾ ಪ್ರಭುತ್ವವನ್ನು ಮತ್ತೆ ಅವಲಂಬಿತ ಸ್ಥಿತಿಗೆ ದೂಡಿತು. ಒಪ್ಪಂದದ ಕರಾರುಗಳು ಚೀನಿ ಪ್ರಭುತ್ವಕ್ಕೆ ಕಠಿಣ ಮತ್ತು ಅವಮಾನಕರವಾಗಿದ್ದು, ಭರಿಸಬೇಕಾದ ಯುದ್ಧ ನಷ್ಟ ಪರಿಹಾರ ಚೀನಾವನ್ನು ಸಾಲದ ದವಡೆಗೆ ನೂಕಿತು. ಯುದ್ಧ ನಷ್ಟ ಪರಿಹಾರವನ್ನು ಕಡಿಮೆಗೊಳಿಸಲು ನಡೆಸಿದ ಯತ್ನ ಸಫಲವಾಗಲಿಲ್ಲ. ಆದರೆ ಅಮೆರಿಕಾ ಅನುಕಂಪದಿಂದ ನೋಡಿದ್ದು, ಭಾಗಶಃ ಹಣವನ್ನು ಅಮೇರಿಕಾದಲ್ಲಿ ಅಭ್ಯಾಸ ಮಾಡುತ್ತಿದ್ದ ಚೀನಿ ವಿದ್ಯಾರ್ಥಿಗಳಿಗೆ ಬಳಸಲು ಮಾತ್ರ ಒಪ್ಪಿತು. ಬಾಕ್ಸರ್ ದಂಗೆ ಚೀನಾದಲ್ಲಿ ಮಂಚೂ ಪ್ರಭುತ್ವವನ್ನು ಬಹುತೇಕ ಕೊನೆಗೊಳಿಸಿ ಗಣರಾಜ್ಯ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಚೀನಿ ಜನತೆ ಮಂಚೂ ಪ್ರಭುತ್ವದ ವಿರುದ್ಧ ಭಾವನೆಗಳು ಬೆಳೆಯಲು ಕಾರಣವಾಯಿತು. ಅಮೇರಿಕಾದ ತೆರೆದ ಬಾಗಿಲು ನೀತಿಯಿಂದಾಗಿ ಚೀನಾವನ್ನು ಹರಿದು ಹಂಚಿಕೊಳ್ಳಲು ಅಪೇಕ್ಷಿಸಿದ್ದ ವಿದೇಶಿಯರ ಪ್ರಯತ್ನಕ್ಕೆ ಅಡ್ಡಿಯುಂಟು ಮಾಡಿತು.

## 134.8 ಒಟ್ಟಾರೆ ಸಾರಾಂಶ ನೀಡುವ ಬನ್ನಿ

ಆಧುನಿಕ ಚೀನಾದಲ್ಲಿ ಬಾಕ್ಸರ್ ದಂಗೆ ಒಂದು ಪ್ರಮುಖ ಘಟನೆಯಾಗಿದ್ದು ಇದೊಂದು ಕ್ರಾಂತಿಕಾರಕ ಮತ್ತು ಜನಪರವಾದ ಹೋರಾಟವಾಗಿತ್ತು. ಬಾಕ್ಸರ್ ದಂಗೆಕೋರರು ದುರ್ಬಲ ಚೀನೀ ಪ್ರಭಾವದ ಬಗ್ಗೆ ಬೇಸತ್ತು ಆರ್ಥಿಕವಾಗಿ ದುರ್ಬಲಗೊಂಡಿದ್ದ ಚೀನಾಕ್ಕೆ ಪರ್ಯಾಯವನ್ನು ಹುಡುಕಲು ಚೀನಿ ಪ್ರಭುತ್ವದ ವಿರುದ್ಧ ದಂಗೆ ಪ್ರಾರಂಭಿಸಿದ ದಂಗೆಕೋರರು ಆನಂತರದಲ್ಲಿ ಪಾಶ್ಚಿಮಾತ್ಯರ

ವಿರುದ್ಧ ಮತ್ತು ಕ್ರೈಸ್ತ ಧರ್ಮದ ವಿರುದ್ಧ ಹೋರಾಟ ನಡೆಸಿದ್ದು, ಮಂಚೂ ಪ್ರಭುತ್ವ ಕೂಡ ಕೈ ಜೋಡಿಸಿದಾಗ ಪಾಶ್ಚಿಮಾತ್ಯರ ಮಿತ್ರ ರಾಷ್ಟ್ರಗಳ ಸೈನ್ಯದ ವಿರುದ್ಧ ಯುದ್ಧ ನಡೆಸಿ ಸೋತರು.

ಚೀನಾ 19 ನೇ ಶತಮಾನದುದ್ದಕ್ಕೂ ಪಾಶ್ಚಿಮಾತ್ಯರ ವಿರುದ್ಧ ಸೆಣಸಾಟ ನಡೆಸಿ ವಿದೇಶಿಯರನ್ನು ಹೊರಹಾಕುವಲ್ಲಿ ವಿಫಲವಾಯಿತು ಮತ್ತು ಎಲ್ಲ ಐರೋಪ್ಯ ರಾಷ್ಟ್ರಗಳು ಹಾಗೂ ಅಮೆರಿಕಾ ಮತ್ತು ಜಪಾನಿನೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿತ್ತು. ಚೀನಾ ಮಾಡಿಕೊಂಡ ಈ ಎಲ್ಲ ಒಪ್ಪಂದಗಳು ಅಸಮ ಒಪ್ಪಂದಗಳಾಗಿದ್ದು, ಒಪ್ಪಂದಗಳಿಗೆ ಸಹಿ ಮಾಡಿದ ಮಂಚೂ ಪ್ರಭುತ್ವ ವಿದೇಶಿಯರಿಗೆ ರಿಯಾಯಿತಿಗಳನ್ನು ಆರ್ಥಿಕ ಸವಲತ್ತುಗಳನ್ನು ಮತ್ತು ಅವರ ಪ್ರಾದೇಶಿಕ ಹಿತಾಸಕ್ತಿಗಳಿಗೂ ಒಪ್ಪಿಕೊಂಡಿತ್ತು. ಆದಾಗ್ಯೂ ವ್ಯಾಪಾರ, ವಾಣಿಜ್ಯಗಳ ಜೊತೆಯಲ್ಲಿ ಕ್ರೈಸ್ತ ಧರ್ಮ ಪ್ರಸರಣಾ ನೀತಿ ಅನುಸರಿಸಿದ ಪಾಶ್ಚಾತ್ಯರು ತಮ್ಮ ರಾಜಕೀಯ ಮತ್ತು ವೈಚಾರಿಕ ಅಂಶಗಳನ್ನು ಚೀನಿಯರಿಗೆ ಮನದಟ್ಟು ಮಾಡಿ ಕೊಟ್ಟಿದ್ದರು. ಅದರಲ್ಲೂ 1894-95 ರ ಚೀನಿ ಜಪಾನ್ ಯುದ್ಧದಲ್ಲಿ ಸೋತ ಮಂಚೂ ಪ್ರಭುತ್ವ ಆಡಳಿತದಲ್ಲಿದ್ದ ಬುದ್ಧಿ ಜೀವಿಗಳ ಸಲಹೆಯಂತೆ 100 ದಿವಸಗಳ ಸುಧಾರಣಾ ಯತ್ನಕ್ಕೂ ಕೈ ಹಾಕಿ ಸೋತಿತ್ತು, ಆ ವೇಳೆಗಾಗಲೇ ಅನೇಕ ಯುದ್ಧಗಳನ್ನು ನಡೆಸಿ ಚೀನಾದಲ್ಲಿ ಹಿತಾಸಕ್ತಿ ಬೆಳೆಯಿಸಿಕೊಂಡಿದ್ದು ಐರೋಪ್ಯ ರಾಷ್ಟ್ರಗಳು ಚೀನಾದಲ್ಲಿ ಪ್ರಭಾವಿ ವಲಯಗಳನ್ನು ರೂಪಿಸಿಕೊಂಡಿದ್ದು, ಚೀನಾವನ್ನು ಹರಿದು ಹಂಚಿಕೊಳ್ಳುವ ಹವಣಿಕೆಯಲ್ಲಿದ್ದವು. ಅಮೇರಿಕಾದ ತೆರೆದ ಬಾಗಿಲ ನೀತಿ ಐರೋಪ್ಯರ ಹರಿದು ಹಂಚುವ ನೀತಿಗೆ ತಡೆಯೊಡ್ಡಿದು. ಚೀನಾವನ್ನು ಸದ್ಯದ ಗಂಡಾಂತರದಿಂದ ಪಾರು ಮಾಡಿತ್ತು. ಇವೆಲ್ಲವುಗಳ ಮಧ್ಯೆ ಪಾಶ್ಚಾತ್ಯರ ಭಾಷೆ, ರಾಜಕೀಯ ಸಿದ್ಧಾಂತಗಳು ಮತ್ತು ವಿದ್ಯಾಭ್ಯಾಸ ನೀತಿಗಳು ಚೀನಿಯರಲ್ಲಿ ರಾಷ್ಟ್ರೀಯತೆ ಮತ್ತು ಐಕ್ಯತೆಗಳ ಬಗ್ಗೆ ಅರಿವನ್ನು ಮೂಡಿಸಿದ್ದವು. ಪಾಶ್ಚಾತ್ಯರ ಪ್ರಭಾವ ಯುವ ಚೀನಿಯರಲ್ಲಿ ಅತೃಪ್ತಿ ಮತ್ತು ಅಸಮಾಧಾನಗಳನ್ನು ಮೂಡಿಸಿದ್ದು, ಕ್ರಾಂತಿ ಅಥವಾ ಬಂಡಾಯಗಳಿಗೆ ಪ್ರೇರೇಪಿಸಿದ್ದವು.

ಚೀನಾದಲ್ಲಿ ಪಾಶ್ಚಿಮಾತ್ಯದ ಪ್ರಭಾವಗಳಿಗೆ ಪ್ರತಿಕ್ರಿಯೆ ಭಿನ್ನವಾಗಿಯೆ ಇತ್ತು. ರಾಜಕೀಯವಾಗಿ ದುರ್ಬಲವಾಗಿದ್ದ ಮಂಚೂ ಪ್ರಭುತ್ವ ಪಾಶ್ಚಾತ್ಯರ ವಿಚಾರಗಳು ಮತ್ತು ವಸ್ತುಗಳು ತಮಗೆ ಇಚ್ಛೆಯಿಲ್ಲದಿದ್ದರೂ ಒಪ್ಪಿಕೊಂಡಿದ್ದವು. ಪರಿಣಾಮವಾಗಿ ಚೀನಿ ಪ್ರತ್ಯೇಕತೆ ಕೊನೆಗೊಂಡಿತು. ಚೀನಾದ ಲೂಟಿಯಲ್ಲಿ ಸ್ಪರ್ಧೆಗಿಳಿದಿದ್ದ ಪಾಶ್ಚಾತ್ಯರ ವಿರುದ್ಧ ಚೀನಿಯರ ಸೆಣಸಾಟ ಮುಂದುವರೆದಿದ್ದು, ಹಂಗ್ ಸ್ಯೂ-ಚುವಾನ ಸ್ಥಾಪಿಸಿದ ದೇವರ ಆರಾಧಕರ ಸಂಘದ ತೈಪಿಂಗ್ ದಂಗೆ ಹೆಚ್ಚನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಆದರೆ ಪಾಶ್ಚಾತ್ಯರಿಂದ ಕಲಿತ ಪಾಠ ವಿದೇಶಗಳಲ್ಲಿ ದುಡಿದು ವಾಪಸಾಗಿದ್ದ ಶ್ರಮಿಕ ವರ್ಗ ಮತ್ತು ಆಡಳಿತದಲ್ಲಿ ಸಲಹೆ ನೀಡುತ್ತಿದ್ದ ಬುದ್ಧಿ ಜೀವಿಗಳು ಚೀನಿಯರನ್ನು ಎಚ್ಚರಿಸುವಲ್ಲಿ ಮತ್ತು ವಿದೇಶಿಯರ ವಿರುದ್ಧ ಹೋರಾಟಗಳಿಗೆ ಪ್ರೇರಣೆ ನೀಡಿದ್ದವು.

ಬಾಕ್ಸರ್ ದಂಗೆಗೆ ಹಲವಾರು ಕಾರಣಗಳಿದ್ದು, ಚೀನಾದಲ್ಲಿ ಐರೋಪ್ಯರ ಕ್ರಮಬದ್ಧವಾದ ಶೋಷಣೆ, ಚೀನಿ-ಜಪಾನ್ ಯುದ್ಧದ ನಂತರದಲ್ಲಿ ಕ್ರಾಂತಿವಾದಿಗಳು ಮತ್ತು ಸುಧಾರಣಾವಾದಿಗಳ ವಿಚಾರಧಾರೆಗಳು ಹಾಗೂ ಸುಧಾರಣಾವಾದಿಗಳೊಳಗಿದ್ದ ಸಂಪ್ರದಾಯವಾದಿಗಳ ನಿಲುವು ದುರ್ಬಲಗೊಂಡಿದ್ದು, ಚೀನಿ ಜನತೆಯ ನಂಬಿಕೆ ಕಳೆದುಕೊಂಡಿದ್ದ ಮಂಚೂ ಪ್ರಭುತ್ವ ಮತ್ತು ವಿದೇಶಿ ಕ್ರೈಸ್ತ ಮಿಷನರಿಗಳ ಧರ್ಮ ಪ್ರಸರಣಾ ನೀತಿ ಬಾಕ್ಸರ್ ದಂಗೆಗೆ ಪ್ರಮುಖ ಕಾರಣಗಳಾಗಿದ್ದವು. ಅದರಲ್ಲೂ ಮತಾಂತರಗೊಂಡಿದ್ದ ಚೀನಿಯರ ನಡತೆಗಳು ಜನತೆಯಲ್ಲಿ ಕ್ರೈಸ್ತ ಧರ್ಮ ಮತ್ತು ವಿದೇಶಿಯರ ವಿರುದ್ಧದ ದ್ವೇಷವನ್ನು ಉಲ್ಬಣಗೊಳಿಸಿದ್ದವು. ಬಾಕ್ಸರ್ ಅಥವಾ ಐಕ್ಯತೆಯುಳ್ಳ ಮುಷ್ಠಿ ಸಂಸ್ಥೆ ಮಂಚೂಗಳ ವಿರೋಧಿಗಳಾಗಿದ್ದು, 1899 ರಲ್ಲಿ ಮಂಚೂ ಪ್ರಭುತ್ವದ ವಿರುದ್ಧ ಹೋರಾಟ ಪ್ರಾರಂಭಿಸಿತು. ವಿದೇಶಿಯರಿಂದ ಶೋಷಣೆಗೆ ಒಳಗಾಗಿದ್ದ ಚೀನಿಯರು ಚುಹಂಗ್-ಟಂಗ್ ನಾಯಕತ್ವದಲ್ಲಿ ಷಾಂಟುಂಗ್ ಪ್ರಾಂತದ ಹಳ್ಳಿಗಳನ್ನು ಕೇಂದ್ರವನ್ನಾಗಿ ಮಾಡಿಕೊಂಡು ದಂಗೆ ನಡೆಸಿದರು. ಜರ್ಮನ್ನರ ರಾಜಕೀಯ ಮತ್ತು ಆರ್ಥಿಕ ಆಕ್ರಮಣಗಳ ವಿರುದ್ಧ ಸಿಡಿದೆದ್ದು "ಚಿಂಗ್‌ನ್ನು ರಕ್ಷಿಸಿ ಮತ್ತು ವಿದೇಶಿಯರನ್ನು ನಿರ್ನಾಮ ಮಾಡಿ" ಎಂಬ ಘೋಷಣೆಯೊಂದಿಗೆ ಹೋರಾಟಕ್ಕಿಳಿದರು. ಪ್ರಾಂತ್ಯಾಧಿಕಾರಿಗಳು ನಂತರ ಚಕ್ರವರ್ತಿನಿ ರಾಣಿ ತ್ಸು ಷಿ ಕೂಡ ದಂಗೆಕೋರರ ಜೊತೆ ಕೈಗೂಡಿಸಿದಳು. ದಂಗೆಕೋರರು ಪೀಕಿಂಗ್‌ನಲ್ಲಿದ್ದ ವಿದೇಶಿ ರಾಯಭಾರಿ ಕಛೇರಿಗಳು ಮತ್ತು ವಿದೇಶೀಯರ ನೆಲೆಗಳ ಮೇಲೆ ಧಾಳಿ ನಡೆಸಿದರು. ಜರ್ಮನಿಯ ಮತ್ತು ಜಪಾನಿನ ರಾಯಭಾರಿಗಳನ್ನು ಕೊಲ್ಲುವುದರ ಮೂಲಕ ನೇರವಾಗಿ ವಿದೇಶಿಯರು ದಂಗೆಕೋರರ ವಿರುದ್ಧ ಯುದ್ಧದಲ್ಲಿ ಭಾಗವಹಿಸಲು ದಾರಿ ಮಾಡಿಕೊಟ್ಟರು. ಈ ವೇಳೆಗಾಗಲೇ ದಂಗೆಕೋರರು ಮೊದಲ ಹಂತದಲ್ಲಿ ಸಫಲವಾಗಿದ್ದನ್ನು ಮನಗಂಡಿದ್ದ ಮಂಚೂ ಪ್ರಭುತ್ವ ನೇರವಾಗಿ ದಂಗೆಕೋರರ ಸಹಾಯಕ್ಕೆ ಬಂದಿತು. ಹಾಗಾಗಿ ದಂಗೆಕೋರರ ಬೆಂಬಲಕ್ಕಿದ್ದ ಪೀಕಿಂಗ್ ರಕ್ಷಣಾ ಸೈನ್ಯ ಮತ್ತು ಮಿತ್ರ ರಾಷ್ಟ್ರಗಳ ಸೈನ್ಯದ ನಡುವೆ ನೇರ ಹಣಾಹಣಿ ನಡೆದು ಭೀಕರವಾದ ಯುದ್ಧಗಳಲ್ಲಿ ಚೀನಿ ಸೈನ್ಯ ಅಪಾರ ನಷ್ಟವನ್ನು ಅನುಭವಿಸಿತು. ಮಿತ್ರ ರಾಷ್ಟ್ರಗಳ ಸೈನ್ಯ ಜುಲೈನಲ್ಲಿ ಟೀನ್‌ಟ್ಸಿನ್‌ನ್ನು ಮತ್ತು ಆಗಸ್ಟ್‌ನಲ್ಲಿ ಪೀಕಿಂಗ್‌ನನ್ನು ವಶಪಡಿಸಿಕೊಂಡಿತು. ಆ ವೇಳೆಗಾಗಲೇ ಸೋಲು ಖಚಿತವೆಂದು ಮನಗಂಡಿದ್ದ ಮಂಚೂಗಳು ಹಿರಿಯ ರಾಜಕಾರಣಿ ಮತ್ಸದಿ ಲೀ ಹಂಗ್-ಚಾಂಗ್ ನನ್ನು ಸಂಧಾನಕ್ಕಾಗಿ ಕಳುಹಿಸಿದರು. ಒಪ್ಪಂದ ಷರತ್ತುಗಳ ಬಗ್ಗೆ ಹೆದರಿ ರಾಣಿ ತ್ಸು ಷಿ ಮತ್ತು ಹಿಂಬಾಲಕರು ರಾಜಧಾನಿ ತೊರೆದು ಸಿಯಾನ್‌ಗೆ ಹೋಗಿ ಅಲ್ಲಿ ಹಂಗಾಮಿ ಆಸ್ಥಾನ ಸ್ಥಾಪಿಸಿಕೊಂಡಿದ್ದರು.

ಮಿತ್ರ ರಾಷ್ಟ್ರಗಳ ಸೈನ್ಯ ಪೀಕಿಂಗ್ ಆಕ್ರಮಿಸುವ ಮೊದಲೆ ಸಂಧಾನಕ್ಕೆ ಚೀನಾ ಪ್ರಯತ್ನಿಸಿತು. ಯುದ್ಧ ಸೋಲಿನ ಅನುಕೂಲಗಳನ್ನು ಹಂಚಿಕೊಳ್ಳಲು ವಿದೇಶಿಯರಲ್ಲಿ ಸ್ಪರ್ಧೆಯಿದ್ದು, ಒಪ್ಪಂದ ವಿಳಂಬವಾಯಿತು. 1901ರ ಸೆಪ್ಟೆಂಬರ್‌ನಲ್ಲಿ ಬಾಕ್ಸರ್ ಒಪ್ಪಂದಕ್ಕೆ ಚೀನಾ ಮತ್ತು ವಿದೇಶಿ ರಾಷ್ಟ್ರಗಳು ಸಹಿ ಹಾಕಿದವು. ಒಪ್ಪಂದದ ಪ್ರಕಾರ ಚೀನಾ ಬೃಹತ್ ಮಟ್ಟದ ಯುದ್ಧ ನಷ್ಟ ಪರಿಹಾರವನ್ನು ದಂಗೆಕೋರರಿಗೆ ಮರಣದಂಡನೆ ಶಿಕ್ಷೆ, ರಾಜಧಾನಿಯಲ್ಲಿ ವಿದೇಶಿ ರಾಯಭಾರಿ ಕಛೇರಿಗಳಿಗೆ ರಕ್ಷಣೆ, ವಿದೇಶಿಯರು ಅನುಸರಿಸಬೇಕಾಗಿದ್ದ ಸಂಪ್ರದಾಯ ಆಚರಣೆಯ ಪದ್ಧತಿ, ಮೊದಲಾದ ಹೀನಾಯ ಮತ್ತು ಅವಮಾನಕರವಾದ ಷರತ್ತುಗಳನ್ನು ಒಪ್ಪಿಕೊಂಡಿತು. ದಂಗೆಕೋರರಲ್ಲಿ ನಾಯಕತ್ವದ ಕೊರತೆ, ಪ್ರಾಂತ್ಯಾಧಿಕಾರಿಗಳ ಅಪ್ರಾಮಾಣಿಕತೆ, ಮಂಚೂ ಅರಸರ ಸ್ವಾರ್ಥ ನಿಲುವು, ಆಡಳಿತಾಧಿಕಾರಿಗಳಲ್ಲಿ ದಂಗೆಕೋರರ ಬಗೆಗಿದ್ದ ದುರಭಿಮಾನ ಮತ್ತು ಅಪನಂಬಿಕೆ ಎಲ್ಲಕ್ಕಿಂತ ಹೆಚ್ಚಿನದಾಗಿ ಮಿತ್ರ ರಾಷ್ಟ್ರಗಳು ಸೈನ್ಯದ ಹೊಂದಾಣಿಕೆ ಮಾಡಿಕೊಂಡು ದಂಗೆಕೋರರನ್ನು ಸೋಲಿಸಿದರು ಮತ್ತು ದಂಗೆಯನ್ನು ಅಡಗಿಸಿ ತಮಗೆ ಅನುಕೂಲವಾಗುವಂತೆ ಒಪ್ಪಂದ ಮಾಡಿಕೊಂಡರು. ಪರಿಣಾಮವಾಗಿ ಮಂಚೂ ದುರ್ಬಲತೆ ಮುಂದೆ ಚೀನಾದ ಕ್ರಾಂತಿಗೆ ದಾರಿಮಾಡಿಕೊಟ್ಟಿತು ಮತ್ತು ಚೀನಾ ಪ್ರಭುತ್ವವನ್ನು ಮತ್ತೆ ಅವಲಂಬಿತ ಸ್ಥಿತಿಗೆ ತಂದಿತು. ಇವೆಲ್ಲದರ ಮಧ್ಯೆ ಅಮೆರಿಕಾ ಜಾರಿಯಲ್ಲಿ ತರದ ತೆರೆದ ಬಾಗಿಲ ನೀತಿ ವಿದೇಶೀಯರು ಚೀನಾವನ್ನು ಹರಿದು ಹಂಚಿಕೊಳ್ಳುವ ಹವಣಿಕೆಯಿಂದ ತಪ್ಪಿಸಿ, ಚೀನಾಗ ಅಸ್ತಿತ್ವವನ್ನು ತಾತ್ಕಾಲಿಕವಾಗಿಯಾದರು ಉಳಿಯುವಂತೆ ಮಾಡಿದರು.

## 134.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

*I ಕೆಳಗಿನ ಪ್ರಶ್ನೆಗಳಿಗೆ ಆರು ಸಾಲುಗಳಿಗೆ ಮೀರದಂತೆ ಉತ್ತರಿಸಿ*

a) ಲಿ ಹಂಗ್ ಚಾಂಗ್

b) ಐಕ್ಯತೆಯುಳ್ಳ ಮುಷ್ಟಿ ಸಂಸ್ಥೆ

c) ಚು-ಷಂಗ್-ಚಿಂಗ್

*II ಕೆಳಗಿನವುಗಳಿಗೆ ಟಿಪ್ಪಣಿ ಬರೆಯಿರಿ.*

1) ಚೀನಾದ ರಾಜಕೀಯದ ಮೇಲೆ ಪಾಶ್ಚಾತ್ಯರ ಪ್ರಭಾವ

2) ಮತಾಂತರಗೊಂಡ ಚೀನಿಯರ ನಡವಳಿಕೆ

3) ಬಾಕ್ಸರ್ ಮತ್ತು ಟಾಂಗ್ ತ್ಸು ಹಿಯನ್ ನಡುವಿನ ಸಂಬಂಧಗಳು

*III ಕೆಳಗಿನವುಗಳಿಗೆ ಉತ್ತರಿಸಿ*

1) ಬಾಕ್ಸರ್ ದಂಗೆಯ ಸ್ವರೂಪವನ್ನು ಕುರಿತು ಬರೆಯಿರಿ.

2) ಬಾಕ್ಸರ್ ದಂಗೆಗೆ ಕಾರಣವಾದ ಅಂಶಗಳನ್ನು ಚರ್ಚಿಸಿರಿ.

3) ಬಾಕ್ಸರ್ ಒಪ್ಪಂದ ಷರತ್ತುಗಳನ್ನು ವಿವರಿಸಿ.

## 134.10 ಹೆಚ್ಚಿನ ಅಧ್ಯಯನಕ್ಕೆ ಆಕರಗಳು


1. Harison J. .n .A. : China since 1800 A.D.
2. Meadows .T.T. : The Chinese and their Rebellion
3. Clyde & Beers : The Far East

# ಟಿಪ್ಪಣಿಗಳು

# ಘಟಕ - 135

## ತೆರೆದ ಬಾಗಿಲ ನೀತಿ ಮತ್ತು ಅದರ ಪ್ರಭಾವ

135.0 ಧ್ಯೇಯೋದ್ದೇಶಗಳು

135.1 ಪೀಠಿಕೆ

135.2 ಅಮೆರಿಕಾದ ಹಿತಾಸಕ್ತಿ ಮತ್ತು 'ತೆರೆದ ಬಾಗಿಲು ನೀತಿಯ ಹಿನ್ನೆಲೆ

135.3 ಜಾನ್ ಹೇ ಪ್ರತಿಪಾದಿಸಿದ ತೆರೆದ ಬಾಗಿಲು ನೀತಿಯ ಸೂತ್ರ

135.4 ತೆರೆದ ಬಾಗಿಲ ನೀತಿಗೆ ಪಾಶ್ಚಾತ್ಯರ ಪ್ರತಿಕ್ರಿಯೆ

135.5 ಏಷ್ಯಾ ರಾಜಕಾರಣದಲ್ಲಿನ ಅಮೆರಿಕಾದ ಅವಶ್ಯಕತೆಗಳು ಮತ್ತು ಹಿತಾಸಕ್ತಿಗಳು

135.6 ತೆರೆದ ಬಾಗಿಲ ನೀತಿಯ ಕಾರ್ಯಾಚರಣೆ

135.7 ಅಂತರ ರಾಷ್ಟ್ರೀಯ ರಾಜಕೀಯದ ಮೇಲೆ ಅದರ ಪ್ರಭಾವ

135.8 ಒಟ್ಟಾರೆ ಸಾರಾಂಶ ನೀಡುವ ಬನ್ನಿ

135.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

135.10 ಹೆಚ್ಚಿನ ಅಧ್ಯಯನಕ್ಕೆ ಆಕರಗಳು

## 135.0 ಧ್ಯೇಯೋದ್ದೇಶಗಳು

ಈ ಯೂನಿಟ್‌ನಲ್ಲಿ ನಾವು ಅಧ್ಯಯನ ಮಾಡುವ ಮತ್ತು ತಿಳಿಯಲಿರುವ ವಿಚಾರಗಳೆಂದರೆ,ಚೀನಾದಲ್ಲಿ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಹೊಂದಿದ್ದು, ಪ್ರಭಾವಿ ವಲಯಗಳನ್ನು ಸ್ಥಾಪಿಸಿ ಚೀನಾವನ್ನು ಹರಿದು ಹಂಚಿಕೊಳ್ಳುವ ಹವಣಿಕೆಯಲ್ಲಿದ್ದ ಐರೋಪ್ಯ ರಾಷ್ಟ್ರಗಳ ನೀತಿಯನ್ನು ಅಭ್ಯಾಸ ಮಾಡುವಿರಿ. 19ನೇ ಶತಮಾನದ ಕೊನೆಯಂಚಿನಲ್ಲಿ ಚೀನಾದಲ್ಲಿನ ರಾಜಕೀಯ ಬಿಕ್ಕಟ್ಟಿನ ಸ್ಥಿತಿಯಲ್ಲಿದ್ದು, ಅಮೇರಿಕಾ ತನ್ನ ವ್ಯಾಪಾರಿ ಹಿತಾಸಕ್ತಿಯನ್ನು ಉಳಿಸಿಕೊಳ್ಳಲು ಏಷ್ಯಾದ ರಾಜಕೀಯದಲ್ಲಿ ಭಾಗವಹಿಸಿದುದನ್ನು ಮತ್ತು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾನ್ ಹೇ ರೂಪಿಸಿಜಾರಿಯಲ್ಲಿ ತಂದ ತೆರೆದ ಬಾಗಿಲ ನೀತಿಯನ್ನು, ನೀತಿಯ ತತ್ವಗಳಿಗೆ ಐರೋಪ್ಯ ರಾಷ್ಟ್ರಗಳ ಪ್ರತಿಕ್ರಿಯೆ ಮತ್ತು ಚೀನಾದಲ್ಲಿ ತೆರೆದ ಬಾಗಿಲ ನೀತಿಯ ಕಾರ್ಯಾಚರಣೆಯನ್ನು ನೀವು ಅಭ್ಯಾಸ ಮಾಡುವಿರಿ. ಅಲ್ಲದೆ ಅಂತರ ರಾಷ್ಟ್ರೀಯ ರಾಜಕೀಯದ ಮೇಲೆ ತೆರೆದ ಬಾಗಿಲ ನೀತಿಯ ಪ್ರಭಾವವನ್ನು ನೀವು ತಿಳಿಯುವಿರಿ. ನೀವು ಈ ಪಾಠವನ್ನು ಅಭ್ಯಾಸ ಮಾಡಿದ ನಂತರ ತಿಳಿಯಬಹುದಾದ ವಿವರಗಳೆಂದರೆ:

* ಚೀನಾದಲ್ಲಿ ವಿದೇಶಿಯರ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿ.
* ಚೀನಾದಲ್ಲಿ ರಿಯಾಯಿತಿಗಳಿಗಾಗಿ ಪಾಶ್ಚಿಮಾತ್ಯರ ಹುಡುಕಾಟ ಮತ್ತು ಸ್ಪರ್ಧೆ
* ಪಾಶ್ಚಾತ್ಯರು ಚೀನಾದಲ್ಲಿ ಪ್ರಭಾವಿವಲಯಗಳ ಸ್ಥಾಪನೆ.
* ವಿದೇಶಿಯರ ಚೀನಾವನ್ನು ಹರಿದು ಹಂಚಿಕೊಳ್ಳುವ ಹವಣಿಕೆ.
* ವಿದೇಶಾಂಗ ಕಾರ್ಯದರ್ಶಿ ಜಾನ್ ಹೇ ರೂಪಿಸಿದ ಸೂತ್ರ.
* ತೆರೆದ ಬಾಗಿಲ ನೀತಿಗೆ ಐರೋಪ್ಯರ ಪ್ರತಿಕ್ರಿಯೆ.
* ಏಷ್ಯಾ ರಾಜಕಾರಣದಲ್ಲಿ ಅಮೇರಿಕಾದ ಅವಶ್ಯಕತೆಗಳು ಮತ್ತು ಹಿತಾಸಕ್ತಿಗಳು.
* ತೆರೆದ ಬಾಗಿಲ ನೀತಿಯ ಕಾರ್ಯಾಚರಣೆ.
* ಅಂತರರಾಷ್ಟ್ರೀಯ ರಾಜಕೀಯದ ಮೇಲೆ ತೆರೆದ ಬಾಗಿಲ ನೀತಿಯ ಪ್ರಭಾವ.

## 135.1 ಪೀಠಿಕೆ

19ನೇ ಶತಮಾನದ ಕೊನೆಯ ವೇಳೆಗೆ ಚೀನಾ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿಯು ದುರ್ಬಲಗೊಂಡಿದ್ದ ಪ್ರಾಚೀನ ಕಾಲದಿಂದಲೂ ಸಾಂಪ್ರದಾಯಿಕ ಸಾಮ್ರಾಟ ಪ್ರಭುತ್ವ ಹೊಂದಿದ್ದ ಚೀನಾ ರಾಷ್ಟ್ರ ಪ್ರಭುತ್ವ, ಸಾಮಾನ್ಯ ದುರ್ಬಲ ಅಸ್ತಿತ್ವವಾಗಿ ಉಳಿದಿತ್ತು. ವ್ಯಾಪಾರಿ ಮತ್ತುರಾಜಕೀಯ ಹಿತಾಸಕ್ತಿಗಳನ್ನು ಬೆಳೆಯಿಸಿಕೊಂಡಿದ್ದ ಐರೋಪ್ಯರು ದುರ್ಬಲಗೊಂಡಿದ್ದ ಚೀನಾದ ಮೇಲೆ ಅಸಮ ಒಪ್ಪಂದಗಳನ್ನು ಹೇರಿ ರಿಯಾಯಿತಿಗಳನ್ನು ಮತ್ತು ಸವಲತ್ತುಗಳ್ಳನು ಪಡೆದುಕೊಂಡಿದ್ದರು. ದುರ್ಬಲಗೊಂಡಿದ್ದ ಚೀನಾ ತನ್ನ ಸಂಪನ್ಮೂಲಗಳನ್ನು ಸುಲಭವಾಗಿ ಪಾಶ್ಚಿಮಾತ್ಯರಿಗೆ ಒಪ್ಪಿಸಿತ್ತಲ್ಲದೆ, ರಾಜಕೀಯವಾಗಿಯೂ ಹಿಡಿತವನ್ನು ಕಳೆದು ಕೊಂಡಿತ್ತು. ವಿದೇಶಿಯರು ಚೀನಾದ ಆಂತರೀಕ ಪರಿಸ್ಥಿತಿಯ ಬಗ್ಗೆ ಸಹಾನುಭೂತಿಯಿಂದಿದ್ದರೂ, ಅದಕ್ಕೆ ಪೊಗದಿ ನೀಡುತ್ತಿದ್ದ ಸುತ್ತ ಮುತ್ತಲಿನ ಪ್ರದೇಶಗಳ ಮೇಲೆ ಪ್ರಾದೇಶಿಕ ಹಿಡಿತ ಸಾಧಿಸಲು ಮುಂದಾಗಿದ್ದವು. ವಸಾಹತು ಷಾಹಿ ಮತ್ತು ಸಾಮ್ರಾಜ್ಯ ಷಾಹಿ ಧೋರಣೆಗಳು ವಿಸ್ತರಿಸಿಕೊಂಡಿದ್ದು, ಆ ಪ್ರದೇಶಗಳ ಮೇಲೆ ಅಧಿಪತ್ಯ ಸಾಧಿಸುವ ಹವಣಿಕೆಯಲ್ಲಿದ್ದವು. ಚೀನಿ ಪ್ರಭುತ್ವದ ಅಸಮರ್ಥತೆ ಮತ್ತು ಸೈನಿಕ ದೌರ್ಬಲ್ಯಗಳನ್ನು ಬಳಸಿಕೊಂಡ ವಿದೇಶಿ ರಾಷ್ಟ್ರಗಳು ತಮ್ಮ ತಮ್ಮ ಬಲ ಪ್ರದರ್ಶನ ಮತ್ತು ಕುತಂತ್ರಗಳಿಂದ ಚೀನಾಕ್ಕೆ ಬೆದರಿಕೆ ಹಾಕಿ ಸೌಲಭ್ಯಗಳನ್ನು ಮತ್ತು ಪ್ರಾದೇಶಿಕ ಹಕ್ಕುಗಳನ್ನು ಪಡೆದುಕೊಂಡಿದ್ದವು. ಪಾಶ್ಚಿಮಾತ್ಯ ರಾಷ್ಟ್ರಗಳು ಯುದ್ಧಗಳಲ್ಲಿ ಚೀನಾವನ್ನು ಸೋಲಿಸಿ, ರಿಯಾಯಿತಿಗಳ ಜೊತೆಗೆ ಅಪಾರ ಯುದ್ಧ ನಷ್ಟ ಪರಿಹಾರ ಪಡೆಯುವ ಮೂಲಕ ಚೀನಾದ ಸ್ಥಿತಿ ಹದಗೆಟ್ಟಿತ್ತು. ಅಲ್ಲದೆ 1894-95 ಚೀನಾ-ಜಪಾನ್ ಯುದ್ಧ ಮತ್ತು ಷಿಮನೋಸಕಿ ಒಪ್ಪಂದ ಚೀನಾವನ್ನು ನೇರವಾಗಿ ವಿದೇಶಿಯರ ಅವಲಂಬಿತ ಸ್ಥಿತಿಗೆ ದೂಡಿತ್ತು. ಪರಿಣಾಮವಾಗಿ ಪರಿಸ್ಥಿತಿಯ ಅನುಕೂಲ ಪಡೆಯಲು ಮುಂದಾದ ವಿದೇಶಿಯರು ಪ್ರಭಾವಿ ವಲಯಗಳನ್ನು ರೂಪಿಸಿಕೊಂಡು ಆ ಪ್ರದೇಶಗಳಲ್ಲಿ ನೇರ ಆಳ್ವಿಕೆ ನಡೆಸುವ ಸಂಚಿನಲ್ಲಿದ್ದವು. ಐರೋಪ್ಯ ರಾಷ್ಟ್ರಗಳಾದ ಗ್ರೇಟ್ ಬ್ರಿಟನ್, ಯಾಂಗ್ಸಿ ಕಣಿವೆ ಪ್ರದೇಶದಲ್ಲೂ, ಫ್ರಾನ್ಸ್, ಕ್ವಾಂಗ್ಸಿ, ಕ್ವಾಂಗ್ ಟುಂಗ್ ಮತ್ತು ಯುನಾನ್ ಪ್ರಾಂತದಲ್ಲೂ, ಜರ್ಮನಿ ಷಾಂಟುಂಗ್ ಪ್ರದೇಶದಲ್ಲೂ, ರಷ್ಯಾ ಸಿಕಿಯಾಂಗ್, ಮಂಚೂರಿಯಾ ಮತ್ತು ಲಿಯೋತುಂಗ್ ಪರ್ಯಾಯ ದ್ವೀಪದ ಮೇಲೂ ಮತ್ತು ಏಷ್ಯಾ ಶಕ್ತಿಯಾದ ಜಪಾನ್ ಕೊರಿಯಾದಲ್ಲೂ ತಮ್ಮ ಹಿತಾಸಕ್ತಿಗಳನ್ನು

ಬೆಳೆಸಿಕೊಂಡಿದ್ದು ಆ ಪ್ರದೇಶಗಳಲ್ಲಿ ವಿಶೇಷ ಸವಲತ್ತುಗಳನ್ನು ಮತ್ತು ಗುತ್ತಿಗೆಗಳನ್ನು ಪಡೆದುಕೊಂಡಿದ್ದವು. ವಿದೇಶಿಯರು ಪಡೆದುಕೊಂಡಿದ್ದ ಸವಲತ್ತುಗಳನು ಮತ್ತು ಗುತ್ತಿಗೆಯ ರಿಯಾಯಿತಿಗಳನ್ನು ಬಳಸಿಕೊಂಡು ಚೀನಾವನ್ನು ವಿಭಜಿಸುವ ಹವಣಿಕೆಯಲ್ಲಿದ್ದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಮೇರಿಕಾ ತನ್ನ ತೆರೆದ ಬಾಗಿಲ ನೀತಿಯನ್ನು ಅನುಸರಿಸುವ ಮೂಲಕ ಚೀನಾದ ವಿಭಜನೆಗೆ ತಡೆ ಹಾಕಿತು.

## 135.2 ಅಮೇರಿಕಾದ ಹಿತಾಸಕ್ತಿಯ ಮತ್ತು ತೆರೆದ ಬಾಗಿಲ ನೀತಿಯ ಹಿನ್ನಲೆ

19ನೇ ಶತಮಾನದ ಆರಂಭದಲ್ಲಿ ವಿದೇಶಿಯರ ವ್ಯಾಪಾರಕ್ಕಾಗಿ ಚೀನಾದ ಬಾಗಿಲನ್ನು ತೆಗೆಸುವುದರಲ್ಲಿ ಅಮೇರಿಕಾ ಕೂಡ ಗಣನೀಯ ಪಾತ್ರ ವಹಿಸಿತ್ತು. 1860ರ ದಶಕದಲ್ಲಿ ಅಮೇರಿಕಾವು ಅಂತರ್ಯುದ್ಧದಲ್ಲಿ ಸಿಲುಕಿದ್ದು ಚೀನಾದಲ್ಲಿ ನೇರವಾಗಿ ಮತ್ತು ಪ್ರಭಾವಿಯುತವಾಗಿ ವ್ಯವಹರಿಸಲು ಸಾಧ್ಯವಾಗಿರಲಿಲ್ಲ. ಹಾಗೂ 1890ರ ದಶಕದಲ್ಲೂ ಕೂಡ ಚೀನಾ-ಜಪಾನ್ ಯುದ್ಧದ ನಂತರ ಐರೋಪ್ಯರು ಜಪಾನನ್ನು ಒಳಗೊಂಡಂತೆ ರಿಯಾಯಿತಿಗಳಿಗಾಗಿ ಚೀನಾದಲ್ಲಿ ಸ್ಪರ್ಧೆಗಳಿಗಿದ್ದು, ಅಮೇರಿಕಾ ಕರೀಬಿಯನ್ ರಾಜ್ಯದಲ್ಲಿ ಸ್ಪೈನಿನ ವಿರುದ್ಧ ಯುದ್ಧದಲ್ಲಿ ತೊಡಗಿದ್ದರಿಂದ ಚೀನಾದಲ್ಲಿನ ರಾಜಕಾರಣದಲ್ಲಿ ಆಸಕ್ತಿ ತೋರಿಸಲಿಲ್ಲ. ಆದರೆ 1898 ರಲ್ಲೂ ಸ್ಪೈನಿನೊಡನೆ ಯುದ್ಧ ಕೊನೆಗೊಂಡಿದ್ದ ಅಮೇರಿಕಾ ತಾನು ಕೂಡ ತನ್ನ ಸಿದ್ಧ ವಸ್ತುಗಳ ವಿತರಣೆಗಾಗಿ ಚೀನಾದ ಮಾರುಕಟ್ಟೆಗಳ ಕಡೆ ಗಮನ ಹರಿಸಿತು. ಸ್ಪೈನ್ ಮತ್ತು ಅಮೇರಿಕಾ ಯುದ್ಧದ ಕಾಲದಲ್ಲಿ ಅಮೇರಿಕಾ ಫಿಲಿಪೈನ್ಸ್ ದ್ವೀಪಗಳನ್ನು ವಶಪಡಿಸಿಕೊಂಡಿದ್ದರಿಂದ ದೂರ ಪ್ರಾಚ್ಯದಲ್ಲಿನ ಆಗು ಹೋಗುಗಳ ಬಗ್ಗೆ ಆಸಕ್ತಿವಹಿಸಿತು. ಆದರೆ ಆ ವೇಳೆಗಾಗಲೆ ಚೀನಾದಲ್ಲಿ ಐರೋಪ್ಯ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು ಹೊಂದಿದ್ದು, ಪ್ರಭಾವಿ ವಲಯಗಳನ್ನು ಸ್ಥಾಪಿಸಿಕೊಂಡಿದ್ದವು. ವ್ಯಾಪಾರದ ಅವಶ್ಯಕತೆಯ ಹಿನ್ನೆಲೆಯಲ್ಲಿ ಕೂಡ ಚೀನಾದಲ್ಲಿ ನೆಲೆಯಿಲ್ಲದ ಅಮೇರಿಕಾ ಶತಮಾನದ ಕೊನೆಯ ದಶಕದಲ್ಲಿನ ಚೀನಾದ ಬೆಳವಣಿಗೆಗಳಿಂದ ಆತಂಕಗೊಂಡು ಐರೋಪ್ಯ ಸಾಮ್ರಾಜ್ಯ ಷಾಹಿಗಳು ಚೀನಾವನ್ನು ಹರಿದು ಹಂಚಿಕೊಳ್ಳಲು ಮಾಡುತ್ತಿದ್ದ ಪ್ರಯತ್ನಗಳಿಂದ ಅಮೇರಿಕಾ ರಾಜಕಾರಣಿಗಳು ಕಳವಳಗೊಂಡಿದ್ದರು.

ಫಿಲಿಪೈನ್ಸ್ ದ್ವೀಪವನ್ನು ಅಮೇರಿಕಾ ವಶಪಡಿಸಿಕೊಂಡ ನಂತರ ಚೀನಾಕ್ಕೆ ಅದು ಭೌಗೋಳಿಕವಾಗಿ ಸಾಮೀಪ್ಯವು ಮತ್ತೆ ಹತ್ತಿರವಾಯಿತು. ವ್ಯಾಪಾರ ಮತ್ತು ವಾಣಿಜ್ಯ ಹಿತಾಸಕ್ತಿಗಳನ್ನು ಬೆಳೆಯಿಸಿಕೊಳ್ಳಲು ಮತ್ತು ಚೀನಾದಲ್ಲಿ ವಿದೇಶಿಯರ ವ್ಯವಹಾರಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿತು. ಆದರೆ ಈ ವೇಳೆಗಾಗಲೆ ಜಪಾನನ್ನು ಒಳಗೊಂಡಂತೆ ಐರೋಪ್ಯ ರಾಷ್ಟ್ರಗಳು ಚೀನಾದ ಆಯಕಟ್ಟಿನ ಪ್ರದೇಶಗಳನ್ನು ಹಿಡಿತದಲ್ಲಿಟ್ಟುಕೊಂಡು ತಮ್ಮದೆ ಆದ ಪ್ರಭಾವಿವಲಯಗಳನ್ನು ಸ್ಥಾಪಿಸಿಕೊಂಡಿದ್ದವು. ಹಾಗಾಗಿ ಇಂತಹ ಪರಿಸ್ಥಿತಿಯಲ್ಲಿ ಅಮೇರಿಕಾ ಚೀನಾದಲ್ಲಿ ಉಪಯುಕ್ತಕರ ವಲ್ಲದ ಪ್ರದೇಶದಲ್ಲಿ 'ಹಿತಾಸಕ್ತಿ ವಲಯ' ವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುವುದರಲ್ಲಿ ಅರ್ಥವಿಲ್ಲವೆಂದು ತೀರ್ಮಾನಿಸಿತು. ಆದರೆ ಚೀನಾದಲ್ಲಿನ ಪರಿಸ್ಥಿತಿ ಅಮೇರಿಕಾವನ್ನು ನಿರ್ಲಿಪ್ತವಾಗಿರುವ ಕೂಡ ಬಿಡಲಿಲ್ಲ. ಕಾರಣ ಅದು ಚೀನಾದಲ್ಲಿ ತನ್ನ ವ್ಯಾಪಾರದ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಪರಿಣಾಮಕಾರಿಯಾದ ನೂತನ ವಿಧಾನವನ್ನು ರೂಪಿಸಿತು. ಆ ವಿಧಾನವೇ 'ತೆರೆದ ಬಾಗಿಲು ನೀತಿ'.

## 135.3 ಜಾನ್ ಹೇ ಸೂತ್ರ (ಪ್ರತಿಪಾದಿಸಿದ ತೆರೆದ ಬಾಗಿಲ ನೀತಿ)

ಏಷ್ಯಾದ ಪೆಸಿಫಿಕ್ ಸಮುದ್ರದ ತೀರದಲ್ಲಿ ಅಮೇರಿಕಾ ತನ್ನ ನೆಲೆಗಳನ್ನು ಸ್ಥಾಪಿಸಲು ಹಲವು ಕಾರಣಗಳಿದ್ದವು. ಅಮೇರಿಕಾದ ಹಡಗುಗಳು ಬಿರುಗಾಳಿಗೆ ಸಿಕ್ಕಿ ಒಡೆದ ಹಡಗುಗಳಿಂದ ಪಾರಾಗಿ ಬಂದ ನಾವಿಕರು ಚೀನಾ ಜಪಾನ್ ಮತ್ತು ಸುತ್ತ ಮುತ್ತಲಿನ ತೀರ ಪ್ರದೇಶಗಳಲ್ಲಿ ನೆಲಸಬೇಕಾದ ಅನಿವಾರ್ಯತೆ ಇತ್ತು. ಏಷ್ಯಾದ ಪೂರ್ವ ತೀರದ ಬಂದರುಗಳೊಡನೆ ವ್ಯಾಪಾರ ಮಾಡುತ್ತಿದ್ದ ಅಮೇರಿಕಾದ ಹಡುಗಗಳಿಗೆ ಕಲ್ಲಿದ್ದಲು ಪೂರೈಕೆಗೂ ಮತತು ಸಂಗ್ರಹಣೆಗೂ ದ್ವೀಪಗಳ ಬಂದರು ಅವಶ್ಯಕವಾಗಿದ್ದವು. ಅಲ್ಲದೆ ಆನಂತರದಲ್ಲಿ ಚೀನಾದ ಸಂಪನ್ಮೂಲಗಳ ಅವಶ್ಯಕತೆ ಮತ್ತು ಅಮೇರಿಕಾದ ಸಿದ್ಧ ವಸ್ತುಗಳಿಗೆ ಚೀನಿಯ ಮಾರುಕಟ್ಟೆಯ ಅವಶ್ಯತೆಯದು. ಚೀನಾದಲ್ಲಿ ಅಮೇರಿಕಾ ಕೂಡ ತನ್ನ ಆಸಕ್ತಿಯನ್ನು ಬೆಳೆಯಿಸಿಕೊಂಡಿತ್ತು. ಆದರೆ ಐರೋಪ್ಯ ರಾಷ್ಟ್ರಗಳು ಚೀನಾದಲ್ಲಿ ಪ್ರಭಾವಿವಲಯ ಸ್ಥಾಪಿಸಿ, ಚೀನಾವನ್ನು ವಿಭಜಿಸುವ ಹಂತದಲ್ಲಿದ್ದಾಗ ಜಾನ್ ಹೇ ತೆರೆದ ಬಾಗಿಲ ನೀತಿಯ ಸೂತ್ರವನ್ನು ರೂಪಿಸಿದ್ದನು. ಚೀನಾದಲ್ಲಿ ಯೂರೋಪಿನ ಯಾವ ರಾಷ್ಟ್ರವು ವ್ಯಾಪಾರದ ಏಕಸ್ವಾಮ್ಯವನ್ನು ಹೊಂದಿರಕೂಡದೆಂಬುದು ಮತ್ತು ವ್ಯಾಪಾರಕ್ಕಾಗಿ ಚೀನಾದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳಿರಬೇಕೆಂಬುದು ಈ ನೀತಿಯ ಪ್ರಮುಖ ಉದ್ದೇಶವಾಗಿತ್ತು.

ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾನ್ ಹೇ ಎಂಬುವನು ಈ ನೀತಿಯ ಪ್ರತಿಪಾದಿಕನಾಗಿದ್ದನು. ಚೀನಾದಲ್ಲಿನ ವಿದೇಶಿಯರ ಹಿತಾಸಕ್ತಿಯನ್ನು ಹೊಂದಿದ್ದ ಪ್ರಭಾವಿವಲಯಗಳು ವಸಾಹತುಗಳಾಗಿ ಮಾರ್ಪಾಡಗದಂತೆ ತಡೆ ಗಟ್ಟುವುದು ಈ ನೀತಿಯ ಹಿನ್ನೆಲೆಯಾಗಿತ್ತು. ಜಾನ್ ಹೇ 1899ರ ಸೆಪ್ಟಂಬರ್ ಆರಂಭದಲ್ಲಿ ತನ್ನ ಪ್ರಸಿದ್ಧ 'ತೆರೆದ ಬಾಗಿಲ ನೀತಿ' ಯ ಸುತ್ತೋಲೆಯನ್ನು ಬ್ರಿಟನ್ ಜರ್ಮನಿ ಮತ್ತು ರಷ್ಯಕ್ಕೂ ಜಪಾನ್, ಇಟಲಿ ಮತ್ತು ಫ್ರಾನ್ಸಿಗೂ ಆಯಾಯ ರಾಷ್ಟ್ರಗಳ ಅಭಿಪ್ರಾಯಗಳನ್ನು ತಿಳಿಸಲು ಕಳುಹಿಸಿದ್ದನು.

ತೆರೆದ ಬಾಗಿಲ ನೀತಿಯನ್ನು ಯಾವುದೇ ಸ್ವ ಹಿತಾಸಕ್ತಿಯ ಹಿನ್ನಲೆಯಲ್ಲೂ ಸಮಚಿತ್ತತೆಯನ್ನು ಕಾಪಾಡಬೇಕಾಗಿದೆಯೆಂಬ ಧೋರಣೆ ಅವನದಾಗಿತ್ತು. ಆದರೆ ಐರೋಪ್ಯ ರಾಷ್ಟ್ರಗಳನ್ನು ಹಾಗು ಬೆಳೆಯುತ್ತಿದ್ದ ಜಪಾನನ್ನು ತಡೆ ಹಿಡಿಯುವುದು ಸುಲಭವಲ್ಲವೆಂದು ಅಮೇರಿಕಾಕ್ಕೆ ಮನವರಿಕೆಯಾಗಿತ್ತು. ಆದಾಗ್ಯೂ ಪೌರಾತ್ಯ ಭಾಗದಲ್ಲಿ ತನ್ನ ಹಿತಾಸಕ್ತಿಗಿಂತ ರಾಜಕೀಯ ಸಮ ಚಿತ್ತತೆಯ ಅವಶ್ಯಕತೆಯಿದ್ದದ್ದರಿಂದ ಅಮೇರಿಕಾ ಒಂದು ಹೆಜ್ಜೆ ಮುಂದಿಟ್ಟಿತು.

## 135.4 ತೆರೆದ ಬಾಗಿಲ ನೀತಿಗೆ ಪಾಶ್ಚಾತ್ಯರ ಪ್ರತಿಕ್ರಿಯೆ

ಮನ್ರೋವಿನ ಸೂತ್ರದಂತೆ ತೆರೆದ ಬಾಗಿಲ ನೀತಿಯನ್ನು ಮೊದಲು ಬ್ರಿಟನ್ನಿನ ವಿದೇಶಾಂಗ ಕಛೇರಿಯಲ್ಲಿ ಪರಿಚಯಿಸಿದ್ದು ಚೀನಾದಲ್ಲಿ ರಷ್ಯದ ಬೆಳವಣಿಗೆಯ ಬಗ್ಗೆ ಆತಂಕವೊಂದಿದ್ದು ಇಂಗ್ಲೆಡ್ ಅಮೇರಿಕಾದ ಜೊತೆಗೂಡಿ ತೆರೆದ ಬಾಗಿಲನ್ನು ಅನುಸರಿಸಲು ಆಲೋಚಿಸಿತ್ತು. 1899ರಲ್ಲಿ ತೆರೆದ ಬಾಗಿಲ ನೀತಿಯ ಸುತ್ತೋಲೆಯನ್ನು ಅಮೇರಿಕಾದ ರಾಯಭಾರಿಗಳ ಮೂಲಕ ಲಂಡನ್, ಪ್ಯಾರಿಸ್, ಬರ್ಲಿನ್ ಸೈಂಟ್ ಪೀಟರ್ಸ್‌ಬರ್ಗ್, ಟೋಕಿಯೊ ಮತ್ತು ರೋಮ್‌ಗಳಿಗೆ ತಲುಪಿಸಿ ನೀತಿಯ ಬಗೆ ಅಭಿಪ್ರಾಯಗಳನ್ನು ತಿಳಿಸಲು ಕೇಳಿದ್ದರು. ಆ ಸುತ್ತೋಲೆಯಲ್ಲಿ ಕೆಲವು ಅಂಸಗಳಿದ್ದವು.

a) ಚೀನಾದ ಭಾಗದಲ್ಲಿ ಯಾವುದೇ ರಾಷ್ಟ್ರ ಪ್ರಭಾವಿ ವಲಯಗಳನ್ನು ಸ್ಥಾಪಿಸಿಕೊಂಡಿದ್ದು ಒಪ್ಪಂದ ಬಂದರುಗಳಲ್ಲಿ ಹಿತಾಸಕ್ತಿಗಳನ್ನು ಬೆಳೆಸಿಕೊಡದೆ ಮತ್ತು ಮಧ್ಯಪ್ರವೇಶವನ್ನು ಮಾಡಕೂಡದೆಂದು.

b) ಯಾವುದೆ ರಾಷ್ಟ್ರಗಳು ಪ್ರಭಾವಿ ವಲಯಗಳನ್ನು ಬಳಸಿಕೊಂಡು ಬಂದರು ಸುಂಕವನ್ನಾಗಲಿ ಅಥವಾ ರೈಲ್ವೆ ಮಾರ್ಗಗಳ ತೆರೆಗೆಗಳನ್ನಾಗಿ ವಸೂಲಿ ಮಾಡುವಾಗ ತಾರತಮ್ಯ ಮಾಡಕೊಡದೆಂದು ತಿಳಿಸಲಾಗಿತ್ತು. ಅಂದರೆ ಒಟ್ಟಾರೆ ಚೀನಾದ ಮಾರುಕಟ್ಟೆಯಲ್ಲಿ ವಿದೇಶಿ ರಾಷ್ಟ್ರಗಳು ತೆರೆದ ಬಾಗಿಲು ನೀತಿಯನ್ನು ಅನುಸರಿಸುವ ಮೂಲಕ ಯಾವುದೇ ರೀತಿಯಾದ ಭೇದಭಾವವನ್ನು ಹೊಂದಿರಕೂಡದೆಂಬ ಉದ್ದೇಶವಾಗಿತ್ತು. ಆದರೆ ಗಣ ಉದ್ಯಮ, ರೈಲು ಮಾರ್ಗಗಳ ನಿರ್ಮಾಣದ ರಿಯಾಯಿತಿಗಳ ಬಗ್ಗೆ ಅವನು ಏನನ್ನು ಪ್ರಸ್ತಾಪಿಸಿರಲಿಲ್ಲ. ಚೀನಾದಲ್ಲಿ ಬಂಡವಾಳ ಹೂಡಿಕೆಯ ಬಗ್ಗೆ ಕೂಡ ಏನನ್ನು ತಿಳಿಸಿರಲಿಲ್ಲ ಅಂತೆಯೇ ಚೀನಾದ ಪ್ರಾದೇಶಿಕ ಭದ್ರತೆಯ ಪ್ರಶ್ನೆಯು ಸಾಮಾನ್ಯಾತ್ಮಕ ವಾಗಿದ್ದುದರಿಂದ ಅದರ ಗೋಜಿಗೆ ಹೋಗಿರಲಿಲ್ಲ.

ಜಾನ್ ಹೇ ಕಳುಹಿಸಿದ ಸುತ್ತೋಲೆಗೆ ಐರೋಪ್ಯ ರಾಷ್ಟ್ರಗಳು ಹೆಚ್ಚಿನ ಆಸಕ್ತಿ ವಹಿಸಿ ಪ್ರತಿಕ್ರಿಯಿಸಲಿಲ್ಲ ಮತ್ತು ಯಾವುದೇ ರೀತಿಯಾದ ಧೋರಣೆಯನ್ನು ವ್ಯಕ್ತ ಪಡಿಸಲಿಲ್ಲ ಹಾಗೂ ಪಾರಿಕೆಯಾದ ಉತ್ತರವನ್ನು ನೀಡಿದ್ದವು. ಗ್ರೇಟ್ ಬ್ರಿಟನ್ ಏಷ್ಯಾದಲ್ಲಿನ ಬಹು ಭಾಗದಲ್ಲಿ ಹಿತಾಸಕ್ತಿ ಹೊಂದಿದ್ದರಿಂದ ಹಾಗು ಸವಲತ್ತುಗಳ್ಳನು ಹೊಂದಿದ್ದ ಪ್ರಭುತ್ವವನ್ನು ಸಾಧಿಸಿದ್ದರಿಂದ, ಇತರೆ ರಾಷ್ಟ್ರಗಳ ನಡವಳಿಕೆಗೆ ಅನುಗುಣವಾಗಿ ಪರಿಣಮಿಸುವ ಷರತ್ತಿನೊಂದಿಗೆ ಒಪ್ಪಿಕೊಂಡಿತ್ತು. ಹಾಗು ಈ ನೀತಿಯನ್ನು ಕೌಲೂನ್ ಮತ್ತು ವೈ-ಹೈ-ವೈ ಗಳಿಗೆ ಅನ್ವಯಿಸಲು ಒಪ್ಪಿರಲಿಲ್ಲ. ಆದಾಗ್ಯೂ ತೆರೆದ ಬಾಗಿಲು, ತನ್ನ ವ್ಯಾಪಾರದ ಹಿತಾಸಕ್ತಿಗಳಿಗೆ, ಪೂರಕವಾಗಿದ್ದರಿಂದ ಒಪ್ಪಲು ತಾನು ಮುಂದೆ ಬಂದಿತ್ತು. ರಷ್ಯ ತೈಲನ್ನಿವಿನ್ನ (Tailenwin) ನ್ನು ತನ್ನ ಕಸ್ಟಮ್ಸ್ ಯೂನಿಯನ್‌ಗೆ ಸೇರಿಸಿಕೊಂಡಿದ್ದು, ತಾನು ಹೊಂದಿದ್ದ ಪೋರ್ಟ್‌ಆರ್ಥರ್ ನಲ್ಲಿ ಚೀನಾವನ್ನು ಉಳಿದು ಯಾವ ರಾಷ್ಟ್ರಗಳಿಗೆ ಅವಕಾಶ ನೀಡಲು ನಿರಾಕರಿಸಿತು. ವ್ಯಾಪಾರದ ಸಮಾನ ಅವಕಾಶದ ಅಭಿಪ್ರಾಯಕ್ಕೆ ಒಪ್ಪಿಗೆ ಕೊಡಲು ಸಹ ನಿರಾಕರಿಸಿತು. ಫ್ರಾನ್ಸ್, ಇಟಲಿ ಮತ್ತು ಜಪಾನ್ ರಾಷ್ಟ್ರಗಳು ಸಮಾಧಾನದ ಒಪ್ಪಿಗೆ ನೀಡಿದ್ದೆಯಾದರು ಹಾರಿಕೆಯ ಉತ್ತರ ಆದಾಗಿತ್ತು. 19ನೇ ಶತಮಾನದ ಪ್ರಾರಂಭದಲ್ಲಿ ಅಮೇರಿಕಾವನ್ನು ಒಳಗೊಂಡಂತೆ ಎಲ್ಲ ಐರೋಪ್ಯ ರಾಷ್ಟ್ರಗಳು ಚೀನಾವನ್ನು ವ್ಯಾಪಾರಕ್ಕೆ ಬಾಗಿಲು ವಿರುದ್ಧವಾದ ಅಭಿಪ್ರಾಯವನ್ನು ಹೊಂದಿದ್ದರು ಅಲ್ಲದೆ ಪ್ರತಿಭಟಿಸುವುದಕ್ಕೆ ಬದಲಾಗಿ ಜಾರಿಕೆಯ ಉತ್ತರ ನೀಡಿ ಉಪೇಕ್ಷಿಸಿದ್ದವು. ಆದ್ದರಿಂದ ಜಾನ್ ಹೇ 1900ರ ಮಾರ್ಚ್‌ನಲ್ಲಿ ಅಮೇರಿಕಾ ತೆರೆದ ಬಾಗಿಲ ನೀತಿಯ ಧೋರಣೆಗಳನ್ನು ಮತ್ತೊಮ್ಮೆ ಒತ್ತಿ ಹೇಳಿ ಪ್ರತಿಪಾದಿಸಿದನು.

## 135.5 ಏಷ್ಯಾದ ರಾಜಕಾರಣದಲ್ಲಿ ಅಮೇರಿಕಾದ ಅವಶ್ಯಕತೆಗಳು ಮತ್ತು ಹಿತಾಸಕ್ತಿಗಳು

ಈ ಮೊದಲೆ ತಿಳಿಸಿರುವಂತೆ ಐರೋಪ್ಯ ರಾಷ್ಟ್ರಗಳು ಚೀನಾದ ಆಯಾಕಟ್ಟಿನ ಪ್ರದೇಶಗಳಲ್ಲಿ ತಮ್ಮ ಹಿತಾಸಕ್ತಿ ವಲಯಗಳನ್ನು ಹೊಂದಿದ್ದು, ಕೇವಲ ಉಪಯೋಗಕ್ಕೆ ಬಾರದ ಪ್ರದೇಶಗಳಲ್ಲಿ ಹಿತಾಸಕ್ತಿ ಬೆಳೆಸುವ ಬದಲು ತನ್ನ ವ್ಯಾಪಾರ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಮುಂದಾಯಿತು. ಅದಕ್ಕಾಗಿ ಚೀನಾದಲ್ಲಿ ವಿದೇಶಿಯ ಹಿತಾಸಕ್ತಿ ವಲಯಗಳಿಗೆ ಕಡಿವಾಣ ಹಾಕುವ ಪರಯತನ ಮಾಡಿತು. ತೆರೆದ ಬಾಗಿಲ ನೀತಿಯನ್ನು ಅನುಸರಿಸುವಂತೆ ವಿದೇಶಿಯರನ್ನು ಒತ್ತಾಯಿಸಿತ್ತಲ್ಲದೆ ಎಲ್ಲ ವಿದೇಶಿಯರು ಪ್ರಭಾವಿವಲಯಗಳ ಮೇಲೆ ರಾಜಕೀಯ ಅಧಿಪತ್ಯವನ್ನು ಸಾಧಿಸಿದಂತೆ ನೋಡಿಕೊಂಡಿತು. ಚೀನಾದ ಮಾರು ಕಟ್ಟೆಯಲ್ಲಿ ಸಮಾನಾಂತರ ಅವಕಾಶಗಳನ್ನು ಒದಗಿಸುವ ಮೂಲಕ ಯಾವುದೆ ರಾಷ್ಟ್ರದ ಏಕಸ್ವಾಮ್ಯ ಅಧಿಪತ್ಯಕ್ಕೆ ಕೊನೆಹಾಡಿತು. ಅಮೇರಿಕಾ ತನ್ನ ಸಿದ್ಧ ವಸ್ತುಗಳಿಗೆ ಚೀನಾದ

ಮಾರುಕಟ್ಟೆಯನ್ನು ತೆರೆದಿಡುವಂತೆ ಮಾಡುವುದುರ ಮೂಲಕ ಒಟ್ಟಾರೆ ತನ್ನ ಆರ್ಥಿಕ ಹಿತಾಸಕ್ತಿಯನ್ನು ಉಳಿಸಿಕೊಳ್ಳುವಲ್ಲಿ ಸಫಲವಾಯಿತು. ಐರೋಪ್ಯ ರಾಷ್ಟ್ರಗಳು ತೆರೆದ ಬಾಗಿಲ ನೀತಿಯನ್ನು ಅನುಸರಿಸುವಲ್ಲಿ ಉತ್ಸುಕರಾಗಿರಲಿಲ್ಲ. ಆದರೆ ಅಮೇರಿಕಾವನ್ನು ವಿರೋಧಿಸುವ ಗೋಜಿಗೆ ಹೋಗಲಿಲ್ಲ. ಆದಾಗ್ಯೂ ಚೀನಾದಲ್ಲಿ ತಮ್ಮ ತಮ್ಮ ಹಿತಾಸಕ್ತಿಗಳನ್ನು ಒಂದಲ್ಲೊಂದು ರೀತಿಯಲ್ಲಿ ಬೆಳೆಯಿಸಿಕೊಂಡು ಒಂದು ಮತ್ತೊಂದರ ವಿರುದ್ಧ ಘರ್ಷಣೆಗೆ ಸಿದ್ದವಾದುವು.

## 135.6 ತೆರೆದ ಬಾಗಿಲ ನೀತಿಯ ಕಾರ್ಯಾಚರಣೆ

ರಷ್ಯವನ್ನು ಹೊರತುಪಡಿಸಿ ಮತ್ತೆಲ್ಲ ಐರೋಪ್ಯ ರಾಷ್ಟ್ರಗಳು ಮತ್ತು ಜಪಾನ್ ಕೂಡ ತತ್ವದ ತೆರೆದ ಬಾಗಿಲ ನೀತಿಯನ್ನು ಒಪ್ಪಿದ್ದವೆಯಾದರೂ ನೀತಿಯ ಸಿದ್ಧಾಂತವನ್ನು ಕಾರ್ಯಗತ ಮಾಡುವಲ್ಲಿ ಅಷ್ಟೇನು ಆಸಕ್ತಿಯನ್ನು ತೋರಿಸಲಿಲ್ಲ. ಚೀನಾದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ ಅಮೇರಿಕಾ ಮತ್ತೊಮ್ಮೆ ತನ್ನ ಧೋರಣೆಯನ್ನು ಪ್ರತಿಪಾದಿಸಿತಲ್ಲದೆ, ಸಾಧ್ಯವಾದ ಮಟ್ಟಕ್ಕೆ ಚೀನಾದಲ್ಲಿ ವಿದೇಶಿಯರನ್ನು ತಡೆ ಹಿಡಿಯುವ ಪ್ರಯತ್ನ ಮಾಡಿತು. ಒಂದಂತು ನಿಜ, ಚೀನಾ ವಿಭಜನೆಯ ದೊಡ್ಡ ಗಂಡಾಂತರವನ್ನು ಎದುರಿಸುತ್ತಿದ್ದು, ಐರೋಪ್ಯ ರಾಷ್ಟ್ರಗಳು ಪ್ರಭಾವಿ ವಲಯಗಳನ್ನು ತಮ್ಮ ಅಧಿಪತ್ಯ ಒಳಪಡಿಸಿಕೊಳ್ಳುವ ಸಾಹಸಕ್ಕೆ ಕೈ ಹಾಕಿದ್ದು, ಅಮೇರಿಕಾದ ತೆರೆದ ಬಾಗಿಲು ನೀತಿ ಚೀನಾದ ವಿಭಜನೆಯನ್ನು ಸದ್ಯದ ಗಂಡಾಂತರದಿಂದ ಪಾರು ಮಾಡಿತು. ಹಾಗಾಗಿ ಚೀನಾ ಐಕ್ಯತೆಯನ್ನು ಉಳಿಸುವಲ್ಲಿ ಅಮೇರಿಕಾ ಸಫಲವಾಯಿತು. ಮತ್ತು ವಿದೇಶಿ ರಾಷ್ಟ್ರಗಳು ಆಕ್ರಮಣಕಾರಿ ನೀತಿಯನ್ನು ಅನುಸರಿಸುವಲ್ಲಿ ತೊಡುಕುಂಟಾಯಿತು. ಆದಾಗ್ಯೂ ಯಾವುದೆ ರಾಷ್ಟ್ರವು ಸಹ ತೆರೆವ ಬಾಗಿಲ ನೀತಿಯನ್ನು ವಿರೋಧಿಸಲಿಲ್ಲವಾದರೂ ಪ್ರಾಮಾಣಿಕವಾಗಿ ಅನುಸರಿಸುವ ಪ್ರಯತ್ನ ಮಾಡಲಿಲ್ಲ. ಅದಕ್ಕೆ ಬದಲಾಗಿ ಚೀನಾದ ಮೇಲೆ ಒತ್ತಡ ಹೇರಿ ಹೆಚ್ಚಿನ ರಿಯಾಯಿತಿಗಳನ್ನು ಮತ್ತು ಸವಲತ್ತುಗಳನ್ನು ಪಡೆಯಲು ಯತ್ನಿಸಿದವು. ಅವರಲ್ಲೂ 100 ದಿವಸಗಳ ಸುಧಾರಣಾ ಪ್ರಯತ್ನ ಮಾಡಿಸೋತ ಚೀನಾ ಇದೆ ಸರಿ ಸುಮಾರಿನಲ್ಲಿ ಬಾಕ್ಸರ್ ದಂಗೆಗೆ ಬಲಿಯಾಯಿತು. ಮಂಚೂ ಪ್ರಭುತ್ವ ದಂಗೆಕೋರರ ಮೇಲಾಗಲಿ ಅಥವಾ ವಿದೇಶಿಯರ ಮೇಲಾಗಲಿ ಹಿಡಿತ ಸಾಧಿಸುವಲ್ಲಿ ವಿಫಲರಾದರೂ ಮತ್ತು ಬಾಕ್ಸರ್ ಒಪ್ಪಂದ ಮೂಲಕ ಹೆಚ್ಚಿನ ಯುದ್ಧ ನಷ್ಟ ಪರಿಹಾರವನ್ನು ಕೊಡುವುದರ ಜೊತೆ ಹಲವಾರು ರಿಯಾಯಿತಿಗಳನ್ನು ವಿದೇಶಿಯರಿಗೆ ನೀಡಿದವು. ಪರಿಣಾಮವಾಗಿ ತೆರೆದ ಬಾಗಿಲ ನೀತಿ ತತ್ವಷಹ ಜಾರಿಯಲ್ಲಿದ್ದರೂ, ವಿದೇಶಿಯರು ತಮ್ಮ ಹಿತಾಸಕ್ತಿಗಳ ಧೋರಣೆಯಲ್ಲಿ ಮುಂದುವರೆದಿದ್ದರೂ. ಆದಾಗ್ಯೂ ಜುಲೈ 1900 ರಲ್ಲಿ ಅಮೇರಿಕಾ ಚೀನಾದ ಆಡಳಿತಾತ್ಮಕ ಮತ್ತು ಪ್ರಾದೇಶಿಕ ಅಸ್ತಿತ್ವವನ್ನು ಉಳಿಸುವಲ್ಲಿ ಒಟ್ಟಾರೆ ಸಫಲವಾಯಿತೆಂದೆ ಹೇಳಬಹುದು. ಜಪಾನ್ ಅಮೇರಿಕಾದ ತೆರೆದ ಬಾಗಿಲ ನೀತಿಯನ್ನು ನಿರಾಕರಿಸಿದ್ದು, ತನ್ನ ಹಿತಾಸಕ್ತಿಗಳನ್ನು ಉಳಿಸಿಕೊಂಡು 1910 ರಲ್ಲಿ ಕೊರಿಯಾವನ್ನು ವಶಪಡಿಸಿಕೊಂಡಿತು. ಈ ಕ್ರಮವನ್ನು ಅಮೇರಿಕಾದ ತೆರೆದ ಬಾಗಿಲ ನೀತಿಯಾಗಲಿ ಅಥವಾ ಆಂಗ್ಲೋ ಜಪಾನಿಯರ ಮೈತ್ರಿ ಒಪ್ಪಂದವಾಗಲಿ ತಡೆಯುವ ಗೋಜಿಗೆ ಹೋಗಲಿಲ್ಲ.

## 135.7 ಅಂತರ ರಾಷ್ಟ್ರೀಯ ರಾಜಕೀಯದ ಮೇಲೆ ಅದರ ಪ್ರಭಾವ

ಅಮೇರಿಕಾದ ತೆರೆದ ಬಾಗಿಲ ನೀತಿಯ ನೇರ ಪ್ರಭಾವ ಚೀನಾದ ಪರವಾಗಿದ್ದು, ಚೀನಾ ಸದ್ಯದ ವಿಭಜನೆಯ ಗಂಡಾಂತರದಿಂದ ತಪ್ಪಿಸಿಕೊಂಡಿತು. ಐರೋಪ್ಯ ರಾಷ್ಟ್ರಗಳು ಸಹ ಚೀನಾದ ಅಸ್ತಿತ್ವವನ್ನು ಉಳಿಸುವಲ್ಲಿ ಆಸಕ್ತಿವಹಿಸಿ, ಹಿತಾಸಕ್ತಿಗಳನ್ನು ಉಳಿಸಿಕೊಳ್ಳಲು ತಮ್ಮ ತಮ್ಮಲೇ ಒಡಂಬಡಿಕೆ ಮಾಡಿಕೊಂಡವು. ಅಮೇರಿಕಾ ಪೌರತ್ಯ ಅಥವಾ ಏಷ್ಯಾದ ರಾಜಕಾರಣದಲ್ಲಿ ಆಸಕ್ತಿವಹಿಸಿ ತನ್ನ ಆರ್ಥಿಕ ಹಿತಾಸಕ್ತಿಗಳನ್ನು ಬೆಂಬಲಿಸಿಕೊಂಡಿತ್ತಲ್ಲದೆ, ರಾಜ ತಾಂತ್ರಿಕ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯ ಮತ್ತು ಸಮ ಚಿತ್ತತೆಯನ್ನು ಉಳಿಸುವ ಪ್ರಯತ್ನ ಮಾಡಿ ನಂತರ ಚೀನಾದಲ್ಲಿ ಶತಮಾನದ ಅಂಚಿನಲ್ಲಿ ಬಾಸ್ತನ ದಂಗೆ ನಡೆದಿದ್ದು ಮೊದಲಿಗೆ ಮಂಚೂ ಪ್ರಭುತ್ವದ ವಿರುದ್ಧ ಹೋರಾಟ. ಪ್ರಾರಂಭವಾಗಿದ್ದರೂ ನಂತರದಲ್ಲಿ ವಿದೇಶಿಯರ ವಿರುದ್ಧದ ಹಾಗು ಕ್ರೈಸ್ತ ಧರ್ಮದ ವಿರುದ್ಧ ತಿರುಗಿದಾಗ, ಮಂಚೂ ಪ್ರಭತ್ವ ದಂಗೆಕೋರರ ಜೊತೆ ಕೈಗೂಡಿಸಿತು. ಪರಿಣಾಮವಾಗಿ ವಿದೇಶಿ ಮಿತ್ರ ರಾಷ್ಟ್ರಗಳು ದಂಗೆಕೋರರನ್ನು ಅಡಗಿಸಲು ಯುದ್ಧ ಮಾಡಬೇಕಾಗಿ ಬಂದಿದ್ದು, ಅಮೇರಿಕಾ ಕೂಡ ಮಿತ್ರ ರಾಷ್ಟ್ರ ಸೈನ್ಯಕ್ಕೆ ತನ್ನ ತುಕಡಿಯನ್ನು ಕಳುಹಿಸುವುದರ ಮೂಲಕ ಚೀನಾದಲ್ಲಿ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ವಿದೇಶಿಯರ ಜೊತೆಗೂಡಿತು. ಒಟ್ಟಾರೆ ಅಮೇರಿಕಾದ ತೆರೆದ ಬಾಗಿಲ ನೀತಿ ಹಲವು ಅಂಸ ತತ್ವಗಳಿಂದ ಕೂಡಿದ್ದು ಇದು ಒಂದು ಘೋಷಿತ ನೀತಿಯಾಗಿರಲಿಲ್ಲ ಅಲ್ಲದೆ ಅಮೇರಿಕಾಕ್ಕೆ ಅದನ್ನು ಅನುಷ್ಠಾನಗೋಳಿಸಲು ಯಾವುದೇ ರೀತಿಯಾದ ಅಧಿಕಾರ ವಿರಲಿಲ್ಲ. ಆದರೂ ತೆರೆದ ಬಾಗಿಲ ನೀತಿ ಸಫಲವಾಯಿತು. ಕಾರಣ ಪಾಶ್ಚಾತ್ಯರು, ಒಬ್ಬರು ಮತ್ತೊಬ್ಬರನ್ನು ತಡೆಹಿಡಿದು ಹಿತಾಸಕ್ತಿಗಳನ್ನು ಉಳಿಸಿಕೊಳ್ಳಲು ಒಡಂಬಡಿಕೆಗಳನ್ನು ಮಾಡಿಕೊಂಡರು. ಪರಿಣಾಮವಾಗಿ ಚೀನಾದ ವಿಭಜನೆ ತಪ್ಪಿ, ರಾಷ್ಟ್ರೀಯ ಅಸ್ತಿತ್ವ ಉಳಿದುಕೊಂಡಿತು.

## 135.8 ಒಟ್ಟಾರೆ ಸಾರಾಂಶ ನೀಡುವ ಬನ್ನಿ

19 ನೇ ಶತಮಾನದ ಬೆಳವಣಿಗೆಗಳು ಚೀನಾವನ್ನು ಪೂರ್ಣಮಟ್ಟಕ್ಕೆ ದುರ್ಬಲ ಅಸ್ತಿತ್ವವನ್ನಾಗಿ ಮಾಡಿದಲ್ಲದೆ, ಐರೋಪ್ಯ ರಾಷ್ಟ್ರಗಳು ಅಸಮ ಒಪ್ಪಂದಗಳನ್ನು ಹೇರಿ ತಮಗೆ ಅನುಕೂಲವಾಗುವಂತಹ ರಿಯಾಯಿತಿಗಳನ್ನು ಮತ್ತು ಪ್ರಾದೇಶಿಕ ಸವಲತ್ತುಗಳನ್ನು ಹೊಂದಿದ್ದರು. ದುರ್ಬಲಗೊಂಡಿದ್ದ ಚೀನಾ ತನ್ನ ಸಂಪನ್ಮೂಲಗಳನ್ನು ಸುಲಭವಾಗಿ ಪಾಶ್ಚಿಮಾತ್ಯರಿಗೆ ಒಪ್ಪಿಸಿತಲ್ಲದೆ, ರಾಜಕೀಯವಾಗಿಯೂ ತನ್ನ ಹಿಡಿತವನ್ನು ಕಳೆದುಕೊಂಡಿತ್ತು. ವಿದೇಶಿಯರು ಚೀನಾದಲ್ಲಿನ ಆಂತರಿಕ ಪರಿಸ್ಥಿತಿಯ ಬಗ್ಗೆ ಸಹಾನುಭೂತಿಯಿಂದಿದ್ದರೂ, ಚೀನಾಕಕೆ ಪೊಗದಿ ನೀಡುತ್ತಿದ್ದ ಸುತ್ತ ಮುತ್ತಲಿನ ಭಾಗಗಳ ಪ್ರಾದೇಶಿಕ ಹಿಡಿತವನ್ನು ಸಾಧಿಸಲು ಮುಂದಾದರು ಪರಿಣಾಮವಾಗಿ ಚೀನಿ ಸರ್ಕಾರಕ್ಕೆ ಬರುತ್ತಿದ್ದ ರಾಜ್ಯ ದ್ಯಾಯ ಕಡಿಮೆಯಾಗಿದ್ದು, ವಸಾಹತುಷಾಹಿ ಮತ್ತು ಸಾಮ್ರಾಜ್ಯಷಾಹಿ ಧೋರಣೆಗಳು ಬೆಳೆದುಕೊಂಡಿದ್ದ ಕಾರಣ ಚೀನಾ ಸಾಲದ ಹೊರೆಯಲ್ಲಿ ನರಳುತ್ತಿತ್ತು. ಅಲ್ಲದೆ ಚೀನಿ ಪ್ರಭುತ್ವದ ಅಸಮರ್ಪಕತೆ ಮತ್ತು ದುರ್ಬಲತೆಯನ್ನು ಬಳಸಿಕೊಂಡಿದ್ದ ವಿದೇಶಿಯರು ಬಲಯುತವಾಗಿ ಷರತ್ತುಗಳನ್ನು ಹೇರಿ ಸೌಲಭ್ಯಗಳನ್ನು ಮತ್ತು ಹೆಚ್ಚಿನ ಪ್ರಾದೇಶಿಕ ಸವಲತ್ತುಗಳನ್ನು ಪಡೆದುಕೊಂಡಿದ್ದರು. ಈ ಸಂದರ್ಭದಲ್ಲಿ ಚೀನಾದ ಸ್ಥಿತಿ ತನಗಿಷ್ಟವಿಲ್ಲದಿದ್ದರೂ ಪಾಶ್ಚಿಮಾತ್ಯರು ವಿಚಾರಗಳನ್ನು ಮತ್ತು ವಸ್ತುಗಳನ್ನು ಒಪ್ಪಿಕೊಂಡಿದ್ದು, ಅದರಲ್ಲೂ ಚೀನಿ ಜಪಾನ್ ಯುದ್ಧದ ನಂತರ ಷಿಮನೋಸಕಿ ಒಪ್ಪಂದವನ್ನು ಒಪ್ಪಿದ ಚೀನಾ ರಾಜಕೀಯವಾಗಿ ವಿದೇಶಿಯರ ಕೈಗೊಂಬೆಯಾಗಿತ್ತು. ಯುದ್ಧದಲ್ಲಿ ಜಪಾನ್ ಚೀನಾದ ಲಿಯೋತುಂಗ್ ಪರ್ಯಾಯ ದ್ವೀಪವನ್ನು ಆಕ್ರಮಿಸಿಕೊಂಡಿದ್ದು, ಒಪ್ಪಂದದ ಪ್ರಕಾರ ಚೀನಾ ಈ ಪ್ರದೇಶವನ್ನು ಜಪಾನಿಗೆ ಬಿಟ್ಟು ಕೊಡಬೇಕಾಗಿತ್ತು. ಆದರೆ ರಷ್ಯಾದ ಜೊತೆಯಲ್ಲಿ ಫ್ರಾನ್ಸ್ ಮತ್ತು ಜರ್ಮನಿ ಸೇರಿದ ತ್ರಿರಾಷ್ಟ್ರಗಳ ಮಧ್ಯ ಪ್ರವೇಶದಿಂದಾಗಿ ಲಿಯೋತುಂಗ ಪರ್ಯಾಯ ದ್ವೀಪ ಚೀನಾಕ್ಕೆ ಉಳಿದುಕೊಂಡಿತ್ತು. ಹಾಗಾಗಿ 19 ನೇ ಶತಮಾನದ ಕೊನೆಯ ವೇಳೆಗೆ ಚೀನಾದ ಭಾಗಗಳಿಂದ ಯಾಂಗ್ಸೇಸ್ ಕಣಿವೆ ಬ್ರಿಟನ್ನಿನ ಹಿಡಿತದಲ್ಲೂ, ಕ್ವಾಂಗ್ಸಿ, ಕ್ವಾಂಗ್ ಟುಂಗ್ ಮತ್ತು ಯುನಾನ್ ಪ್ರಾಂತಗಳು ಫ್ರಾನ್ಸಿನ ಹಿಡಿತದಲ್ಲೂ, ಷಾಂಟುಂಗ್ ಪ್ರದೇಶ ಜರ್ಮನಿ ಹಿಡಿತದಲ್ಲೂ ಸಿಂಕೀಯಾಂಗ್. ಮಂಚೂರಿಯಾ ಮತ್ತು ಲಿಯೋತುಂಗ್ ಪ್ರದೇಶಗಳ ಮೇಲೆ ರಷ್ಯ ಮತ್ತು ಕೊರಿಯಾದ ಮೇಲೆ ಜಪಾನ್ ಹಿಡಿತ ಸಾಧಿಸಿದ್ದವು. ವಿದೇಶಿ ರಾಷ್ಟ್ರಗಳು ಪಡೆದುಕೊಂಡಿದ್ದು ವ್ಯಾಪಾರಿ ಸವಲತ್ತುಗಳು ಮತ್ತು ಪ್ರಾದೇಶಿಕ ಗುತ್ತಿಗೆ ರಿಯಾಯಿತಿಗಳನ್ನು ಬಳಸಿಕೊಂಡು ಚೀನಾವನ್ನು ವಿಭಜಿಸುವ ಹವಣಿಕೆಯಲ್ಲಿದ್ದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಮೇರಿಕಾ ತನ್ನ ತೆರೆದ ಬಾಗಿಲ ನೀತಿಯನ್ನು ಪರಿಚಯಿಸಿ, ಪಾಶ್ಚಿಮಾತ್ಯರನ್ನು ಅನುಸರಿಸುವಂತೆ ಮಾಡುವ ಮೂಲಕ ಚೀನಾ ವಿಭಜನೆಯು ಸದ್ಯದ ಗಂಡಾಂತರಗಿಂದ ಪಾರಾಯಿತು.

ಮೊದಲಿಗೆ ಚೀನಾದಲ್ಲಿ ವ್ಯಾಪಾರಿ ಸಂಪರ್ಕ ಸಾಧಿಸುವಲ್ಲಿ ಅಮೇರಿಕಾ ಕೂಡ ಭಾಗವಹಿಸಿದ್ದು, 1860 ರ ದಶಕದಲ್ಲಿನ ಸ್ಪೈನ್‌ನೊಡನೆ ಯುದ್ಧದಲ್ಲಿ ತೊಡಗಿಸಿಕೊಂಡಿದ್ದು, ಅಮೇರಿಕಾ ಏಷ್ಯಾದಲ್ಲಿನ ರಾಜಕಾರಣದಲ್ಲಿ ಹೆಚ್ಚಿನ ಆಸಕ್ತಿ ಹೊಂದಿರಲಿಲ್ಲ. ಆದರೆ ಸ್ಪೈನ್‌ನೊಡನೆ ಯುದ್ಧ ನಡೆಸಿ ಫಿಲಿಫೈನ್ಸ್‌ನ್ನು ವಶಪಡಿಸಿಕೊಂಡ ನಂತರ ಅಮೇರಿಕಾ ತಾನು ಕೂಡ ದೂರ ಪ್ರಾಂತ್ಯದಲ್ಲಿನ ಆಗುಹೋಗುಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿತು. ಆ ವೇಳೆಗಾಗಲೆ ಐರೋಪ್ಯ ರಾಷ್ಟ್ರಗಳು ಜಪಾನ್ ಸೇರಿದಂತೆ ಮುಖ್ಯವಾದ ಆಯಕಟ್ಟಿನ ಪ್ರದೇಶಗಳ ಮೇಲೆ ಹಿಡಿತ ಮತ್ತು ಪರೋಕ್ಷವಾಗಿ ಅಧಿಪತ್ಯ ಸಾಧಿಸಿದ್ದು ಅಮೇರಿಕಾ ಕೇವಲ ಉಪಯೋಗವಿಲ್ಲದ ಪ್ರದೇಶಗಳಲ್ಲಿ ತಾನು ಆಸಕ್ತಿ ವಹಿಸುವುದಕ್ಕೆ ಬದಲಾಗಿ ತನ್ನ ವ್ಯಾಪಾರಿ ಹಿತಾಸಕ್ತಿಗಳನ್ನು ಉಳಿಸಿಕೊಳ್ಳಲು ತೆರೆದ ಬಾಗಿಲ ನೀತಿಯನು ಅನುಸರಿಸಿತು. ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಜಾನ್ ಹೇ ಈ ನೀತಿಯ ಪ್ರತಿಪಾದಕರಾಗಿದ್ದು ಚೀನಾದಲ್ಲಿ ವಿದೇಶಿಯರು ಹಿಡಿತದಲ್ಲಿದ್ದ ಪ್ರಭಾವಿವಲಯಗಳ ವಸಾಹತುಗಳಾಗಿ ಮಾರ್ಪಾಡಾಗದಂತೆ ತಡೆಯುವುದು. ತೆರೆದ ಬಾಗಿಲ ನೀತಿಯ ಪ್ರಮುಖ ಉದ್ದೇಶವಾಗಿತ್ತು. 1899ರ ಸೆಪ್ಟಂಬರ್ 6 ರಂದು ಜಾನ್ ಹೇ ಸಿದ್ಧಪಡಿಸಿದ ಪ್ರಸಿದ್ಧ ತೆರೆದ ಬಾಗಿಲ ನೀತಿಯ ಸುತ್ತೋಲೆಯನ್ನು ಬ್ರಿಟನ್, ಜರ್ಮನಿ, ರಷ್ಯಾ, ಜಪಾನ್, ಇಟಲಿ ಮತ್ತು ಫ್ರಾನ್ಸಿಗೂ ಕಳುಹಿಸಿದ್ದು, ಅಭಿಪ್ರಾಯಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ತಿಳಿಸುವಂತೆ ಹೇಳಿದ್ದನು. ಸುತ್ತೋಲೆಯಲ್ಲಿ ಕೆಲವು ಅಂಶಗಳನ್ನು ಸೂಚಿಸಲಾಗಿದ್ದ, ಚೀನಾದ ಭಾಗದಲ್ಲಿನ ಪ್ರಭಾವಿವಲಯಗಳನ್ನು ಊರ್ಜಿತಗೊಳಿಸುವುದು, ಪ್ರತಿಯೊಂದು ಹಿತಾಸಕ್ತಿ ವಲಯದೊಳಗೆ ಎಲ್ಲರಿಗೂ ವ್ಯಾಪಾರದ ಸಮಾನ ಅವಕಾಶಗಳಿರಬೇಕೆಂದು ಒಪ್ಪಂದ ಬಂದರುಗಳಲ್ಲಿ ಯಾವ ರಾಷ್ಟ್ರವು ಪ್ರವೇಶಿಸಕೂಡದೆಂದು, ಸುಂಕದ ಆಡಳಿತದ ವಿಷಯದಲ್ಲಿ ತಲೆ ಹಾಕಬಾರದೆಂದು ರೈಲ್ವೆ ದರ-ಮತ್ತು ಬಂದರು ತೆರಿಗೆಗಳ ದರದಲ್ಲಿ ತಾರತಮ್ಯ ಮಾಡಕೂಡದೆಂದು ತಿಳಿಸಿದ್ದನು. ಆದರೆ ಚೀನಾದಲ್ಲಿ ಬಂಡವಾಳ ಹೂಡಿಕೆ ಮತ್ತು ಪ್ರಾದೇಶಿಕ ಭದ್ರತೆಯ ಬಗ್ಗೆ ಪ್ರಸ್ತಾಪ ಮಾಡಿರಲಿಲ್ಲ. ಜಾನ್ ಹೇ ಕಳುಹಿಸಿದ ಸುತ್ತೋಲೆಗೆ ಯಾವ ರಾಷ್ಟ್ರವು ತಕ್ಷಣ ಉತ್ತರಿಸಲಿಲ್ಲ. ರಷ್ಯಾ ವ್ಯಾಪಾರದ ಸಮಾನ ಅವಕಾಶದ ಅಭಿಪ್ರಾಯಕ್ಕೆ ಒಪ್ಪಿಗೆ ನೀಡಲು ನಿರಾಕರಿಸಿತು. ಮೊದಲಿಗೆ ಬ್ರಿಟನ್ ಈ ನೀತಿಯನ್ನು ಕೌಲೂನ್ ಮತ್ತು ವೈ-ಹೈ-ವೆಗಳಿಗೆ ಅನ್ವಯಿಸಲು ಒಪ್ಪಲಿಲ್ಲ. ತೆರೆದ ಬಾಗಿಲ ನೀತಿಯನ್ನು ರೂಪಿಸುವಲ್ಲಿ ಬ್ರಿಟನ್ ಕೂಡ ಭಾಗಿಯಾಗಿದ್ದ ಕಾರಣ ಬ್ರಿಟನ್ನಿನ ಒಪ್ಪಿಗೆಯು ಇತರ ರಾಷ್ಟ್ರಗಳ ಒಪ್ಪಿಗೆಯನ್ನು ಅವಲಂಬಿಸಿತ್ತು.

ರಷ್ಯವನ್ನು ಹೊರತು ಪಡಿಸಿ ಮಿಕ್ಕೆಲ್ಲ ಐರೋಪ್ಯ ರಾಷ್ಟ್ರಗಳು ಮತ್ತು ಜಪಾನ್ ಕೂಡ ತೆರೆದ ಬಾಗಿಲ ನೀತಿಯನ್ನು ಒಪ್ಪಿದೆಯಾದರೂ ನೀತಿಯನ್ನು ಕಾರ್ಯಗತ ಮಾಡುವಲ್ಲಿ ಯಾವ ರಾಷ್ಟ್ರವು ಕೂಡ ಹೆಚ್ಚಿನ ಆಸಕ್ತಿ ತೋರಿಸಲಿಲ್ಲ. ಅದಕ್ಕೆ ಬದಲಾಗಿ ಚೀನಾದ ಮೇಲೆ

ಒತ್ತಡ ಹೇರಿ ರಿಯಾಯಿತಿಗಳನ್ನು ಮತ್ತು ಸವಲತ್ತುಗಳನ್ನು ಮುಂದುವರೆಸಿದ್ದವು, ಜಪಾನ್ ಕೂಡ ತೆರೆದ ಬಾಗಿಲ ನೀತಿಯನ್ನು ನಿರಾಕರಿಸಿದ್ದು, ತನ್ನ ಹಿತಾಸಕ್ತಿಗಳನ್ನು ಮುಂದುವರೆಸಿಕೊಂಡು ಬಂದಿತ್ತು ಮತ್ತು 1910 ರಲ್ಲಿ ಕೊರಿಯಾವನ್ನು ವಶಪಡಿಸಿಕೊಂಡಿತು. ಅಮೇರಿಕಾದ ತೆರೆದ ಬಾಗಿಲ ನೀತಿಯ ನೇರ ಪ್ರಭಾವ ಚೀನಾದ ಪರವಾಗಿದ್ದು, ಈ ನೀತಿಯಿಂದಾಗಿ ಚೀನಾ ಸದ್ಯದ ವಿಭಜನೆಯ ಗಂಡಾಂತರದಿಂದ ಪಾರಾಯಿತು. ಐರೋಪ್ಯ ರಾಷ್ಟ್ರಗಳು ಸಹ ಚೀನಾದ ರಾಜಕೀಯ ಅಸ್ತಿತ್ವವನ್ನು ಉಳಿಸಿ, ತಮ್ಮ ವ್ಯಾಪಾರಿ ಆಸಕ್ತಿಗಳನ್ನು ಬೆಳೆಸಿಕೊಳ್ಳಲು ಒಡಂಬಡಿಕೆ ಮಾಡಿಕೊಂಡವು. ಏಷ್ಯಾದ ರಾಜಕಾರಣದಲ್ಲಿ ನೇರವಾಗಿ ಆಸಕ್ತಿವಹಿಸಿದ ಅಮೇರಿಕಾ ತನ್ನ ಹಿತಾಸಕ್ತಿಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ರಾಜ ತಾಂತ್ರಿಕ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯ ಮತ್ತು ಸಮಚಿತ್ತತೆಯನ್ನು ಉಳಿಸುವ ಪ್ರಯತ್ನಮಾಡಿತು. ಒಟ್ಟಾರೆ ಅಮೇರಿಕಾದ ತೆರೆದ ಬಾಗಿಲ ನೀತಿ ಏಷ್ಯಾದ ಭಾಗದಲ್ಲಿ ತತ್ಕ್ಷಣ ಫಲ ಕಂಡರು, ಕೇವಲ ಘೋಷಿತ ಅಂಶಗಳಿಂದ ಕೂಡಿದ ಈ ನೀತಿ ಅನುಷ್ಠಾನಗೊಳಿಸುವ ಯಾವ ಅಧಿಕಾರವನ್ನು ಅಮೇರಿಕಾ ಹೊಂದಿಲ್ಲದ ಕಾರಣ ಹೆಚ್ಚು ಪರಿಣಾಮಕಾರಿಯಾಗಲಿಲ್ಲ.

## 135.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

***I) ಕೆಳಗಿನವುಗಳಿಗೆ 6 ಸಾಲುಗಳಿಗೆ ಮೀರದಂತೆ ಉತ್ತರಿಸಿ.***

a) ಜಾನ್ ಹೇ ಸಿದ್ಧಾಂತ.

b) ತೆರೆದ ಬಾಗಿಲ ನೀತಿಗೆ ರಷ್ಯಾದ ಪ್ರತಿಕ್ರಿಯೆ.

c) ತೆರೆದ ಬಾಗಿಲ ನೀತಿಯ ಪರಿಣಾಮ.

***II) ಕೆಳಗಿನವುಗಳಿಗೆ ಟಿಪ್ಪಣಿ ಬರೆಯಿರಿ.***

1) ತೆರೆದ ಬಾಗಿಲ ನೀತಿಯ ಉದ್ದೇಶಗಳನ್ನು ವಿವರಿಸಿ.

2) ತೆರೆದ ಬಾಗಿಲ ನೀತಿಯ ಪ್ರಮುಖ ಅಂಶಗಳನ್ನು ಚರ್ಚಿಸಿರಿ.

***III) ಕೆಳಗಿನವುಗಳನ್ನು ಉತ್ತರಿಸಿ.***

a) ಅಮೇರಿಕಾ ತೆರೆದ ಬಾಗಿಲ ನೀತಿಯನ್ನು ಪ್ರತಿಪಾದಿಸಿ ಜಾರಿಯಲ್ಲಿ ತೆರಲು ಕಾರಣವಾದ ಅಂಶಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರಿ.

b) ಅಮೇರಿಕಾದ ತೆರೆದ ಬಾಗಿಲ ನೀತಿಯಿಂದ ಚೀನಾದ ರಾಜಕೀಯದ ಮೇಲೆ ಆದ ಪರಿಣಾಮಗಳನ್ನು ವಿವರಿಸಿ.

## 135.10 ಹೆಚ್ಚಿನ ಅಧ್ಯಯನಕ್ಕೆ ಆಕರಗಳು


1) S.L. Roy : Short History of the Far East.

2) R.S. Gupta : History of Modern China.

3) Immanuel. C.Y. Hsv : The Rise of Modern China.

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


STUDENT
INSTRUCTIONAL SYSTEM